ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 23 ಶನಿವಾರ 2025

ಮೈಸೂರು ಮಿತ್ರ 46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 127 | ಪುಟಗಳು: 12
ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com

₹4

ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕೃತ ಘೋಷಣೆ

ಸೆ.22 ರಂದು ಚಾಮುಂಡಿಬೆಟ್ಟದಲ್ಲಿ ಅಗ್ರಪೂಜೆಯೊಂದಿಗೆ ದಸರಾ ಉದ್ಘಾಟನೆ; ಅ.2ಕ್ಕೆ ಜಂಬೂ ಸವಾರಿ

ಮೈಸೂರು ದಸರಾ

ಬೆಂಗಳೂರು, ಆ. 22(ಕೆಎಂಶಿ)– ಈ ಬಾರಿಯ ಮೈಸೂರು ದಸರಾ ಮಹೋತ್ಸವ ಉದ್ಘಾಟನೆಯನ್ನು ಬೂಕರ್ ಪ್ರಶಸ್ತಿ ವಿಜೇತರಾದ ಸಾಹಿತಿ, ಹಾಸನ ಮೂಲದ ಬಾನು ಮುಷ್ತಾಕ್ ನೆರವೇರಿಸಲಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಅವರ 'ಎದೆಯ ಹಣತೆ' (ಹಾರ್ಟ್ ಲ್ಯಾಂಪ್) ಕೃತಿಗೆ ಬೂಕರ್ ಪ್ರಶಸ್ತಿ ಲಭಿಸಿದೆ. ಕನ್ನಡಿಗರೊಬ್ಬರಿಗೆ ಈ ಪ್ರಶಸ್ತಿ ಬಂದಿರುವುದು ಸಂತಸದ ಸಂಗತಿ ಯಾಗಿದೆ ಎಂದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾನು ಮುಷ್ತಾಕ್ ಅವರೊಂದಿಗೆ ಈ ಕುರಿತು ಚರ್ಚಿಸಿದ್ದು, ಅವರಿಗೆ ಸಂಪ್ರದಾಯದಂತೆ ಜಿಲ್ಲಾಡಳಿತ ಆಹ್ವಾನ ನೀಡಲಿದೆ ಎಂದರು.

ಕರ್ನಾಟಕದ ಮಹಿಳೆಯೊಬ್ಬರಿಗೆ ಬೂಕರ್ ಪ್ರಶಸ್ತಿ ದೊರೆತಿರುವುದು ಹೆಮ್ಮೆ ವಿಷಯ. ಬಾನು ಮುಷ್ತಾಕ್ ರೈತ ಸಂಘ, ಕನ್ನಡ ಪರ ಚಳವಳಿಗಳಲ್ಲಿ ಭಾಗವಹಿಸಿದ್ದು, ಪ್ರಗತಿ ಪರ ಚಿಂತನೆ ಉಳ್ಳವರು. ಇಂತಹ ಮಹಿಳೆಯಿಂದ ನಾವು ಈ ಬಾರಿಯ ದಸರಾ ಉದ್ಘಾಟನೆ ಮಾಡಿಸುತ್ತಿದ್ದೇವೆ.


ಬಾನು ಮುಷ್ತಾಕ್

ಸೆಪ್ಟೆಂಬರ್ 22 ರಂದು ಚಾಮುಂಡಿ ಬೆಟ್ಟದಲ್ಲಿ ಅಗ್ರ ಪೂಜೆ ಸಲ್ಲಿಸುವ ಮೂಲಕ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಈ ಬಾರಿ ದಸರಾ ಮಹೋತ್ಸವ 10 ದಿನಗಳಿಗೆ ಬದಲಾಗಿ ಪಂಚಾಂಗ ಪ್ರಕಾರ 11 ದಿನ ಜರುಗಲಿದೆ, ಅಕ್ಟೋಬರ್ 2ರಂದು ವಿಜಯ ದಶಮಿ ಆಚರಣೆ ಮೂಲಕ ■ 6ನೇ ಪುಟಕ್ಕೆ

ತುಂಬಾ ಖುಷಿಯಾಗಿದೆ...

ವಿದೇಶದಿಂದ 'ಮೈಸೂರು ಮಿತ್ರ'ನಲ್ಲಿ ಸಂಭ್ರಮ ಹಂಚಿಕೊಂಡ ಬಾನು ಮುಷ್ತಾಕ್

ಮೈಸೂರು, ಆ.22– ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಉದ್ಘಾಟನೆಗೆ ನನ್ನನ್ನು ಆಯ್ಕೆ ಮಾಡಿರುವುದಕ್ಕೆ ತುಂಬಾ ಖುಷಿಯಾಗಿದೆ ಎಂದು ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಸಂತಸ ವ್ಯಕ್ತಪಡಿಸಿದ್ದಾರೆ.

ಸದ್ಯ ವಿದೇಶದಲ್ಲಿರುವ ಅವರು 'ಮೈಸೂರು ಮಿತ್ರ'ನೊಂದಿಗೆ ದೂರವಾಣಿಯಲ್ಲಿ ಮಾತನಾಡಿ, ಮೈಸೂರು ದಸರಾ ಉದ್ಘಾಟನೆಗೆ ನನ್ನನ್ನು ಆಯ್ಕೆ ಮಾಡಿರುವುದನ್ನು ಮಾಧ್ಯಮಗಳಲ್ಲಿ ನೋಡಿದೆ. ಹಲವರು ಕರೆ ಮಾಡಿ, ಸಂದೇಶ ಕಳುಹಿಸುವ ಮೂಲಕ ಅಭಿನಂದನೆ ತಿಳಿಸಿದರು. ಮೈಸೂರು ಜಿಲ್ಲಾಧಿಕಾರಿಗಳೂ ನನ್ನನ್ನು ಸಂಪರ್ಕಿಸಿ ವಿಷಯ ತಿಳಿಸಿದರು. ರಾಜ್ಯ ಸರ್ಕಾರವು ನಾಡಿನ ಬಹುದೊಡ್ಡ ಉತ್ಸವವಾದ ದಸರಾ ಉದ್ಘಾಟನೆಗೆ ಅವಕಾಶ ಕಲ್ಪಿತವಾಗಿದ್ದಕ್ಕೆ ತುಂಬಾ ಖುಷಿಯಾಗಿದೆ ಎಂದರು.

ನನ್ನ ಹೋರಾಟ, ಸಾಹಿತ್ಯ ಕೃಷಿಯ ಬಗ್ಗೆ ಮುಖ್ಯಮಂತ್ರಿಗಳು ಪ್ರಸ್ತಾಪಿಸಿದ್ದನ್ನು ಗಮನಿಸಿದೆ. ನನ್ನ ಬದುಕಿನ ಪ್ರಮುಖ ಅಂಶಗಳನ್ನು ಗುರುತಿಸಿದ್ದಾರೆ. ಎಲ್ಲರನ್ನೂ ಒಳಗೊಳ್ಳುವ ದೊಡ್ಡ ಹಬ್ಬ ದಸರಾ ಉದ್ಘಾಟಿಸುವ ಅವಕಾಶ ಸಿಕ್ಕಿರುವುದು ನನ್ನ ಕನ್ನಡ ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ಒಡನಾಟಕ್ಕೆ ಸಂದ ಗೌರವವಾಗಿದೆ. ರಾಜ್ಯದ ಜನರ ಪ್ರೀತಿ–ಅಭಿಮಾನದ ದ್ಯೋತಕವಾಗಿ ಈ ಅವಕಾಶ ಸಂದಿದೆ ಎಂದು ನುಡಿದರು.

ಬಾಲ್ಯದಲ್ಲಿ ದಸರಾ ನೋಡಿದ್ದೆ: ಬಾಲ್ಯದಲ್ಲಿ ನಾನು ತಂದೆ–ತಾಯಿಯೊಂದಿಗೆ ಮೈಸೂರು ದಸರಾ ನೋಡಲು ಬಂದಿದ್ದೆ. ಆಗ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಅಂಬಾರಿಯಲ್ಲಿ ಮೆರವಣಿಗೆಯಲ್ಲಿ ಸಾಗಿದ್ದನ್ನು ■ 6ನೇ ಪುಟಕ್ಕೆ

ಅನನ್ಯ ಭಟ್ ನಾಪತ್ತೆ ಪ್ರಕರಣ ಒಂದು ಕಟ್ಟುಕತೆ ಎಂದ ಕೆಲವೇ ಗಂಟೆಯಲ್ಲಿ ಸುಜಾತ ಭಟ್ ಯೂಟರ್ನ್

- ಯೂ ಟ್ಯೂಬರ್ ಬಲವಂತವಾಗಿ ಹೇಳಿಕೆ ಪಡೆದ ಆರೋಪ
- ಅನನ್ಯ ಭಟ್ ನನ್ನ ಮಗಳು; ಎಸ್ಐಟಿ ಮುಂದೆ ಸಾಬೀತು ಮಾಡ್ತೇನೆ

ಬೆಂಗಳೂರು, ಆ.22–ಅನನ್ಯ ಭಟ್ ನಾಪತ್ತೆ ಪ್ರಕರಣ ಕಟ್ಟುಕತೆ ಎಂದು 'ಇನ್‌ಸೈಟ್ ರಶ್' ಯು–ಟ್ಯೂಬ್ ಚಾನೆಲ್‌ಗೆ ಸಂದರ್ಶನ ನೀಡಿದ್ದ ಸುಜಾತ ಭಟ್, ಈ ಸಂದರ್ಶನ ವೈರಲ್ ಆಗುತ್ತಿದ್ದಂತೆಯೇ ಉಲ್ಟಾ ಹೊಡೆದಿದ್ದಾರೆ.


ಸುಜಾತ್ ಭಟ್

ಶುಕ್ರವಾರ ರಾತ್ರಿ ಬೆಂಗಳೂರಿನ ತಮ್ಮ ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅನನ್ಯ ಭಟ್ ನಾಪತ್ತೆ ಪ್ರಕರಣ ಕಟ್ಟುಕತೆ ಎಂದು ಹೇಳುವಂತೆ ಯೂಟ್ಯೂಬ್ ಚಾನಲ್‌ನವರು ■ 6ನೇ ಪುಟಕ್ಕೆ

ಸುಜಾತ ಭಟ್ ಮಾತು ನಂಬಿ ಮೋಸ ಹೋಗಿದ್ದೇವೆ

ಮಂಗಳೂರು, ಆ.22– ಧರ್ಮಸ್ಥಳ ಗ್ರಾಮದಲ್ಲಿ 2003ರಲ್ಲಿ ನನ್ನ ಮಗಳು ಅನನ್ಯಾ ಭಟ್ ನಾಪತ್ತೆಯಾಗಿದ್ದಾಳೆ ಎಂದು ಸುಜಾತ ಭಟ್ ದೂರು ನೀಡಿದ್ದರು. ಅಲ್ಲದೆ ಇದೇ ವಿಚಾರವಾಗಿ ಹಲವು ಮಾಧ್ಯಮಗಳಲ್ಲಿ ಅಲವತ್ತು ಕೊಂಡಿದ್ದರು. ಕೆಲವು ಸುಜಾತ ಭಟ್ ಸುಳ್ಳು ಆರೋಪ ■ 6ನೇ ಪುಟಕ್ಕೆ


ಜಯಂತ್

ವಿಧಾನಸಭೆಯಲ್ಲಿ ಆರ್‌ಎಸ್‌ಎಸ್ ಪ್ರಾರ್ಥನಾ ಗೀತೆ ಹಾಡಿ ಬಿಜೆಪಿಗರ ಬೆಚ್ಚಿಬೀಳಿಸಿದ ಅಪ್ಪಟ ಕಾಂಗ್ರೆಸ್ಸಿಗ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್!

ಬೆಂಗಳೂರು, ಆ. 22(ಕೆಎಂಶಿ)– ವಿಧಾಸಭೆಯಲ್ಲಿ ಆರ್‌ಎಸ್‌ಎಸ್ ಪ್ರಾರ್ಥನಾ ಗೀತೆ ಹಾಡುವ ಮೂಲಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಿಜೆಪಿ ಜೊತೆ ಕೈಜೋಡಿಸುವ ಚರ್ಚೆಗೆ ಮತ್ತಷ್ಟು ಇಂಬು ಕೊಟ್ಟಂತಾಗಿದೆ.

ಆರ್‌ಸಿಬಿ ವಿಜಯೋತ್ಸವ ವೇಳೆ ಸಂಭವಿಸಿದ ಕಾಲ್ತುಳಿತ ದುರಂತ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು, ತಾವು ಅಂದು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದನ್ನು ಸಮರ್ಥಿಸಿಕೊಂಡರು.

ಬಿಜೆಪಿಯ ಟೀಕೆಗಳಿಗೆ ನೇರವಾಗಿ ಉತ್ತರಿಸಿ, ನಾನು ಜೆಡಿಎಸ್, ಬಿಜೆಪಿ, ಆರ್‌ಎಸ್‌ಎಸ್ ಎಲ್ಲದರ ಇತಿಹಾಸ ತಿಳಿಸಿದ್ದೇನೆ ಎಂದರು. ಈ ಸಂದರ್ಭದಲ್ಲಿ ಪ್ರತಿಪಕ್ಷ ನಾಯಕ ಆರ್.ಅಶೋಕ್, ನೀವು ಆರ್‌ಎಸ್‌ಎಸ್ ಚಡ್ಡಿ ಹಾಕಿದ್ದಾಗಿ ಹೇಳಿಕೊಂಡಿದ್ದೀರಿ ಎಂದಾಗ, ಏಕಾಏಕಿ ಆರ್‌ಎಸ್‌ಎಸ್ ಪ್ರಾರ್ಥನಾ ಗೀತೆಯನ್ನು ಹಾಡಿ ಬಿಜೆಪಿ ಸದಸ್ಯರನ್ನೇ ಬೆಚ್ಚಿ ಬೀಳಿಸಿದರು.



ನಿಮ್ಮ ರೀತಿ ಒಂದೇ ವಿಚಾರಕ್ಕೆ ಸೀಮಿತಗೊಂಡಿಲ್ಲ. ನಾನು. ಎಲ್ಲ ಸಿದ್ಧಾಂತಗಳನ್ನು ಅರಿತಿದ್ದೇನೆ. ಆರ್‌ಎಸ್‌ಎಸ್ ಪ್ರಾರ್ಥನೆಯೂ ತಿಳಿದಿದೆ. ಹಾಗೆಂದು ನಾನೇನು ನಿಮ್ಮ (ಬಿಜೆಪಿ) ಕದ ತಟ್ಟಿಲ್ಲ. ನಾನು ಅಪ್ಪಟ ಕಾಂಗ್ರೆಸ್ಸಿಗ, ಹುಟ್ಟಿನಿಂದ ಕಾಂಗ್ರೆಸ್ಸಿಗ, ಜೀವ ಇರುವವರೆಗೂ ಅದೇ ಸಿದ್ಧಾಂತದಲ್ಲಿ ಇರುತ್ತೇನೆ. ನನ್ನ ರಕ್ತದಲ್ಲೂ ಅದೇ ಹರಿಯುತ್ತಿದೆ. ಪಕ್ಷವನ್ನು ಪ್ರಸ್ತುತ ಮುನ್ನಡೆಸುತ್ತಿದ್ದೇನೆ. ಇದಕ್ಕೆ ಆಧಾರ ಸ್ತಂಭವಾಗಿ ನಿಲ್ಲುತ್ತೇನೆ ಎಂದರು. ■ 6ನೇ ಪುಟಕ್ಕೆ

ಎಂಡಿಎ ನಿವೇಶನಗಳ ಹರಾಜು ದಾಖಲೆ

75 ನಿವೇಶನಗಳು 100 ಕೋಟಿಗೆ ಬಿಡ್

- ಹರಾಜಿಗೆ ಬಾಕಿ ಇರುವ 125 ನಿವೇಶನಗಳು
- ಪೈಪೋಟಿಗಿಳಿದು ಖರೀದಿಸಿದ ಸಾರ್ವಜನಿಕರು
- ಮುಡಾ ಹಗರಣ ಲೆಕ್ಕಿಸದೇ ನಿವೇಶನಗಳ ಖರೀದಿ

ಮೈಸೂರು, ಆ.22(ಬಿಎಲ್‌ಯು)– ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಡೆಯುತ್ತಿರುವ ನಿವೇಶನಗಳ ಹರಾಜಿನಲ್ಲಿ ಸಿಲಿಕಾನ್ ಸಿಟಿ ಬೆಂಗಳೂರು ಮೀರಿಸುವಂತೆ ದಾಖಲೆ ಪ್ರಮಾಣದಲ್ಲಿ ನಿವೇಶನಗಳ ಹರಾಜು ನಡೆದಿದ್ದು, ಪ್ರಾಧಿಕಾರಕ್ಕೆ 100 ಕೋಟಿ ರೂಪಾಯಿ ಆದಾಯ ಬಂದಿದೆ. ಸಾವಿರಾರು ಕೋಟಿ ರೂಪಾಯಿ ಹಗರಣದ ಆರೋಪ ವಿದ್ದರೂ ಮುಡಾ (ಈಗಿನ ಎಂಡಿಎ– ಮೈಸೂರು ಅಭಿವೃದ್ಧಿ ಪ್ರಾಧಿಕಾರ) ನಿವೇಶನಗಳಿಗೆ ಬೇಡಿಕೆಯಂತೂ ಕುಗ್ಗಿಲ್ಲ. ಈಗಾಗಲೇ ನಡೆದಿರುವ ಹರಾಜಿನಲ್ಲಿ ನಿವೇಶನ ಖರೀದಿಗೆ ಪೈಪೋಟಿಗಿಳಿದು ಬೀಟ್ ಮಾಡಿದ್ದಾರೆ.



ಮೈಸೂರು ನಗರದಲ್ಲಿ ಖಾಲಿ ಇರುವ ನಿವೇಶನಗಳನ್ನು ಹರಾಜು ಮಾಡಲು ಎಂಡಿಎ ಪ್ರಕ್ರಿಯೆ ಆರಂಭಿಸಿದೆ. 200 ನಿವೇಶನಗಳ ಹರಾಜಿಗೆ ಪತ್ರಿಕಾ ■ 6ನೇ ಪುಟಕ್ಕೆ

50x80 - 9 ಕೋಟಿ; 20x30 - 2 ಕೋಟಿ!

ಮೈಸೂರು ನಗರ ಮಾತ್ರವಲ್ಲ ಕರ್ನಾಟಕದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಎರಡು ನಿವೇಶನಗಳು ದಾಖಲೆ ಬೆಲೆಗೆ ಹರಾಜಾಗಿವೆ.

ವಿಜಯನಗರ 4ನೇ ಹಂತದಲ್ಲಿ 50X80 ಅಳತೆಯ ನಿವೇಶನ 9 ಕೋಟಿ ರೂಪಾಯಿಗೆ ಹರಾಜಾಗಿದೆ. ಈ 50X80 ಅಳತೆಯ ನಿವೇಶನ 4,000 ಚದರಡಿ ಹೊಂದಿದ್ದು, ಒಂದು ಚದರಡಿಗೆ 22,500 ರೂಪಾಯಿಗೆ ಬಿಕರಿಯಾಗಿದೆ. ಅಲ್ಲದೆ ಇದೇ ವಿಜಯನಗರ 4ನೇ ಹಂತದಲ್ಲಿ 20X30 ಅಳತೆಯ ನಿವೇಶನ 2 ಕೋಟಿ ರೂಪಾಯಿಗೆ ಹರಾಜಾಗಿದೆ. 20X30 ಅಳತೆಯ ನಿವೇಶನ 600 ಚದರಡಿ ಹೊಂದಿದ್ದು, ಒಂದು ಚದರಡಿಗೆ 33,333 ರೂಪಾಯಿಗೆ ಒಬ್ಬರು ■ 6ನೇ ಪುಟಕ್ಕೆ

ಕಿರುಗಾವಲು ಚಿನ್ನದಂಗಡಿ ಲೂಟಿ, ಅದನ್ನು ನೋಡಿದ ವ್ಯಕ್ತಿ ಬರ್ಬರ ಹತ್ಯೆ ಪ್ರಕರಣ

ಆರು ಮಂದಿ ದರೋಡೆಕೋರರ ಬಂಧನ, ಪರಾರಿಯಾಗಲೆತ್ನಿಸಿದವನಿಗೆ ಗುಂಡೇಟು

ಮಳವಳ್ಳಿ, ಆ.22– ತಾಲೂಕಿನ ಕಿರುಗಾವಲು ಗ್ರಾಮದ ಮಹಾಲಕ್ಷ್ಮಿ ಜ್ಯುವೆಲರ್ಸ್‌ನಲ್ಲಿ ಕಳೆದ ಭಾನುವಾರ ಚಿನ್ನಾಭರಣ ದೋಚಿ, ಅದನ್ನು ನೋಡಿದ ಪಕ್ಕದಲ್ಲಿನ ಹೋಟೆಲ್ ಮಾಲೀಕನ ಬರ್ಬರವಾಗಿ ಹತ್ಯೆಗೈದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಿರುಗಾವಲು ಪೊಲೀಸರು ಆರು ಮಂದಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.



ತಾಲೂಕಿನ ಭೀಮನಹಳ್ಳಿ ಬಳಿ ದರೋಡೆಕೋರರು ಅಡಗಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಹಲಗೂರು ಠಾಣೆ ಸಿಪಿಐ ಶ್ರೀಧರ್ ನೇತೃತ್ವದ ತಂಡ ದಾಳಿ ನಡೆಸಿದಾಗ ತಾಲೂಕಿನ ಕೊತ್ತತ್ತಿ ಗ್ರಾಮದ ಆನಂದ್, ಶರತ್, ಶ್ರೀನಿವಾಸ್, ಕೃಷ್ಣಾಚಾರಿ ಸಿಕ್ಕಿಬಿದ್ದಿದ್ದಾರೆ. ಈ ವೇಳೆ ಈಚೆಗೆರೆ ಗ್ರಾಮದ ಕಿರಣ್ ಎಂಬಾತ ತಪ್ಪಿಸಿಕೊಳ್ಳಲು ಪೇದೆ ಮೇಲೆ ಚಾಕುವಿನಿಂದ ಹಲ್ಲೆಗೆ ಮುಂದಾಗಿದ್ದಾನೆ. ಆತ್ಮರಕ್ಷಣೆಗೆ ಆತನ ಕಾಲಿಗೆ ಸಿಪಿಐ ಶ್ರೀಧರ್ ಕಾಲಿಗೆ ಗುಂಡು ಹಾರಿಸಿ ಆತನನ್ನು ವಶಕ್ಕೆ ಪಡೆದು ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದು, ಉಳಿದ ಆರೋಪಿಗಳನ್ನು ವಶಕ್ಕೆ ಪಡೆದು ತನಿಖೆ ಮಾಡಲಾಗುತ್ತಿದೆ

ಮಳವಳ್ಳಿ ತಾಲೂಕಿನ ಕಿರುಗಾವಲು ಗ್ರಾಮದ ಮಹಾಲಕ್ಷ್ಮಿ ಜುವೆಲರ್ಸ್‌ಗೆ ಮುಂಜಾನೆ 2 ಗಂಟೆ ಸಮಯದಲ್ಲಿ ಕನ್ನ ಹಾಕಿದ್ದ ಈ ಆರೋಪಿಗಳು, ಗ್ಯಾಸ್ ಕಟರ್ ಮೂಲಕ ಶೆಟರ್ ತುಂಡರಿಸಿ ಅಂಗಡಿಯೊಳಗೆ ನುಗ್ಗಿ 110 ಗ್ರಾಂ ಚಿನ್ನ, 2 ಕೆ.ಜಿ.ಯಷ್ಟು ಬೆಳ್ಳಿಯನ್ನು ಕದ್ದು ಪರಾರಿಯಾಗಿದ್ದರು. ■ 6ನೇ ಪುಟಕ್ಕೆ

ಒಳ ಮೀಸಲಾತಿಯಲ್ಲಿ ಅಲೆಮಾರಿ ಜನಾಂಗಕ್ಕೆ ಸಾಮಾಜಿಕ ಅನ್ಯಾಯ

ಸರ್ಕಾರದ ವಿರುದ್ಧ ಬಿಜೆಪಿ ನಾಯಕ ಸಿ.ಟಿ. ರವಿ ವಾಗ್ದಾಳಿ

ಬೆಂಗಳೂರು, ಆ. 22(ಕೆಎಂಶಿ)– ವಿಶಿಷ್ಟ ವರ್ಗವಾದ ಅಲೆಮಾರಿ ಜನಾಂಗದವರನ್ನು ಬಲಾಢ್ಯರ ಜೊತೆ ಸೇರಿಸಿರುವುದು ಸಾಮಾಜಿಕ ಅನ್ಯಾಯ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಟೀಕಿಸಿದ್ದಾರೆ.



ನಗರದ ಫ್ರೀಡಂಪಾರ್ಕ್‌ನಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮಾಜ ನಡೆಸುತ್ತಿರುವ ಪ್ರತಿಭಟನೆ ಜಾಗಕ್ಕೆ ತೆರಳಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಗರಿಕ ಸೌಲಭ್ಯ, ವಿದ್ಯೆ, ಸಂಪತ್ತು, ಸರ್ಕಾರಿ ನೌಕರಿ ವಂಚಿತ ಜನಾಂಗಕ್ಕೆ ಅವಕಾಶ ಕೊಡುವುದೇ ಒಳ ಮೀಸಲಾತಿ ಉದ್ದೇಶ ಎಂದರು.

ನ್ಯಾಯಮೂರ್ತಿ ಸದಾಶಿವ, ನ್ಯಾಯಮೂರ್ತಿ ನಾಗಮೋಹನ್‌ದಾಸ್, ಮಾಜಿ ಸಚಿವ ಮಾಧುಸ್ವಾಮಿ ವರದಿಗಳನ್ನು ಸರ್ಕಾರ ಪರಿಗಣಿಸಿಲ್ಲ. ಲಂಬಾಣಿ, ಬೋವಿ, ಕೊರಚ, ಕೊರಮ ಸಮುದಾಯಕ್ಕೆ ನಾವು ಶೇ.4.5 ಕೊಟ್ಟಿದ್ದೆವು. ಅದನ್ನು ಕಡಿತಗೊಳಿಸಲಾಗಿದೆ.

ಅಲೆಮಾರಿ ಜನಾಂಗಕ್ಕೆ ಶೇ.1ರಷ್ಟು ಮೀಸಲಾತಿ ನೀಡಲಾಗಿತ್ತು ಈ ಸಮುದಾಯವನ್ನು ಲೆಕ್ಕಕ್ಕೇ ತೆಗೆದುಕೊಂಡಿಲ್ಲ, ಮಾರ್ಜಾಲ ನ್ಯಾಯ, ಖಾಜಿ ನ್ಯಾಯ ಮಾಡಲಾಗಿದೆ. ಸಂವಿಧಾನಕ್ಕೆ ವಿರುದ್ಧವಾದ ಕ್ರಮ ತೆಗೆದುಕೊಳ್ಳಲಾಗಿದೆ, ಇದನ್ನು ಸರಿಪಡಿಸಬೇಕು.

ಧ್ವನಿ ಇಲ್ಲದ ಅಲೆಮಾರಿ ಜನಾಂಗದವರಿಗೆ ಧ್ವನಿ ಕೊಡಿ, ಇಲ್ಲವಾದರೆ, ಇತಿಹಾಸ ನಿಮ್ಮನ್ನು ಕ್ಷಮಿಸುವುದಿಲ್ಲ. ಯಾವ ಆಧಾರದಲ್ಲಿ 3 ವರ್ಗಗಳಾಗಿ ವಿಂಗಡಿಸಲಾಗಿದೆ. ಜನಗಣತಿಯೇ, ಜಾತಿಗಣತಿಯೇ, ಸಾಮಾಜಿಕ, ಆರ್ಥಿಕ ಸಮೀಕ್ಷೆ ಆಧಾರವೇ, ಯಾವುದರ ಮೇಲೆ ಇದನ್ನು ಮಾಡಿದ್ದಾರೆ. ಯಾರೋ 4 ಜನರನ್ನು ತೃಪ್ತಿಪಡಿಸಲು ಈ ತೀರ್ಮಾನ ಮಾಡಲಾಗಿದೆಯೇ ಹೊರತು ಸಾಮಾಜಿಕ ನ್ಯಾಯ ಕೊಟ್ಟಿಲ್ಲ, ಸದನದಲ್ಲಿ ಧ್ವನಿ ಎತ್ತುತ್ತೇವೆ. ಕಳೆದ 26 ತಿಂಗಳಿನಿಂದ ಅಧಿಕಾರದಲ್ಲಿರುವ ಕಾಂಗ್ರೆಸ್, ಸಭೆಗಳನ್ನು ಮಾಡುತ್ತಾ, ನೆಪ ಹೇಳುತ್ತಾ, ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿಯನ್ನೂ ಕೈಬಿಟ್ಟು ಸಚಿವ ಸಂಪುಟದ 2 ಗಂಟೆ ಸಭೆಯಲ್ಲಿ ನಿರ್ಧಾರ ಮಾಡಿದ್ದಾರೆ.

ಹಾಗಿದ್ದರೆ ವರದಿ ಏಕೆ ಬೇಕಿತ್ತು. ನೂರಾರು ಕೋಟಿ ರೂ. ಏಕೆ ಖರ್ಚು ಮಾಡಿದಿರಿ. ಒಳ ಮೀಸಲಾತಿ ಕುರಿತು ಸುಪ್ರೀಂಕೋರ್ಟ್ ತೀರ್ಪು ನೀಡಿ 13 ತಿಂಗಳಾಗಿದೆ. ಅದನ್ನೂ ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಎಂದರು.

ಶ್ರೀಗಳಿಗೆ ಅಭಿನಂದನೆ...



ಮೈಸೂರಿನ ಜಯನಗರದ ಶ್ರೀ ರಾಮ ಸೇವಾ ಸಮಿತಿ ವತಿಯಿಂದ ನಡೆದ 19ನೇ ವರ್ಷದ ಕುಂಭಾಭಿಷೇಕ ಮಹೋತ್ಸವ ಕಾರ್ಯಕ್ರಮದಲ್ಲಿ ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಅಭಿನಂದಿಸಿದರು. ಮಾಜಿ ಕಾರ್ಪೋರೇಟರ್ ಚೆನ್ನಪ್ಪ, ಮುಖಂಡರಾದ ವಿಕ್ರಾಂತ್ ಪಿ.ದೇವೇಗೌಡ, ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗ ಸಂಘದ ಪ್ರಧಾನ ಕಾರ್ಯದರ್ಶಿ ಚೇತನ್ ಎಂ.ಈ., ನಿರ್ದೇಶಕ ಗಿರೀಶ್‌ಗೌಡ, ಜಯನಗರ ಹಾಗೂ ಕೆ.ಜಿ.ಕೊಪ್ಪಲು ಗ್ರಾಮದ ಮುಖಂಡರಾದ ಕೆಂಪಣ್ಣ, ನಾಗಪ್ಪ, ದೇವರಾಜು, ಗುರು, ಸುರೇಶ್‌ಗೌಡ, ಭರತ್, ಸಿದ್ದೇಶ್, ರವಿಗೌಡ, ಶಂಭುಗೌಡ, ಚಂದನ್, ಜಯನಗರ ಹಾಗೂ ಕೆ.ಜಿ.ಕೊಪ್ಪಲಿನ ಯಜಮಾನರು, ಯುವ ಮುಖಂಡರು ಉಪಸ್ಥಿತರಿದ್ದರು.

ಬಿಗ್‌ಬಾಸ್ ಖ್ಯಾತಿಯ ವಕೀಲ ಜಗದೀಶ್ ಬಂಧನ

ಬೆಂಗಳೂರು, ಆ.22– ಜಾತಿ ನಿಂದನೆ ಪ್ರಕರಣದಲ್ಲಿ ವಕೀಲ ಜಗದೀಶ್ ಅವರನ್ನು ಬೆಂಗಳೂರಿನ ಕೊಡಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಜಾತಿ ನಿಂದನೆ ಪ್ರಕರಣ ಸಂಬಂಧ ಅವರ ವಿರುದ್ಧ ದೂರು ದಾಖಲಾಗಿತ್ತು. ಸಾಮಾಜಿಕ ಮಾಧ್ಯಮಗಳಲ್ಲಿ ಜಾತಿ ನಿಂದನೆ ಕುರಿತು ಹೇಳಿಕೆ ನೀಡಿದ್ದರು. ಈ ಪ್ರಕರಣ ಸಂಬಂಧ ಆ.21ರಂದು ಕೊಡಿಗೆಹಳ್ಳಿ ಠಾಣೆ ಪೊಲೀಸರು ಜಗದೀಶ್ ಅರೆಸ್ಟ್ ಮಾಡಲು ಮನೆಗೆ ತೆರಳಿದ್ದರು. ಈ ವೇಳೆ ಮನೆ ಬಾಗಿಲು ತೆಗೆಯಲಿಲ್ಲ. ಅಲ್ಲದೇ ಪೊಲೀಸರ ನೋಟಿಸ್ ಸ್ವೀಕರಿಸಲು ನಿರಾಕರಿಸಿದ್ದರು. ಹಲವು ಗಂಟೆಗಳವರೆಗೆ ಕಾದರೂ ಲಾಯರ್ ಜಗದೀಶ್ ಮನೆ ಬಾಗಿಲು ತೆರೆಯಲೇ ಇಲ್ಲ. ಹೀಗಾಗಿ ಪೊಲೀಸರು ಬರಿಗೈಯಲ್ಲಿ ವಾಪಾಸ್ಸಾಗಿದ್ದರು. ಆದರೆ, ಇಂದು ಜಗದೀಶ್ ಅವರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಬಿಜೆಪಿ ನಾಯಕ ಎಸ್.ಆರ್. ವಿಶ್ವನಾಥ್ ಇತ್ತೀಚೆಗೆ ವಿಧಾನಸಭೆಯಲ್ಲಿ ಲಾಯರ್ ಜಗದೀಶ್ ವಿರುದ್ಧ ಹಕ್ಕುಚ್ಯುತಿ ಮಂಡಿಸಿದ್ದರು. ಧರ್ಮಸ್ಥಳ ಸೇರಿದಂತೆ ಇತರ ಕೆಲ ಪ್ರಕರಣಗಳಲ್ಲಿ ಲಾಯರ್ ಜಗದೀಶ್ ತನ್ನ ವಿರುದ್ಧ ಯಾವುದೇ ಸಾಕ್ಷಿ ಆಧಾರಗಳಿಲ್ಲದೆ ಆರೋಪ ಮಾಡುತ್ತಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ನನ್ನ ವಿರುದ್ಧ ಕೆಟ್ಟದಾಗಿ ಮಾತನಾಡಿದ್ದಾರೆ. ಧರ್ಮಸ್ಥಳ ಬಗ್ಗೆ ಅಪಪ್ರಚಾರವಾಗುತ್ತಿದೆ ಎಂದು ಮಾತನಾಡುವುದು ನನ್ನ ಹಕ್ಕು. ಆದರೆ ವಕೀಲ ಜಗದೀಶ್ ಆಧಾರರಹಿತ ಆರೋಪ, ತೇಜೋವಧೆ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಎಸ್‌ಆರ್ ವಿಶ್ವನಾಥ್ ಹಕ್ಕುಚ್ಯುತಿ ಮಂಡಿಸಿದ್ದರು.

ನಿಧನ

ಶ್ರೀಮತಿ ರಾಧಮ್ಮ




ಮೈಸೂರು, ಆ.22– ಮೈಸೂರು ಕೃಷ್ಣಮೂರ್ತಿಪುರಂ ನಿವಾಸಿ ಶ್ರೀಮತಿ ರಾಧಮ್ಮ (80)ನವರು ಇಂದು ಬೆಳಗ್ಗೆ ನಿಧನರಾದರು. ಮೃತರು ಪುತ್ರರಾದ ಹೋಟೆಲ್ ಮಾಲೀಕ ಕೃಷ್ಣಭಟ್, ಶ್ರೀಧರಮೂರ್ತಿ, ಸತ್ಯನಾರಾಯಣ, ಪುತ್ರಿ ಲಲಿತಾ ಸೇರಿದಂತೆ ಅಪಾರ ಬಂಧು–ವರ್ಗವನ್ನು ಅಗಲಿದ್ದಾರೆ ಇವರ ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಕೆ.ಜಿ.ಕೊಪ್ಪಲು ಪ್ರದೀಪ್ ದೇವೇಗೌಡ ಸಂತಾಪ ಸೂಚಿಸಿದ್ದಾರೆ.

ಸಿದ್ದೇಶ್‌ಕುಮಾರ್



ಮೈಸೂರು, ಆ.22– ಮೈಸೂರಿನ ಅಗ್ರಹಾರದ ನಿವಾಸಿ ಸಿದ್ದೇಶ್ ಕುಮಾರ್ (47) ಶುಕ್ರವಾರ ಬೆಳಗ್ಗೆ ಸ್ವ–ಗೃಹದಲ್ಲಿ ನಿಧನ ರಾಗಿದ್ದಾರೆ. ಮೃತರು ಪತ್ನಿ ಸುವರ್ಣ, ಮಗ ಧನುಷ್ ಹಾಗೂ ತಂದೆ–ತಾಯಿ, ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಆ.23) ಬೆಳಗ್ಗೆ 11.30 ಕ್ಕೆ ವಿದ್ಯಾರಣ್ಯಪುರಂ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚೊಟ್ಟೆಮಾಡ ಎಸ್. ಅಪ್ಪಯ್ಯ



ನಿವೃತ್ತ ರೇಂಜ್ ಫಾರೆಸ್ಟ್ ಆಫೀಸರ್ ಮತ್ತು ವಿಜಯನಗರ 4ನೇ ಹಂತದಲ್ಲಿರುವ ವಿಲ್ಲಾ ನಂ.10, ಜಿ6, ವಿಹಾ (ಕಲ್ಯಾಣಿ ಆರ್ಚ್ ಸಮೀಪ) ನಿವಾಸಿ ಚೊಟ್ಟೆಮಾಡ ಎಸ್.ಅಪ್ಪಯ್ಯ(ಅಪ್ಪಾಜಿ) ಗುರುವಾರ ನಿಧನರಾದರು. ಅವರಿಗೆ 86 ವರ್ಷ ವಯಸ್ಸಾಗಿತ್ತು. ಮೂಲತಃ ಕೊಡಗು ಜಿಲ್ಲೆ ಪೊನ್ನಂಪೇಟೆ ತಾಲೂಕಿನ ಬಿ. ಶೆಟ್ಟಿಗೇರಿ ಗ್ರಾಮದ ನಿವಾಸಿಯಾದ ಇವರು ಮಕ್ಕಳಾದ ಹರೀಶ್ ಸುಬ್ಬಯ್ಯ ಮತ್ತು ಕಂದಂಡ ಮಾಲಾ ಬಿದ್ದಪ್ಪ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನಾಳೆ(ಆ.23) ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಕೆ.ಎಂ. ನಂಜಪ್ಪ



ಮೈಸೂರು, ಆ. 22– ಮೈಸೂರಿನ ವಿದ್ಯಾರಣ್ಯಪುರಂ 4ನೇ ಹಂತದ ನಿವಾಸಿ ಬಿ.ಕೆ.ಎಂ. ನಂಜಪ್ಪ (80) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಹಿನಕಲ್ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಿಓಪಿ ಗಣಪನ ವಿರುದ್ಧ ಪಾಲಿಕೆ ಅಧಿಕಾರಿಗಳ ಕಾರ್ಯಾಚರಣೆ



ಗಣಪತಿ ಮೂರ್ತಿಗಳನ್ನು ಪರಿಶೀಲಿಸುತ್ತಿರುವ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು.

ಮೈಸೂರು, ಆ.22(ಎಂಟಿವೈ)– ಗಣೇಶನ ಹಬ್ಬ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ವಿವಿಧೆಡೆ ಗಣಪತಿ ಮೂರ್ತಿಗಳ ಮಾರಾಟ ಆರಂಭವಾಗಿದೆ. ನಿಯಮ ಬಾಹಿರವಾಗಿ ಪರಿಸರದ ಮೇಲೆ ದುಷ್ಪರಿಣಾಮ ಬೀರುವ ಪ್ಲಾಸ್ಟರ್ ಆಫ್ ಪ್ಯಾರೀಸ್ (ಪಿಓಪಿ) ಗಣಪತಿ ಮೂರ್ತಿ ಮಾರಾಟಕ್ಕೆ ಕಡಿವಾಣ ಹಾಕಲು ಮೈಸೂರು ನಗರ ಪಾಲಿಕೆ ಕಾರ್ಯಾಚರಣೆ ಆರಂಭಿಸಿದೆ.

ಪರಿಸರ ಸಂರಕ್ಷಣೆಯ ಹಿತದೃಷ್ಟಿಯಿಂದ ರಾಜ್ಯದಾದ್ಯಂತ ಪಿಓಪಿ ಗಣಪತಿ ಮಾರಾಟ ನಿಷೇಧಿಸಲಾಗಿದೆ. ಆದರೂ, ಹೊರ ರಾಜ್ಯದಿಂದ ಸರಬರಾಜಾಗುತ್ತಿರುವ ಮಾಹಿತಿಯಿದ್ದು, ಈ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯ ಪರಿಸರ ಅಧಿಕಾರಿಗಳು ಮೈಸೂರಿನ 9 ಸ್ಥಳದಲ್ಲಿ ಮಾರಾಟಕ್ಕಿಡಲಾಗಿದ್ದ ಗಣಪತಿ ಮೂರ್ತಿಗಳ ಪರಿಶೀಲಿಸುವ ಕಾರ್ಯಾಚರಣೆ ನಡೆಸಿದ್ದಾರೆ.

ಈ ವೇಳೆ ಉಮಾ ಟಾಕೀಸ್ ರಸ್ತೆಯಲ್ಲಿ ಹೊರತುಪಡಿಸಿದರೆ, ಬೇರೆ ಕಡೆ ಪಿಓಪಿ ಗಣಪತಿ ಮೂರ್ತಿ ಮಾರಾಟಕ್ಕಿಡಲಾಗಿದೆ. ಉಮಾ ಟಾಕೀಸ್ ರಸ್ತೆಯಲ್ಲಿ ಎರಡು ಪಿಓಪಿ ಗಣಪತಿ ಮೂರ್ತಿ ಪಾಲಿಕೆ ಅಧಿಕಾರಿಗಳ ಕಣ್ಣಿಗೆ ಬಿದ್ದಿತ್ತು. ಅದನ್ನು ವಶಪಡಿಸಿಕೊಳ್ಳಲು ಮುಂದಾಗಿದ್ದರು. ಆದರೆ, ಅದನ್ನು ಮಾರಾಟ ಮಾಡಲು ತಂದಿದ್ದ ವ್ಯಕ್ತಿ, ಬೆಂಗಳೂರಿನಿಂದ ಅದನ್ನು ತಂದಿದ್ದು, ಅವುಗಳನ್ನು ವಾಪಸ್ಸು ಕಳುಹಿಸುವುದಾಗಿ ಕೇಳಿಕೊಂಡರು. ಆದರೂ, ಆ ವ್ಯಕ್ತಿಗೆ 5 ಸಾವಿರ ದಂಡ ವಿಧಿಸಿದ್ದಾರೆ. ಅಲ್ಲದೆ, ರಾತ್ರಿಯೇ ಪಿಓಪಿ ಗಣೇಶನ ಮೂರ್ತಿಯನ್ನು ಬೆಂಗಳೂರಿಗೆ ಕಳುಹಿಸಿ, ಬಿಬಿಎಂಪಿ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ.

ಎಗ್ಗಿಲ್ಲದೆ ನಡೆಯುತ್ತಿದೆ: ಪಿಓಪಿ ಗಣೇಶನ ಮೂರ್ತಿ ಮಾರಾಟ ನಿಷೇಧಿಸಲಾಗಿದೆ. ಆದರೂ ವ್ಯಾಪಾರಿಗಳು ಹೆಚ್ಚಿನ ಲಾಭದ ಉದ್ದೇಶದಿಂದ ಹೊರ ರಾಜ್ಯದಿಂದ ಪಿಓಪಿ ಗಣಪತಿ ಮೂರ್ತಿಗಳನ್ನು ತರಿಸಿಕೊಳ್ಳುತ್ತಿರುವ ಮಾಹಿತಿ ಇದೆ. ಹೊರ ರಾಜ್ಯ ಮಾತ್ರವಲ್ಲದೆ, ಬೆಂಗಳೂರಿನಿಂದಲೂ ಪಿಓಪಿ ಗಣೇಶನ ಮೂರ್ತಿಗಳು ತಯಾರಿಸುತ್ತಿರುವ ಶಂಕೆಯಿದ್ದು, ಅವುಗಳು ಮೈಸೂರು ಸೇರಿದಂತೆ ರಾಜ್ಯದ ವಿವಿಧೆಡೆ ಸರಬರಾಜಾಗುತ್ತಿರುವ ಅನುಮಾನವಿದೆ.

ಗ್ರಾಮೀಣ ಪ್ರದೇಶದಲ್ಲಿ ಪ್ರತಿಷ್ಠಾಪಿಸುವ ಯುವಕ ಮಂಡಳಿಗಳನ್ನೇ ಗುರಿಯಾಗಿಸಿಕೊಂಡು ಪಿಓಪಿ ಗಣೇಶನ ಮೂರ್ತಿಯನ್ನು ಗೌಪ್ಯವಾಗಿ ಮಾರಾಟ ಮಾಡಲಾಗುತ್ತಿರುವ ಅನುಮಾನವಿದೆ.

ಇದೊಂದು ಭಾವನಾತ್ಮಕ ವಿಚಾರ. ಇದನ್ನೇ ಬಂಡವಾಳವಾಗಿಸಿಕೊಂಡವರು ಪಿಓಪಿ ಮೂರ್ತಿಗಳನ್ನು ಕದ್ದು ಮುಚ್ಚಿ ಮಾರಾಟ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆ, ಜಲಚರಗಳ ಹಿತ ಕಾಪಾಡುವ ಅಭಿಯಾನದಲ್ಲಿ ಸಾರ್ವಜನಿಕರು ಕೈ ಜೋಡಿಸಿ, ಸ್ವಯಂ ಪ್ರೇರಣೆಯಿಂದ ಪಿಓಪಿ ಗಣೇಶನ ಮೂರ್ತಿ ಖರೀದಿಸದೆ, ಮಣ್ಣಿನ ಹಾಗೂ ಪೇಪರ್ ಮೌಲ್ಡ್‌ನಿಂದ ತಯಾರಿಸಿರುವ ಗಣೇಶನ ಮೂರ್ತಿಯನ್ನು ಮಾತ್ರವೇ ಪೂಜಿಸುವಂತೆ ಪಾಲಿಕೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಬಿ.ಎಲ್.ಸಂತೋಷ್ ವಿರುದ್ಧ ಮಾತನಾಡಿದ್ದವನ ಒದ್ದು ಒಳಗೆ ಹಾಕಿದ್ದೇವೆ

ತಿಮರೋಡಿ ವಿರುದ್ಧ ಡಿ.ಕೆ ಶಿವಕುಮಾರ್ ಗರಂ



ಬೆಂಗಳೂರು, ಆ.22– ಧರ್ಮಸ್ಥಳ ಬುರುಡೆ ಪ್ರಕರಣ ದಿನಕ್ಕೊಂದು ಸ್ವರೂಪ ಪಡೆದುಕೊಳ್ಳುತ್ತಿದೆ. ಈ ಮಧ್ಯೆ ಧರ್ಮಸ್ಥಳದ ವಿರುದ್ಧ ಹೋರಾಟ ನಡೆಸುತ್ತಿದ್ದ ಸಾಮಾಜಿಕ ಕಾರ್ಯಕರ್ತ ಮಹೇಶ್ ತಿಮರೋಡಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ವಿರುದ್ಧ ಅವಹೇಳನಕಾರಿ ಮಾತುಗಳನ್ನಾಡಿದ್ದರು.

ಇದೇ ವಿಚಾರವಾಗಿ ಮಾತನಾಡಿದ ಎಂದು ಡಿಸಿಎಂ ಡಿ.ಕೆ ಶಿವಕುಮಾರ್, ಬಿ.ಎಲ್. ಸಂತೋಷ್ ವಿರುದ್ಧ ಮಾತನಾಡಲು ಆತನ ಬಳಿ ಯಾವ ದಾಖಲೆ ಇದೆ. ವಿನಾ ಕಾರಣ ಅವಹೇಳನ ಮಾಡಿದ್ದ ತಿಮರೋಡಿಯನ್ನು ಒದ್ದು ಒಳಗೆ ಹಾಕಿದ್ದೇವೆ ಎಂದು ಹೇಳಿದ್ದಾರೆ.

ವಿಧಾನಸೌಧದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿ.ಎಲ್. ಸಂತೋಷ್ ಬಗ್ಗೆ ಮಹೇಶ್ ತಿಮರೋಡಿ ಬಾಯಿಗೆ ಬಂದಂತೆ ಮಾತನಾಡಿದ್ದಾನೆ. ಆರೋಪಗಳನ್ನು ಮಾಡಲು ಆತನ ಬಳಿ ದಾಖಲೆ ಏನಿದೆ?. ಹೀಗಾಗಿ ಅವನನ್ನು ಒದ್ದು ಒಳಗೆ ಹಾಕಿದ್ದೇವೆ. ರಾಜಕೀಯವಾಗಿ ನಮ್ಮ ನಡುವೆ ಸಾಕಷ್ಟು ಭಿನ್ನಾಭಿಪ್ರಾಯವಿರಬಹುದು. ಆದರೆ ನಮ್ಮ ವಿರೋಧಿಗಳ ಬಗ್ಗೆ ಬಾಯಿಗೆ ಬಂದಂತೆ ಮಾತನಾಡಿದರೆ ಅದನ್ನು ಕೇಳಿಕೊಂಡು ನಾವು ಖುಷಿಪಡುವುದಿಲ್ಲ.


ಯಾರು ಬೇಕಾದರೂ ರಾಜಕೀಯವಾಗಿ ಆರೋಪ ಮಾಡಬಹುದು ತಪ್ಪೇನಿಲ್ಲ. ಆದರೆ ಯಾರೇ ಆರೋಪ ಮಾಡುವಾಗಲೂ ದಾಖಲೆಗಳನ್ನು ಇಟ್ಟುಕೊಂಡು ಆರೋಪ ಮಾಡಲಿ. ಅದನ್ನು ಬಿಟ್ಟು ಸ್ವಾಭಿಮಾನಕ್ಕೆ ಧಕ್ಕೆ ತರುವಂತಹ ಮಾತುಗಳನ್ನು ಆಡಬಾರದು ಎಂದರು.



ಕಾಂಗ್ರೆಸ್ ಸರ್ಕಾರದಲ್ಲಿ ಶಿಕ್ಷಣ ಕ್ಷೇತ್ರದ ಹಣವೂ ಲೂಟಿ

ಮಾಜಿ ಸಚಿವ, ಜೆಡಿಎಸ್ ನಾಯಕ ಹೆಚ್.ಡಿ. ರೇವಣ್ಣ ಆಕ್ರೋಶ

ಬೆಂಗಳೂರು, ಆ. 22(ಕೆಎಂಶಿ)–ರಾಜ್ಯದ ಕಾಂಗ್ರೆಸ್ ಸರ್ಕಾರ ಮಕ್ಕಳ ಶಿಕ್ಷಣದ ಹಣದಲ್ಲೂ ಲೂಟಿ ಹೊಡೆಯುವ ದುಸ್ಥಿತಿಗೆ ತಲುಪಿದೆ ಎಂದು ಜೆಡಿಎಸ್ ಹಿರಿಯ ಶಾಸಕ ಎಚ್.ಡಿ.ರೇವಣ್ಣ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಸರ್ಕಾರಿ ಶಾಲೆಗಳ ಸ್ಥಿತಿಗತಿ ಹಾಗೂ ಸುಧಾರಣಾ ವ್ಯವಸ್ಥೆಗಳ ಬಗ್ಗೆ ವಿಧಾನಸಭೆಯಲ್ಲಿ ನಡೆದ ಚರ್ಚೆಯಲ್ಲಿ ಮಧ್ಯಪ್ರವೇಶಿಸಿ ಮಾತನಾಡಿದ ರೇವಣ್ಣ, ಸರ್ಕಾರಗಳು ಬರುತ್ತವೆ, ಹೋಗುತ್ತವೆ. ಆದರೆ ಆದ್ಯತಾವಲಯಗಳ ಮೇಲೆ ನಿಗಾ ವಹಿಸಬೇಕು ಎಂದರು.

ದೇಶದಲ್ಲಿ ಯಾವ ಕ್ಷೇತ್ರದಲ್ಲೂ ಏಳು ಪ್ರಥಮ ದರ್ಜೆ ಕಾಲೇಜುಗಳಿಲ್ಲ. ತಮ್ಮ ಕ್ಷೇತ್ರ ಹೊಳೆನರಸೀಪುರದಲ್ಲಿ ಮಾತ್ರ ಅಂತಹ ವ್ಯವಸ್ಥೆ ಇದೆ. ಎರಡು ಕೋಟಿ ರೂ. ಖರ್ಚು ಮಾಡಿ ಸರ್ಕಾರಿ ಶಾಲೆ ಅಭಿವೃದ್ಧಿ ಪಡಿಸಿದ್ದೇನೆ. ನಾವು ಖಾಸಗಿ ಶಿಕ್ಷಣ ಸಂಸ್ಥೆ ನಡೆಸುತ್ತಿಲ್ಲ. ಬಡವರ ಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರಿ ವ್ಯವಸ್ಥೆ ಉತ್ತಮ ಪಡಿಸುತ್ತಿದ್ದೇವೆ ಎಂದು ಹೇಳಿದರು. ರಾಜ್ಯದಲ್ಲಿ ನಾಲ್ಕು ಸಾವಿರ ಪ್ರಾಥಮಿಕ ಶಾಲೆಗಳು ಮುಚ್ಚುವ ಹಂತದಲ್ಲಿವೆ. ಶಿಕ್ಷಣ ಇಲಾಖೆ ಆಯುಕ್ತರಾಗಿದ್ದ ಅಜಯ್ ನಾಗಭೂಷಣ್ ಸರ್ಕಾರಕ್ಕೆ ಬರೆದಿರುವ ಪತ್ರ ನೋಡಿದರೆ, ಶಿಕ್ಷಣ ಇಲಾಖೆಯಲ್ಲೂ ಯಾವ ಮಟ್ಟದ ಲೂಟಿ ನಡೆಯುತ್ತಿದೆ ಎಂದು ಗೊತ್ತಾಗುತ್ತದೆ. ಶಾಲಾ ಕಟ್ಟಡಗಳ ನಿರ್ಮಾಣವನ್ನು ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಇಲಾಖೆಗಳಿಂದ ನಿರ್ವಹಿಸಿದರೆ ಹಣ ಉಳಿತಾಯವಾಗುತ್ತದೆ. ಆದರೆ, ಭ್ರಷ್ಟಾಚಾರಕ್ಕಾಗಿ ಬೇರೆ ವ್ಯವಸ್ಥೆ ಮೂಲಕ ನಿರ್ಮಾಣ ಕಾಮಗಾರಿಗಳನ್ನು ನಡೆಸಲಾಗುತ್ತಿದೆ ಎಂದು ದೂರಿದರು.

ಸರ್ಕಾರಿ ಶಾಲೆಗಳ ಕಾಮಗಾರಿಗಳನ್ನು ನಿರ್ವಹಣೆ ಮಾಡಲಾಗದಿದ್ದರೆ ಲೋಕೋಪಯೋಗಿ ಮತ್ತು ವಸತಿ ನಿಗಮಗಳನ್ನು ಇಟ್ಟುಕೊಂಡಿರುವುದಾದರೂ ಏಕೆ, ಅವುಗಳನ್ನು ಮುಚ್ಚಿ ಬಿಡಿ ಎಂದು ರೇವಣ್ಣ ಆಕ್ರೋಶ ವ್ಯಕ್ತಪಡಿಸಿದರು. ಇದೇ ವ್ಯವಸ್ಥೆ ಮುಂದುವರಿಸಿದರೆ ಶಿಕ್ಷಣ ವ್ಯವಸ್ಥೆ ಸಂಪೂರ್ಣ ಖಾಸಗಿ ವಲಯದ ಆಧಿಪತ್ಯಕ್ಕೊಳಪಡುತ್ತದೆ ಎಂಬ ಆತಂಕವನ್ನು ಅವರು ವ್ಯಕ್ತಪಡಿಸಿದರು.

20 ವರ್ಷಕ್ಕಿಂತ ಹಳೆಯ ವಾಹನಗಳ ನೋಂದಣಿ ನವೀಕರಣ ಶುಲ್ಕ ಹೆಚ್ಚಳ

ನವದೆಹಲಿ: ರಸ್ತೆ ಮತ್ತು ಹೆದ್ದಾರಿಗಳ ಸಚಿವಾಲಯವು 20 ವರ್ಷಕ್ಕಿಂತಲೂ ಹಳೆಯದಾದ ವಾಹನಗಳ ನೋಂದಣಿ ನವೀಕರಣ ಶುಲ್ಕವನ್ನು ಹೆಚ್ಚಿಸಿದ್ದು, ಈ ಕುರಿತು ಅಧಿಸೂಚನೆ ಪ್ರಕಟಿಸಿದೆ. ಲಘು ಮೋಟಾರು ವಾಹನಗಳ(ಎಲ್‌ಎಂವಿ) ನೋಂದಣಿ ನವೀಕರಣ ಶುಲ್ಕವನ್ನು 5 ಸಾವಿರದಿಂದ 10 ಸಾವಿರಕ್ಕೆ ಹೆಚ್ಚಿಸಲಾಗಿದೆ.

ದ್ವಿಚಕ್ರ ವಾಹನಗಳ ನೋಂದಣಿ ನವೀಕರಣ ಶುಲ್ಕವನ್ನು 1 ಸಾವಿರದಿಂದ 2 ಸಾವಿರಕ್ಕೆ, ತ್ರಿಚಕ್ರ/ನಾಲ್ಕು ಚಕ್ರ ವಾಹನಗಳ ನವೀಕರಣ ಶುಲ್ಕವನ್ನು 3,500 ದಿಂದ 5 ಸಾವಿರಕ್ಕೆ ಹೆಚ್ಚಿಸಲಾಗಿದೆ. ಆಮದು ಮಾಡಿಕೊಂಡಿರುವ ದ್ವಿಚಕ್ರ/ತ್ರಿಚಕ್ರ ವಾಹನಗಳ ನೋಂದಣಿ ನವೀಕರಣ ಶುಲ್ಕವು 20 ಸಾವಿರಕ್ಕೆ ಹೆಚ್ಚಿಸಲಾಗಿದೆ. ಅದೇ ರೀತಿ, ಆಮದು ಮಾಡಿಕೊಂಡಿರುವ ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಚಕ್ರಗಳ ವಾಹನಗಳ ನೋಂದಣಿ ನವೀಕರಣ ಶುಲ್ಕವನ್ನು 80 ಸಾವಿರಕ್ಕೆ ಹೆಚ್ಚಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.08.2025 ಶನಿವಾರ, ಮಳೆ ನಕ್ಷತ್ರ: ಮಖ 17.08.2025 ರಿಂದ 30.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯವರ ಜನ್ಮೋತ್ಸವ, ಗೌರಿ ಅಮಾವಾಸ್ಯೆ ಪ್ರಯುಕ್ತ ರಾತ್ರಿ 7.30ಕ್ಕೆ ಪ್ರಾಂಗಣದ ಉತ್ಸವ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 9 ರಿಂದ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಹೈಪೋಥೈರಾಯ್ಡಿಸಮ್‌ಗೆ ಚಿಕಿತ್ಸಾ ಶಿಬಿರ, ಮಧು ಮೇಹದ ಗಾಯಗಳಿಗೆ ಚಿಕಿತ್ಸೆ, ಮೈಗ್ರೇನ್‌ಗೆ ಪರಿಹಾರ ಹಾಗೂ ಆಕ್ಯುಪಂಕ್ಚರ್ ಚಿಕಿತ್ಸೆ, ಎಲ್ಲಾ ತರಹದ ತಲೆನೋವಿಗೆ ಚಿಕಿತ್ಸೆ, ಆರ್ಥರೈಟಿಸ್‌ಗೆ, ಕುತ್ತಿಗೆ ನೋವು ಮತ್ತು ಭುಜದ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸಯಾಟೀಕ, ಗೃಧ್ರಸಿ ರೋಗದ ಚಿಕಿತ್ಸಾ ಶಿಬಿರ, ವರ್ಷಾ ಬಸ್ತಿ ಚಿಕಿತ್ಸಾ ಶಿಬಿರ, ಸ್ಥಳ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಕೊಡವ ಸಮಾಜ :** ಕೊಡವಾಮೆರ ಆರ ಬೇರ, ಅಧ್ಯಕ್ಷತೆ : ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜನಿಕಂಡ ಸಿ. ಮಹೇಶ್ ನಾಚಯ್ಯ, ಮುಖ್ಯ ಅತಿಥಿಗಳು : ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ, ಶಾಸಕರಾದ ಕೆ. ಹರೀಶ್‌ಗೌಡ, ಡಾ. ಮಂತರ್‌ಗೌಡ, ಟಿ.ಎಸ್. ಶ್ರೀವತ್ಸ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಶ್ರೀಮತಿ ಶಾಂತೆಯಂಡ ವೀಣಾ ಅಚ್ಚಯ್ಯ, ತೀತಿರ ಧರ್ಮಜ ಉತ್ತಪ್ಪ, ಕೊಡವ ಸಮಾಜದ ಅಧ್ಯಕ್ಷ ಪೊಂಜಂಡ ಎ. ಗಣಪತಿ, ಮಾಲೇಟಿರ ಸುಬ್ಬಯ್ಯ, ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸ್ಥಳ: ಕೊಡವ ಸಮಾಜ, ಬೆಳಗ್ಗೆ 9.30ಕ್ಕೆ

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ರೋಟರಿ ಮೈಸೂರು ಬೃಂದಾವನ, ಮೈಸೂರು ಚೆಸ್ ಸೆಂಟರ್ :** ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಮುಕ್ತ ಚೆಸ್ ಚಾಂಪಿಯನ್‌ಶಿಪ್, ಸ್ಥಳ: ರೋಟರಿ ಬೃಂದಾವನ ಸ್ಕೂಲ್, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಬೀಜ ಗ್ರಂಥಿ ದೋಷ, ಮಕ್ಕಳಲ್ಲಿ ಕಂಡು ಬರುವ ಕೆಮ್ಮು, ಅಸ್ತಮಾ, ಬೆನ್ನು ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.

■ **ಪರಿವರ್ತನ ಬ್ಯುಸಿನೆಸ್ ಸ್ಕೂಲ್ :** ಪದವಿ ದಿನಾಚರಣೆ, ಮುಖ್ಯ ಭಾಷಣ : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಮುಕ್ತ ವಿವಿ ವಿಶ್ರಾಂತ ಕುಲಪತಿ ಡಾ. ಎನ್.ಎಸ್. ರಾಮೇಗೌಡ, ಅಧ್ಯಕ್ಷತೆ : ಓಂ ಶ್ರೀನಿಕೇತನ ಟ್ರಸ್ಟ್ ಅಧ್ಯಕ್ಷ ಡಾ. ಎಂ. ಪುಟ್ಟೇಗೌಡ, ಗೌರವ ಅತಿಥಿಗಳು : ಬಿ.ವಿ. ಕುಮಾರ್, ಡಾ. ಕೆ.ಬಿ. ಧನಂಜಯ, ಪಿ. ಮಂಜುರಾಮ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಮಧ್ಯಾಹ್ನ 10.30ಕ್ಕೆ.

■ **ಮೈಸೂರು ಕನ್ನಡ ವೇದಿಕೆ :** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತ್ಯೋತ್ಸವ, ಸಾಧಕರಿಗೆ ರಾಯಣ್ಣ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ತಹಸೀಲ್ದಾರ್ ಕೆ.ಎಂ. ಮಹೇಶ್‌ಕುಮಾರ್, ಪ್ರಧಾನ ಭಾಷಣ: ಕನ್ನಡ ಉಪನ್ಯಾಸಕ ಪ್ರೊ. ನಂಜುಂಡಸ್ವಾಮಿ, ಸನ್ಮಾನಿಸುವವರು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಖ್ಯ ಅತಿಥಿಗಳು : ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಉದ್ಯಮಿ ಚೇತನ್, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಪ್ರಾಸ್ತಾವಿಕ ನುಡಿ : ನಾಲಾಬೀದಿ ರವಿ, ಸ್ಥಳ: ಸ್ವಾತಂತ್ರ್ಯ ಉದ್ಯಾನವನ, ಸುಬ್ಬರಾಯನಕೆರೆ, ಬೆಳಗ್ಗೆ 11.30ಕ್ಕೆ.

■ **ಶ್ರೀಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ. ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಪ್ರವಚನ, ವಾಚನ–ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ಗಂಟೆಯಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಕೈವಲ್ಯೋಪನಿಷದ್ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ಪೋಷಕರ ಸಮಾವೇಶ, ಉದ್ಘಾಟನೆ : ಅಂತರರಾಷ್ಟ್ರೀಯ ವ್ಯಕ್ತಿತ್ವ ವಿಕಸನ ತರಬೇತುದಾರ ಆರ್.ಎ. ಚೇತನ್‌ರಾವ್, ಅಧ್ಯಕ್ಷತೆ : ಪೋಷಕರ ಸಂಘದ ಅಧ್ಯಕ್ಷೆ ಶ್ರೀಮತಿ ಕೆ.ವಿ. ಸೌಮ್ಯ, ಉಪಸ್ಥಿತರು : ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ. ಮುರಳೀಧರ ಭಾಗವತ್, ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಪೋಷಕರ ಸಂಘದ ಕಾರ್ಯದರ್ಶಿ ಮರಿಗೌಡ, ಸ್ಥಳ : ವಿವೇಕಾನಂದ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷದ್ :** ಬಹುಭಾಷಾ ದೇಶಭಕ್ತಿ ಗೀತ ಗಾಯನ ಸ್ಪರ್ಧೆ, ಉದ್ಘಾಟನೆ : ಡಾ. ಪಿ.ಹೆಚ್. ರಾಘವೇಂದ್ರ ಶೆಟ್ಟಿ, ಮುಖ್ಯ ಅತಿಥಿಗಳು : ವಿಜಯ ವಿಠ್ಠಲ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಎಚ್. ಸತ್ಯಪ್ರಸಾದ್, ಶ್ರೀಮತಿ ಕೌಸಲ್ಯಾ ರವೀಂದ್ರ, ಸ್ಥಳ: ವಿಜಯ ವಿಠ್ಠಲ ಪದವಿಪೂರ್ವ ಕಾಲೇಜು, ಸರಸ್ವತಿಪುರಂ, ಮಧ್ಯಾಹ್ನ 2.15ಕ್ಕೆ.

■ **ಬೆಂಗಳೂರಿನ ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು–ಮೈಸೂರು ಭಾರತೀಯ ವಿದ್ಯಾಭವನ :** 149ನೇ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ವಿದ್ವಾನ್ ಎಂ. ತ್ಯಾಗರಾಜು ಅವರಿಂದ ಸಂತೂರ್ ವಾದನ, ಆರ್. ದಾಸಪ್ಪ– ತಬಲ, ಎಂ.ಎಸ್. ಜಯರಾಮ್ – ಮೃದಂಗ, ಕಿರಣ್ ಕುಮಾರ್–ಘಟಂ ಮತ್ತು ತುಮಕೂರು ಯಶಸ್ವೀ–ಪಿಟೀಲು ವಾದನ, ಸ್ಥಳ: ಭಾರತೀಯ ವಿದ್ಯಾಭವನ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.

■ **ಶ್ರೀರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ವಿದುಷಿ ಕಮಲ ದೀಪ್ತಿ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀ ರಾಮಮಂದಿರ ಆವರಣ, ಶಿವರಾಂಪೇಟೆ, ಸಂಜೆ 6.30 ರಿಂದ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಸಮಾರೋಪ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಶ್ರೀ ಕುದೇರು ಮಠದ ಶ್ರೀ ಇಮ್ಮಡಿ ಗುರುಲಿಂಗ ಸ್ವಾಮೀಜಿ, ಅಧ್ಯಕ್ಷತೆ: ನಗರ ಮಾಪನ ಯೋಜನಾಧಿಕಾರಿ ಶ್ರೀಮತಿ ಜಿ. ಸೀಮಂತಿನಿ, ಸಮಾರೋಪ ಭಾಷಣ : ತಹಸೀಲ್ದಾರ್ ಕೆ.ಎಂ. ಮಹೇಶ್‌ಕುಮಾರ್, ಬಹುಮಾನ ವಿತರಣೆ : ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ ಉಪನಿರ್ದೇಶಕರಾದ ಶ್ರೀಮತಿ ಎಲ್. ಮೇಘಲ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಮತ್ತು ಡಾ. ಬಿ.ವಿ. ವಸಂತಕುಮಾರ್ ಅವರಿಂದ ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಕೃತಿಯ ಪ್ರವಚನ, ಸಂಜೆ 6ಕ್ಕೆ.

■ **ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠ :** ಚಾತುರ್ಮಾಸ್ಯದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ, ವಿದುಷಿ ದೀಪ್ತಿ ಮೋಹನ್ ಮತ್ತು ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀ ಪರಕಾಲ ಮಠ, ಜಗನ್ಮೋಹನ ಅರಮನೆ ಸಮೀಪ, ಸಂಜೆ 6ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್. ಶೇಷಗಿರಿರಾವ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್ ಹಾಗೂ ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್


ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿಹಾಡು, 3.30 ಮಕ್ಕಳ ಮಂಟಪ, 4.00 ನಾಟಕ–ದೇವರ ಮುಡಿ–ತರಾಸು ಅವರ ಹಂಸಗೀತೆ ಆಧಾರಿತ ನಾಟಕ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), ರೂಪಕ–ಶಿವಪುರದ ವೀರ, 6.50 ಕೃಷಿರಂಗ :ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ–ಕೃಷಿ ಹಾಗೂ ಆರೋಗ್ಯ ಕುರಿತ ಸಂವಾದ, ಭಾಗವಹಿಸುತ್ತಾರೆ–ಶ್ರೀರಂಗಪಟ್ಟಣ ತಾಲ್ಲೂಕು ಬೊಮ್ಮಾರು ಅಗ್ರಹಾರದ ಕೃಷಿಕ ದಂಪತಿ ಎಸ್. ಕೆ. ಶಿವರಾಮ್ ಮತ್ತು ಕುಸುಮಾ ಶಿವರಾಮ್, ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಇಸ್ ಸಪ್ತಾಹ್ ಮೆ ಸಂಸದ್, 8.15 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ನಿರ್ಮಲ್ ಸೈನಿ– ಗೀಟಾರ್ ವಾದನ

ಮೈಸೂರು ಮಿತ್ರ

ಶನಿವಾರ 23 ಆಗಸ್ಟ್ 2025

ಕಾಂಗ್ರೆಸ್ ಶಾಸಕ ವೀರೇಂದ್ರ ಪಪ್ಪಿ, ಪಕ್ಷದ ನಾಯಕಿ ಕುಸುಮಾ ಹನುಮಂತರಾಯಪ್ಪ ಮನೆ, ಕಚೇರಿ ಮೇಲೆ ಇಡಿ ದಾಳಿ

ಕ್ಯಾಸಿನೋ, ಆನ್‌ಲೈನ್ ಬೆಟ್ಟಿಂಗ್ ಸೇರಿ ಹಲವು ವ್ಯವಹಾರಗಳ ಸಂಬಂಧ 30 ಕಡೆ ತಲಾಷ್



ಕುಸುಮಾ



ವೀರೇಂದ್ರ ಪಪ್ಪಿ

ಬೆಂಗಳೂರು, ಆ. 22(ಕೆಎಂಶಿ)– ಕಾಂಗ್ರೆಸ್ ಶಾಸಕ ವೀರೇಂದ್ರ ಪಪ್ಪಿ ಹಾಗೂ ಪಕ್ಷದ ನಾಯಕಿ ಕುಸುಮಾ ಹನುಮಂತ ರಾಯಪ್ಪ ಅವರ ಮನೆ ಹಾಗೂ ಕಚೇರಿ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ.) ದಾಳಿ ನಡೆಸಿದೆ.

ಕ್ಯಾಸಿನೊ, ಆನ್‌ಲೈನ್ ಬೆಟ್ಟಿಂಗ್ ಸೇರಿದಂತೆ ವಿವಿಧ ವ್ಯವಹಾರಗಳಿಗೆ ಸಂಬಂಧಿಸಿದಂತೆ 30 ಸ್ಥಳಗಳಲ್ಲಿ ಇ.ಡಿ. ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ಮಾಡಿದೆ.

ಕುಸುಮಾ ಹನುಮಂತರಾಯಪ್ಪ ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಜರಾಜೇಶ್ವರಿನಗರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು.

ಕುಸುಮಾ ಅವರ ಸಹೋದರ ಅನಿಲ್ ಗೌಡ ಅವರು, ವೀರೇಂದ್ರ ಪಪ್ಪಿ ಹಾಗೂ ಅವರ ಸಹೋದರ ಕೆ.ಸಿ.ತಿಪ್ಪೇಸ್ವಾಮಿ ಜೊತೆ ವ್ಯವಹಾರ ನಡೆಸುತ್ತಿದ್ದರು ಎಂಬ ಆರೋಪದ ಮೇಲೆ ದಾಳಿ ನಡೆದಿದೆ.

ಇ.ಡಿ. ನೀಡಿರುವ ಪತ್ರಿಕಾ ಹೇಳಿಕೆ ಪ್ರಕಾರ, ಅಕ್ರಮ ಆನ್‌ಲೈನ್ ಮತ್ತು ಆಫ್‌ಲೈನ್ ಬೆಟ್ಟಿಂಗ್ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ 6, ಬೆಂಗಳೂರಿನಲ್ಲಿ 10, ರಾಜಾಸ್ತಾನದ ಜೋಧ್‌ಪುರದಲ್ಲಿ 3, ಹುಬ್ಬಳ್ಳಿ 1, ಮುಂಬೈ 2, ಗೋವಾದ 8 ಕಡೆ ಸೇರಿದಂತೆ 30 ಕಡೆಗಳಲ್ಲಿ ದಾಳಿ ನಡೆಸಿದ್ದು, ಐದು ಕ್ಯಾಸಿನೊಗಳಲ್ಲಿ ಹಣ ಹೂಡಿಕೆ ಪತ್ತೆಯಾಗಿದೆ.

ಈ ಕ್ಯಾಸಿನೋ ಮೂಲಕ ಅಕ್ರಮ ಚಟುವಟಿಕೆ ಪತ್ತೆ ಹಚ್ಚಿದ್ದು, ಕಿಂಗ್ 567, ರಾಜ 567, ಪಪ್ಪೀಸ್ 003, ರತ್ನ ಗ್ಯಾಂಬ್ಲಿಂಗ್ ಹೆಸರಿನಲ್ಲಿ ಆನ್‌ಲೈನ್ ಬೆಟ್ಟಿಂಗ್ ವೆಬ್‌ಸೈಟ್‌ಗಳನ್ನು ನಡೆಸುತ್ತಿದ್ದರು. ವೀರೇಂದ್ರ ಪಪ್ಪಿ ಸಹೋದರ ತಿಪ್ಪೇಸ್ವಾಮಿ, ದುಬೈನಿಂದ ಡೈಮೆಂಡ್ ಸಾಫ್ಟ್‌ಟೆಕ್, ಟಿಆರ್‌ಎಸ್ ಟೆಕ್ನಾಲಜೀಸ್ ಹಾಗೂ ಪ್ರೈಮ್ 9 ಟೆಕ್ನಾಲಜೀಸ್ ವ್ಯವಹಾರ ಸಂಸ್ಥೆಗಳನ್ನು ನಡೆಸುತ್ತಿದ್ದರು. ಈ ಸಂಸ್ಥೆಗಳ ಕಾಲ್ ಸೆಂಟರ್ ಸೇವೆಗಳು ಮತ್ತು ಗೇಮಿಂಗ್ ವ್ಯವಹಾರಗಳಿಗೆ ಸಂಬಂಧಿಸಿದ್ದಾಗಿವೆ, ಇವರ ಜೊತೆ ಸಂಬಂಧ ಇಟ್ಟುಕೊಂಡವರು ಮತ್ತು ಪಾಲುದಾರಿಕೆಯಲ್ಲಿರುವ ಅನಿಲ್ ಗೌಡ ಸೇರಿದಂತೆ ಇತರರ ಮನೆ ಮತ್ತು ಕಚೇರಿಗಳ ಮೇಲೂ ದಾಳಿ ನಡೆಸಿರುವುದಾಗಿ ತಿಳಿಸಿದ್ದಾರೆ.

ಶಾಸಕ ವೀರೇಂದ್ರ ಪಪ್ಪಿ ಸಿಕ್ಕಿಂನಲ್ಲಿ ಇಡಿ ವಶಕ್ಕೆ

ಬೆಂಗಳೂರು, ಆ.22– ಅಕ್ರಮ ಹಣ ವರ್ಗಾವಣೆ, ಅಕ್ರಮ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ನಿವಾಸದ ಮೇಲೆ ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ಶುಕ್ರವಾರ ಬೆಳ್ಳಂಬೆಳಗ್ಗೆ ದಾಳಿ ನಡೆಸಿ, ಶೋಧ ಕಾರ್ಯಾಚರಣೆ ನಡೆಸಿದರು. ಇದರ ಬೆನ್ನಲ್ಲೇ ಸಿಕ್ಕಿಂನಲ್ಲಿ ಶಾಸಕ ವೀರೇಂದ್ರ ಪಪ್ಪಿಯನ್ನು ವಶಕ್ಕೆ ಪಡೆದಿದ್ದಾರೆ.

ಆನ್‌ಲೈನ್ ಗೇಮಿಂಗ್ ಆ್ಯಪ್ ಕಂಪನಿಗಳಿಗೆ ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಆರೋಪ ವೀರೇಂದ್ರ ಪಪ್ಪಿ ಮೇಲಿದ್ದು ಈ ಸಂಬಂಧ ಗೋವಾದಲ್ಲಿ ಪಪ್ಪಿ ವಿರುದ್ಧ ಎರಡು ಎಫ್‌ಐಆರ್ ದಾಖಲಾಗಿವೆ. ಅಕ್ರಮ ಹಣ ವರ್ಗಾವಣೆ ಆರೋಪದ ಹಿನ್ನೆಲೆಯಲ್ಲಿ ಇಡಿ ಅಧಿಕಾರಿಗಳು ಇಸಿಐಆರ್ ದಾಖಲಿಸಿಕೊಂಡು ದಾಳಿ ನಡೆಸಿ ದಾಖಲೆ ಪತ್ರಗಳ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ. ವೀರೇಂದ್ರ ಅವರು ಕಿಂಗ್ 567, ರಾಜ 567, ಪಪ್ಪೀಸ್ 003, ರತ್ನ ಗೇಮಿಂಗ್ ಮುಂತಾದ ಆನ್‌ಲೈನ್ ಬೆಟ್ಟಿಂಗ್ ಸೈಟ್‌ಗಳನ್ನು ನಡೆಸುತ್ತಿದ್ದಾರೆ ಎಂದು ಆರೋಪಿಸಲಾಗಿದೆ. ಅವರ ಸಹೋದರ ಕೆಸಿ. ತಿಪ್ಪೇಸ್ವಾಮಿ ದುಬೈನಿಂದ ಡೈಮಂಡ್ ಸಾಫ್ಟೆಕ್, ಟಿಆರ್‌ಎಸ್ ಟೆಕ್ನಾಲಜೀಸ್ ಮತ್ತು ಪ್ರೈಮ್ 9 ಟೆಕ್ನಾಲಜೀಸ್ ಎಂಬ ಮೂರು ವ್ಯವಹಾರ ಸಂಸ್ಥೆಗಳನ್ನು ನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸಲಾಗಿದೆ. ಈ ಸಂಸ್ಥೆಗಳು ಕಾಲ್ ಸೆಂಟರ್ ಸೇವೆಗಳು ಮತ್ತು ವೀರೇಂದ್ರ ಅವರ ಗೇಮಿಂಗ್ ವ್ಯವಹಾರಕ್ಕೆ ಸಂಬಂಧಪಟ್ಟಿವೆ.

ಶಾಸಕ ಕೆ.ಸಿ.ವೀರೇಂದ್ರ ಸಹೋದರ ಕೆ.ಸಿ.ನಾಗರಾಜ್ ಇಡಿ ವಶಕ್ಕೆ

ಚಿತ್ರದುರ್ಗ, ಆ.22– ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ಶುಕ್ರವಾರ ಚಳ್ಳಕೆರೆಯಲ್ಲಿರುವ ಚಿತ್ರದುರ್ಗ ಶಾಸಕ ಕೆ.ಸಿ.ವೀರೇಂದ್ರ ಹಾಗೂ ಅವರ ಸಹೋದರರ ಮನೆ ಮೇಲೆ ದಾಳಿ ನಡೆಸಿದ್ದಾರೆ. ವೀರೇಂದ್ರ ಸಹೋದರ ಕೆ.ಸಿ.ನಾಗರಾಜ್ ಅವರನ್ನು ವಶಕ್ಕೆ ಪಡೆದಿರುವ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದಾರೆ.

3 ಕಾರ್‌ನಲ್ಲಿ ಬಂದ 10 ಅಧಿಕಾರಿಗಳ ತಂಡ ಏಕಕಾಲದಲ್ಲಿ ನಾಲ್ಕು ಕಡೆಗಳಲ್ಲಿ ದಾಳಿ ನಡೆಸಿತು. ಶಾಸಕ ಕೆ.ಸಿ.ವೀರೇಂದ್ರ ಅವರ ಮನೆ, ಸಹೋದರರಾದ ಕೆ.ಸಿ.ನಾಗರಾಜ್, ಕೆ.ಸಿ.ತಿಪ್ಪೇಸ್ವಾಮಿ ಅವರ ಮನೆಗಳಿಗೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಸಿಆರ್‌ಪಿಎಫ್ ಯೋಧರು ಮನೆ ಸುತ್ತಲೂ ಭದ್ರತೆ ಕೈಗೊಂಡಿದ್ದಾರೆ. ಶಾಸಕರ ಮನೆಗೆ ಸಂಪರ್ಕಿಸುವ ಎಲ್ಲಾ ರಸ್ತೆಗಳನ್ನು ಬ್ಯಾರಿಕೇಡ್ ಹಾಕಿ ಬಂದ್ ಮಾಡಲಾಗಿದೆ.

ದಾಳಿಯ ನಂತರ ಶಾಸಕರ ಸಹೋದರ ಕೆ.ಸಿ.ನಾಗರಾಜ್ ವಕೀಲರೊಬ್ಬರನ್ನು ಕರೆದುಕೊಂಡು ಬಂದರು. ಅಧಿಕಾರಿಗಳು ನಾಗರಾಜ್ ಅವರನ್ನು ವಶಕ್ಕೆ ಪಡೆದು ವಕೀಲ ಉಮೇಶ್ ಅವರನ್ನು ವಾಪಸ್ ಕಳುಹಿಸಿದರು. ಈ ವೇಳೆ ಮಾಧ್ಯಮಗಳ ಜೊತೆ ಮಾತನಾಡಿದ ಕೆ.ಸಿ.ನಾಗರಾಜ್, ನಾನು ಬೆಂಗಳೂರಿನಿಂದ ಬಂದಿದ್ದೇನೆ. ಯಾವ ಕಾರಣಕ್ಕೆ ದಾಳಿ ನಡೆಸಿದ್ದಾರೆ ಎಂಬ ಬಗ್ಗೆ ಮಾಹಿತಿ ಇಲ್ಲ ಎಂದರು.

ಇಂದು ನಗರದಲ್ಲಿ ಎರಡು ಕಿರು ಚಿತ್ರಗಳ ರಸದೌತಣ

ಮೈಸೂರು, ಆ. 22– ಮೈಸೂರು ಸಿನಿಮಾ ಸೊಸೈಟಿ ವತಿಯಿಂದ ಆ. 23ರಂದು ಸರಸ್ವತಿಪುರಂನ 1ನೇ ಮೇನ್, 5ನೇ ಅಡ್ಡ ರಸ್ತೆಯಲ್ಲಿರುವ ಸುಮಶ್ರೀ ಆರ್ಕೇಡ್‌ನಲ್ಲಿ ಎರಡು ಕಿರುಚಿತ್ರಗಳ ಪ್ರದರ್ಶನ ಏರ್ಪಡಿಸಿದೆ. ಅಂದು ಸಂಜೆ 7ರಿಂದ 8 ಗಂಟೆಯ ವರೆಗೆ ಲಾಸ್ಟ್ ಇನ್ ಟೆಲಿಪೋರ್ಟೇಶನ್ ಮತ್ತು ತೇಂಚಿಟ್ಟು ಕೇಟರಿಂಗ್ ಸರ್ವೀಸ್ ಚಿತ್ರಗಳ ಪ್ರದರ್ಶನ ನಡೆಯಲಿದೆ. ಹೆಚ್ಚಿನ ಮಾಹಿತಿ– ಉಚಿತ ನೋಂದಣಿಗಾಗಿ 99805 96824 ಸಂಪರ್ಕಿಸಬಹುದು.

ಚಿನ್ನಸ್ವಾಮಿ ಕ್ರೀಡಾಂಗಣ ಬಳಿ ಕಾಲ್ತುಳಿತ ದುರಂತ

ಘಟನೆಗೆ ಕಾರಣರಾದವರ ಕ್ಷಮಿಸುವ ಪ್ರಶ್ನೆಯೇ ಇಲ್ಲ

● ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಘೋಷಣೆ ● ಘಟನೆ ಕುರಿತಂತೆ ನಿಯಮ 69ರಡಿ ಚರ್ಚೆಗೆ ಸುದೀರ್ಘ ಉತ್ತರ ● ನನ್ನ ಸುದೀರ್ಘ ರಾಜಕೀಯ ಜೀವನದಲ್ಲಿ ಇಂತಹ ಘಟನೆ ನಡೆದಿಲ್ಲ ● ಘಟನೆ ನಡೆದ ತಕ್ಷಣ ವಿಷಾದ ವ್ಯಕ್ತಪಡಿಸಿದ್ದೆ; ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ ● ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ನಡೆದ ದುರಂತಗಳಲ್ಲಿ ಅಲ್ಲಿನ ಸಿಎಂಗಳು ರಾಜೀನಾಮೆ ಕೊಟ್ಟಿದ್ದಾರಾ!

ಬೆಂಗಳೂರು, ಆ. 22(ಕೆಎಂಶಿ)– ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ದುರಂತ ಪ್ರಕರಣ ತಮ್ಮ ಸುದೀರ್ಘ ರಾಜಕೀಯ ಬದುಕಿನಲ್ಲಿ ಅತ್ಯಂತ ಕಹಿ ಘಟನೆ ಎಂದು ಹೇಳಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಇದಕ್ಕೆ ಕಾರಣರಾದ ಯಾವುದೇ ವ್ಯಕ್ತಿಯನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ ಎಂದು ವಿಧಾನಸಭೆಯಲ್ಲಿ ಘೋಷಿಸಿದ್ದಾರೆ.

ಕಾಲ್ತುಳಿತ ಘಟನೆಯ ಕುರಿತಂತೆ ನಿಯಮ 69ರ ಅಡಿಯಲ್ಲಿ ನಡೆದ ಚರ್ಚೆಗೆ ಸುದೀರ್ಘ ಉತ್ತರ ನೀಡಿದ ಅವರು, ಘಟನೆಯ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಗೃಹ ಮಂತ್ರಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂಬ ಪ್ರತಿಪಕ್ಷಗಳ ಆಗ್ರಹವನ್ನು ತಳ್ಳಿ ಹಾಕಿದರು.

ಈ ಘಟನೆ ನಡೆಯಬಾರದಿತ್ತು, ಈ ಘಟನೆಯಿಂದ ನಮಗೂ ನೋವಾಗಿದೆ. ಈ ಘಟನೆಯ ಬಗ್ಗೆ ನಾನು ಹಿಂದೆಯೂ ವಿಷಾದ ವ್ಯಕ್ತಪಡಿಸಿದ್ದೆ, ಈಗಲೂ ವಿಷಾದ ವ್ಯಕ್ತಪಡಿಸುತ್ತಿದ್ದೇನೆ. ಈ ಘಟನೆಗೆ ಸರ್ಕಾರ ಜವಾಬ್ದಾರಿ, ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಗೃಹ ಸಚಿವರು ರಾಜೀನಾಮೆ ನೀಡಬೇಕು ಎಂಬ ಪ್ರತಿಪಕ್ಷಗಳ ಒತ್ತಾಯ ಸರಿಯಲ್ಲ ಎಂದು ಹೇಳಿದರು.

ದುರಂತದ ಬಗ್ಗೆ ನಿವೃತ್ತ ನ್ಯಾಯಮೂರ್ತಿ ಮೈಕೇಲ್ ಡಿ. ಕುನ್ಹಾ ಕಳೆದ ಜುಲೈ 10ರಂದು ವರದಿ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳು ಜುಲೈ 11 ರಂದು ವರದಿ ಕೊಟ್ಟಿದ್ದಾರೆ. ಈ ಘಟನೆ ಬಗ್ಗೆ ರಾಜ್ಯ ಹೈಕೋರ್ಟ್ ಕೂಡ ಸ್ವಯಂ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ ಎಂದು ಹೇಳಿದರು.

ಇಡೀ ಘಟನೆಯನ್ನು ನಾವು ಸಿಐಡಿ ತನಿಖೆಗೆ ವಹಿಸಿದ್ದೇವೆ. ದೋಷಾರೋಪ ಪಟ್ಟಿಯೂ ಸಿದ್ಧವಾಗಿದೆ. ನ್ಯಾಯಾಲಯದ ಅನುಮತಿ ಸಿಕ್ಕ ನಂತರ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯನ್ನು ಸಲ್ಲಿಸುತ್ತೇವೆ. ಘಟನೆ ಸಂಬಂಧ ಆರ್‌ಸಿಬಿ, ಕೆಎಸ್‌ಸಿಎ ಮತ್ತು ಡಿಎನ್‌ಎ ಸಂಸ್ಥೆಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಆ ಸಂಸ್ಥೆಗಳ ಕೆಲವರನ್ನು ಬಂಧಿಸಿದ್ದೆವು. ಈಗ ಅವರೆಲ್ಲಾ ಜಾಮೀನಿನ ಮೇಲೆ ಹೊರಗಿದ್ದಾರೆ ಎಂದು ವಿವರಿಸಿದರು.

ಘಟನೆ ನಡೆದಂದೇ ವಿಷಾದಿಸಿದ್ದೇನೆ: ಕಾಲ್ತುಳಿತ ಘಟನೆಯ ಬಗ್ಗೆ ಮುಖ್ಯಮಂತ್ರಿಗಳಿಗೆ ಮನುಷ್ಯತ್ವ ಇದ್ದರೆ, ಹೃದಯ ಇದ್ದಿದ್ದರೆ ತಪ್ಪಾಯಿತು ಎಂದು ಕ್ಷಮೆ ಕೇಳಬೇಕು ಎಂದೆಲ್ಲಾ ಪ್ರತಿಪಕ್ಷ ನಾಯಕರು ಹೇಳಿದ್ದಾರೆ. ಆ ಘಟನೆ ನಡೆದ ದಿನವೇ ನಾನು ವಿಷಾದ ವ್ಯಕ್ತಪಡಿಸಿದ್ದೇನೆ. ನಡೆಯಬಾರದ ಘಟನೆ ನಡೆದಿದೆ, 42 ವರ್ಷಗಳಿಗೂ ಹೆಚ್ಚು ಕಾಲದ ನನ್ನ ರಾಜಕೀಯ ಬದುಕಿನಲ್ಲಿ ಈ ರೀತಿಯ ಕಹಿ ಘಟನೆ ನಡೆದಿದೆ ಎಂದು ನಾನು ಹೇಳಿದ್ದೇನೆ. ನನಗೂ ಈ ಘಟನೆಯ ಬಗ್ಗೆ ದುಃಖ ಇದೆ ಎಂದು ವಿಷಾದ ವ್ಯಕ್ತಪಡಿಸಿದ್ದೇನೆ ಎಂದು ತಿಳಿಸಿದರು.



ತಿಂಡಿ ತಿಂದ ಮೇಲೆ ಘಟನೆ ತಿಳಿಯಿತು: ಈ ಘಟನೆಯ ಬಗ್ಗೆ ನನಗೆ ಮಾಹಿತಿ ಗೊತ್ತಾದ ನಂತರ ಇಡೀ ದಿನ ಡಿಸ್ಟರ್ಬ್ ಆಗಿದ್ದೆ. ಈ ಘಟನೆ ಗೊತ್ತಿದ್ದರೂ ಹೋಟೆಲ್‌ಗೆ ದೋಸೆ ತಿನ್ನಲು ಹೋಗಿದ್ದೆ ಎನ್ನುವುದು ತಪ್ಪು. ನಾನು ಹೋಟೆಲ್‌ಗೆ ಹೋಗಿದ್ದು ನಿಜ. ಆದರೆ, ಹೋಟೆಲ್‌ನಲ್ಲಿ ನಾನು ತಿಂಡಿ ತಿಂದ ಮೇಲೆ ಈ ಘಟನೆಯ ಬಗ್ಗೆ ಕಾನೂನು ಸಲಹೆಗಾರರು ಮಾಹಿತಿ ನೀಡಿದರು. ಆಗ ನಾನು ಪೊಲೀಸ್ ಆಯುಕ್ತರಿಗೆ ದೂರವಾಣಿ ಮಾಡಿ ವಿಚಾರಿಸಿದೆ. ಆಗ ಅವರು ಒಬ್ಬರು ಸತ್ತಿದ್ದಾರೆ ಎಂದು ಹೇಳಿದರು. ಇದು ನಿಜ ಸಂಗತಿ. ಘಟನೆಯಿಂದ ನನಗೂ ಬಹಳ ದುಃಖವಾಗಿದೆ

ಸಾರ್ವಜನಿಕರು ತೀರ್ಮಾನಿಸ್ತಾರೆ: ಚಿಕ್ಕವಯಸ್ಸಿನ ಹುಡುಗರು ಸತ್ತಿರುವುದು ನನಗೂ ನೋವು ತಂದಿದೆ. ಗೃಹ ಸಚಿವರ ಜತೆ ನಾನು ಸಹ ಆಸ್ಪತ್ರೆಗೆ ಭೇಟಿ ನೀಡಿದ್ದೆ. ನಂತರ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ನೇತೃತ್ವದಲ್ಲಿ ಮ್ಯಾಜಿಸ್ಟ್ರಿಯಲ್ ತನಿಖೆಗೂ ಆದೇಶಿಸಿದೆ. ನಂತರ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕುನ್ಹಾ ನೇತೃತ್ವದಲ್ಲಿ ಆಯೋಗ ರಚಿಸಿ ಒಂದು ತಿಂಗಳಲ್ಲಿ ವರದಿ ನೀಡುವಂತೆಯೂ ತಿಳಿಸಿದ್ದೆ. ಸರ್ಕಾರವನ್ನು ಅಬೆಟರ್ ಎಂದು ಕರೆದಿದ್ದಾರೆ. ಸರ್ಕಾರ ಈ ಘಟನೆಗೆ ಹೊಣೆಯೇ, ಇಲ್ಲವೇ ಎಂಬುದು ಸಾರ್ವಜನಿಕರಿಗೂ ಗೊತ್ತಿದೆ, ಎಲ್ಲವನ್ನೂ ಜನ ತೀರ್ಮಾನ ಮಾಡುತ್ತಾರೆ ಎಂದರು.

ಬಿಜೆಪಿ ಸಿಎಂಗಳು ರಾಜೀನಾಮೆ ಕೊಟ್ಟರಾ: ಇತ್ತೀಚೆಗೆ ನಡೆದ ಕುಂಭಮೇಳದಲ್ಲಿ ಕಾಲ್ತುಳಿತ ಘಟನೆ ಸೇರಿದಂತೆ ಗುಜರಾತ್, ಬಿಹಾರ್, ಮಧ್ಯಪ್ರದೇಶ, ಉತ್ತರ ಪ್ರದೇಶ, ರಾಜಸ್ಥಾನ, ಉತ್ತರಾಖಂಡಗಳಲ್ಲಿ ಸಂಭವಿಸಿರುವ ಕಾಲ್ತುಳಿತ ಘಟನೆಗಳನ್ನು ಪ್ರಸ್ತಾಪಿಸಿದ ಅವರು, ಈ ಘಟನೆಗಳಾದಾಗ ಅಲ್ಲಿನ ರಾಜ್ಯಗಳಲ್ಲಿ ಬಿಜೆಪಿಯವರೇ ಮುಖ್ಯಮಂತ್ರಿಗಳಾಗಿದ್ದರು, ಅವರೆಲ್ಲಾ ರಾಜೀನಾಮೆ ಕೊಟ್ಟಿದ್ದಾರಾ, ಅವರೆಲ್ಲಾ ಕ್ಷಮೆ ಕೇಳಿದ್ದಾರೆಯೇ ಎಂದು ಪ್ರಶ್ನಿಸಿದರು.

ಗುಜರಾತ್‌ನಲ್ಲಿ ಇತ್ತೀಚೆಗೆ ಏರ್ ಇಂಡಿಯಾ ವಿಮಾನ ದುರಂತ ಸಂಭವಿಸಿತು, ಈ ಹಿಂದೆ ಹಾವೇರಿಯಲ್ಲಿ ಗೊಬ್ಬರ ಕೇಳಿದ ರೈತರ ಮೇಲೆ ಗೋಲಿಬಾರ್ ಮಾಡಲಾಯಿತು. ವರನಟ ಡಾ.ರಾಜ್‌ಕುಮಾರ್ ಮೃತಪಟ್ಟಾಗ ಗೋಲಿಬಾರ್ ಆಗಿ ನಾಲ್ವರು ಸತ್ತರು. ಆಗ ಕುಮಾರಸ್ವಾಮಿ ಮುಖ್ಯಮಂತ್ರಿ, ಯಡಿಯೂರಪ್ಪ ಉಪಮುಖ್ಯಮಂತ್ರಿ, ಇವರು ರಾಜೀನಾಮೆ ಕೊಟ್ಟರಾ, ತಪ್ಪಾಯಿತು ಎಂದು ಹೇಳಿದರಾ ಎಂದು ವಾಗ್ದಾಳಿ ನಡೆಸಿದರು.

ಈ ವಿಚಾರವನ್ನು ರಾಜಕೀಯ ಮಾಡುವುದು ಬೇಡ, ಕ್ಷಮಾಪಣೆ ಕೇಳಿ ಎಂದು ನಮಗೆ ಪಾಠ ಮಾಡಲು ಬರಬೇಡಿ ದುರಂತಕ್ಕೆ ಸಂಭವಿಸಿದಂತೆ ಮೂವರು ಐಪಿಎಸ್ ಅಧಿಕಾರಿಗಳು ಸೇರಿದಂತೆ ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದೇವೆ. ಗುಪ್ತಚಾರ ಮುಖ್ಯಸ್ಥರನ್ನು ವರ್ಗಾವಣೆ ಮಾಡಿದ್ದೇವೆ. ತಪ್ಪಿತಸ್ಥರು ಯಾರೇ ಆಗಲಿ ಅವರ ವಿರುದ್ಧ ಕಠಿಣ ಕ್ರಮ ನಿಶ್ಚಿತ ಎಂದು ಘೋಷಿಸಿದರು.


ಈ ಉತ್ತರಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಪ್ರತಿಪಕ್ಷ ಸದಸ್ಯರು, ಮುಖ್ಯಮಂತ್ರಿ ತಪ್ಪನ್ನು ಒಪ್ಪಿಕೊಳ್ಳುತ್ತಿಲ್ಲ. ಕ್ಷಮಾಪಣೆ ಕೇಳುತ್ತಿಲ್ಲ. ಅವರು ನೀಡಿದ ಉತ್ತರ ನಮಗೆ ತೃಪ್ತಿ ತಂದಿಲ್ಲ ಎಂದು ಸಭಾತ್ಯಾಗ ಮಾಡಿದರು.

ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಆರೋಪ; ಮೂವರ ವಿರುದ್ಧ ಎಫ್‌ಐಆರ್

ನಾನೇ ಸರೆಂಡರ್ ಆಗ್ತೀನಿ ಎಂದು ಹೈಡ್ರಾಮ ಮಾಡಿದ ಗಿರೀಶ್ ಮಟ್ಟಣ್ಣನವರ್

ಮಂಗಳೂರು, ಆ.22– ಮಹೇಶ್ ಶೆಟ್ಟಿ ತಿಮರೋಡಿ ಬಂಧನದ ವೇಳೆ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಹಿನ್ನೆಲೆಯಲ್ಲಿ ಬ್ರಹ್ಮಾವರ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ನೀಡಿದ ದೂರಿನ ಮೇರೆಗೆ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಲ್ಲಿ ಸೌಜನ್ಯ ಪರ ಹೋರಾಟಗಾರ ಗಿರೀಶ್ ಮಟ್ಟಣ್ಣವರ್ ಸೇರಿ ಮೂವರ ವಿರುದ್ಧ ಬೆಳ್ತಂಗಡಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬಿ.ಎಲ್.ಸಂತೋಷ್ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದರು ಎಂದು ಉಡುಪಿಯ ಬಿಜೆಪಿ ಮುಖಂಡರು ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ಬ್ರಹ್ಮಾವರ ಠಾಣೆ ಪೊಲೀಸರಿಗೆ ದೂರು ನೀಡಿದ್ದರು.



ಈ ಹಿನ್ನಲೆಯಲ್ಲಿ ವಿಚಾರಣೆಗೆ ಹಾಜರಾಗುವಂತೆ ತಿಮರೋಡಿಗೆ ಬ್ರಹ್ಮಾವರ ಪೊಲೀಸರು 2 ಬಾರಿ ನೋಟಿಸ್ ಕೊಟ್ಟಿದ್ದರು. ಕೊನೆಯದಾಗಿ ಬುಧವಾರ ನೋಟಿಸ್ ನೀಡಿ, ಗುರುವಾರ ಬೆಳಗ್ಗೆ 9 ಗಂಟೆಯೊಳಗೆ ವಿಚಾರಣೆಗೆ ಹಾಜರಾಗುವಂತೆ ಸೂಚನೆ ನೀಡಲಾಗಿತ್ತು.

ಆದರೆ ಪೊಲೀಸರು ಕೊಟ್ಟ ನೋಟಿಸ್‌ನಲ್ಲೇ '15 ದಿನಗೊಳಗೆ ಹಾಜರಾಗುತ್ತೇನೆ' ಎಂದು ಬರೆದು ತಿಮರೋಡಿ ಸಹಿ ಮಾಡಿದ್ದರು. ಈ ಬೆಳವಣಿಗೆ ನಂತರ ಪೊಲೀಸರು ಅವರ ನಿವಾಸಕ್ಕೆ ದೌಡಾಯಿಸಿ ಅವರನ್ನು ವಶಕ್ಕೆ ಪಡೆದಿದ್ದಾರೆ.

ಈ ವೇಳೆ ಅವರ ಆಪ್ತ ಬಳಗದ ಗಿರೀಶ್ ಮಟ್ಟಣ್ಣನವರ್ ಸೇರಿದಂತೆ ಹಲವರು ಅದಕ್ಕೆ ಅಡ್ಡಪಡಿಸಿದ್ದರು. ಇದರ ವಿರುದ್ಧವೂ ಬ್ರಹ್ಮಾವರ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ದೂರು ನೀಡಿದ್ದರು. ಇದೀಗ ಇದೇ ವಿಚಾರವಾಗಿ ಗಿರೀಶ್ ಮಟ್ಟಣ್ಣನವರ್ ಸೇರಿದಂತೆ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

ತಮ್ಮ ವಿರುದ್ಧ ಕೇಸ್ ದಾಖಲಾದ ವಿಚಾರ ಗೊತ್ತಾಗುತ್ತಿದ್ದಂತೆ ಗಿರೀಶ್ ಮಟ್ಟಣ್ಣನವರ್ ಬೆಳ್ತಂಗಡಿ ಪೊಲೀಸ್ ಠಾಣೆಗೆ ಆಗಮಿಸಿ, ಬಂಧನ ಬೇಡ, ನಾನೇ ಸರೆಂಡರ್ ಆಗುತ್ತೇನೆ ಎಂದು ಹೈಡ್ರಾಮಾ ಸೃಷ್ಟಿಸಿದ್ದಾರೆ. ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಗಿರೀಶ್ ಮಟ್ಟಣನವರ್, ಕೋರ್ಟ್ ಹಾಗೂ ಪೊಲೀಸ್ ಸ್ಟೇಷನ್ ಅಂದರೆ ನನಗೆ ಬೀಗರ ಮನೆ ಆಗಿದೆ. ಮಾನವ ಹಕ್ಕುಗಳ ಆಯೋಗದ ಜೊತೆಗೆ ಬಂದಿದ್ದೇವೆ. ನಿನ್ನೆ ತಿಮರೋಡಿ ಮನೆಗೆ ನೂರು ಜನ ಪೊಲೀಸರು ಬಂಧನಕ್ಕೆ ಬಂದಿದ್ದರು. ಈ ವೇಳೆ ನಾವು ಯಾರೂ ಕೆಲಸಕ್ಕೆ ಅಡ್ಡಿಪಡಿಸಿಲ್ಲ. ಮಹೇಶ್ ತಿಮರೋಡಿ, ಜಯಂತ್ ಮತ್ತು ನನ್ನ ಸೇರಿ 30 ಜನರ ಮೇಲೆ ಕೇಸ್ ಹಾಕಿದ್ದಾರೆ. ಸುಮ್ಮನೆ ಅವರ ಪೆಟ್ರೋಲ್ ವೇಸ್ಟ್ ಆಗೋದು ಬೇಡ. ಹೀಗಾಗಿ ಬಂಧನ ಮಾಡೋದಾದರೆ ಮಾಡಲಿ ಎಂದು ಬಂದಿದ್ದೇನೆ.

ನಮ್ಮನ್ನು ಭಯಪಡಿಸುವ ಕೆಲಸ ಆಗುತ್ತಿದೆ. ನಾವು ಯಾವುದೇ ಕಾರಣಕ್ಕೂ ಭಯಪಡುವುದಿಲ್ಲ. ಇದುವರೆಗೂ ನನ್ನ ಮೇಲೆ ನಾಲ್ಕೈದು ಕೇಸ್ ಹಾಕಿದ್ದಾರೆ. ಮಹೇಶ್ ಶೆಟ್ಟಿ ಮೇಲೆ 10ಕ್ಕೂ ಹೆಚ್ಚು ಕೇಸ್ ಹಾಕಿದ್ದಾರೆ. ಪ್ರತಿನಿತ್ಯ ಒಂದಲ್ಲಾ ಒಂದು ಕೇಸ್ ಹಾಕುತ್ತಲೇ ಇದ್ದಾರೆ. ಎಲ್ಲವನ್ನು ಎದುರಿಸಲು ನಾವು ಸಿದ್ಧವಿದ್ದೇವೆ ಎಂದು ಗಿರೀಶ್ ಮಟ್ಟಣ್ಣನವರ್ ಹೇಳಿಕೆ ನೀಡಿದ್ದಾರೆ.

ತಮಿಳುನಾಡಿಗೆ ನಿಗದಿಗಿಂತ ಹೆಚ್ಚು ನೀರು ಬಿಟ್ಟಿದ್ದೇವೆ; ಹೆಚ್ಚುವರಿ ನೀರು ಸಂಗ್ರಹಿಸಲು ಮೇಕೆದಾಟು ಅಗತ್ಯ

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಬೆಂಗಳೂರು, ಆ.22– ರಾಜ್ಯದ ಕಾವೇರಿ ಜಲಾನಯನ ಪ್ರದೇಶದಲ್ಲಿ ಕಳೆದ ಮೂರು ತಿಂಗಳುಗಳಿಂದ ಭರ್ಜರಿ ಮಳೆಯಾಗುತ್ತಿರುವುದರಿಂದ ತಮಿಳುನಾಡಿಗೆ ಅಗತ್ಯಕ್ಕಿಂತಲೂ ಹೆಚ್ಚಿನ ನೀರು ಹರಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಹೇಳಿದ್ದಾರೆ.

ಕರ್ನಾಟಕವು ನೆರೆಯ ರಾಜ್ಯಕ್ಕೆ ನಿಗದಿ ಮಾಡಿದ್ದಕ್ಕಿಂತ ಹೆಚ್ಚಿನ ನೀರನ್ನು ಬಿಡುಗಡೆ ಮಾಡುತ್ತಿದೆ. ಹೆಚ್ಚುವರಿ ನೀರು ಸಂಗ್ರಹಿಸಲು ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟುವಿನಲ್ಲಿ ಸಮತೋಲನ ಜಲಾಶಯ ನಿರ್ಮಾಣ ಮಾಡುವ ಅಗತ್ಯ ಇದೆ ಎಂದು ಸಿದ್ದರಾಮಯ್ಯ ಅವರು ಇಂದು ವಿಧಾನಸಭೆಗೆ ತಿಳಿಸಿದರು.

ಸಾಮಾನ್ಯ ಮಳೆಯ ಸಮಯದಲ್ಲಿ ನಾವು ತಮಿಳುನಾಡಿಗೆ 177.25 ಟಿಎಂಸಿ ನೀರು ಬಿಡುಗಡೆ ಮಾಡಬೇಕಾಗಿದೆ. ಆದರೆ ನಾವು ನಿಗದಿಗಿಂತ ಹೆಚ್ಚಿನ ನೀರನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಅದಕ್ಕಾಗಿಯೇ ನಾವು ಮೇಕೆದಾಟುನಲ್ಲಿ ಸಮತೋಲನ ಜಲಾಶಯ ನಿರ್ಮಾಣಕ್ಕೆ ಒತ್ತಾಯಿಸುತ್ತಿದ್ದೇವೆ ಎಂದು ಸಿದ್ದರಾಮಯ್ಯ ಮುಂಗಾರು ಅಧಿವೇಶನದ ಕೊನೆಯ ದಿನವಾದ ಇಂದು ತಿಳಿಸಿದರು.

ಮೇಕೆದಾಟು ಯೋಜನೆಯನ್ನು ತಮಿಳುನಾಡು ಏಕೆ ವಿರೋಧಿಸುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಅವರು ಕೇವಲ 177.25 ಟಿಎಂಸಿ ನೀರಿಗೆ ಮಾತ್ರ ಅರ್ಹರು. ಸುಪ್ರೀಂಕೋರ್ಟ್ ಕೂಡ ಅದನ್ನೇ ಹೇಳಿದೆ. ನಾವು ಮೇಕೆದಾಟು ಜಲಾಶಯ ನಿರ್ಮಿಸಿದರೆ, 67 ಟಿಎಂಸಿ ನೀರನ್ನು ಹಿಡಿದಿಟ್ಟುಕೊಳ್ಳಬಹುದು. ಇದು ನಮಗೆ ಕುಡಿಯುವ ನೀರಿಗೆ ಸಹಾಯ ಮಾಡುತ್ತದೆ ಮತ್ತು ಬರಗಾಲದ ಸಮಯ ದಲ್ಲಿಯೂ ಸಹ ಅದನ್ನು ಬಿಡುಗಡೆ ಮಾಡಬಹುದು ಎಂದು ಮುಖ್ಯಮಂತ್ರಿಗಳು ಹೇಳಿದರು.

ಸಮತೋಲನ ಜಲಾಶಯವನ್ನು ನಿರ್ಮಿಸಿದರೆ ಯಾವುದೇ ಹಾನಿ ಇಲ್ಲ ಎಂದು ಹೇಳಿದ ಅವರು, ಅದನ್ನು ವಿರೋಧಿಸಬೇಡಿ ಎಂದು ತಮಿಳು ನಾಡು ಮುಖ್ಯಮಂತ್ರಿಗೆ ವಿನಂತಿಸಿದರು. ಈ ವರ್ಷ ಉತ್ತಮ ಮಳೆಯಾಗುತ್ತಿರುವುದರಿಂದ ಜಲಾಶಯಗಳು ತುಂಬಿವೆ ಮತ್ತು ರಾಜ್ಯವು ಕಾವೇರಿ, ತುಂಗಭದ್ರಾ ಮತ್ತು ಕೃಷ್ಣಾ ನದಿಗಳ ಜಲಾಶಯಗಳಿಂದ ಹೆಚ್ಚಿನ ನೀರನ್ನು ಬಿಡುಗಡೆ ಮಾಡುತ್ತಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಗಣೇಶ ಚತುರ್ಥಿ ಪ್ರಯುಕ್ತ ಹೆಚ್ಚುವರಿ 265 ವಿಶೇಷ ಸಾರಿಗೆ ಬಸ್ಸುಗಳ ಸಂಚಾರ

ಬೆಂಗಳೂರು, ಆ.22–ಗಣೇಶ ಚತುರ್ಥಿ ಸಮೀಪಿಸುತ್ತಿರುವ ಹಿನ್ನೆಲೆ ಸಾರ್ವಜನಿಕರು ತಮ್ಮ ಊರುಗಳಿಗೆ ತೆರಳುವುದರಿಂದ ಹೆಚ್ಚುವರಿ 265 ವಿಶೇಷ ಸಾರಿಗೆ ಬಸ್ಸುಗಳು ಬೆಂಗಳೂರಿನಿಂದ ರಾಜ್ಯ ಹಾಗೂ ಅಂತರ ರಾಜ್ಯಗಳಿಗೆ ಕಾರ್ಯಾಚರಣೆ ನಡೆಸಲಿವೆ.

ಆ.22ರಂದು ಶುಕ್ರವಾರ, ಆ.23ರಂದು ಬೆನಕನ ಅಮವಾಸ್ಯೆ, ಆ.24ರಂದು ನಾಲ್ಕನೇ ಶನಿವಾರ, ಆ.25ರಂದು ಭಾನುವಾರ, ಆ.25ರಂದು ಸ್ವರ್ಣಗೌರಿ ವ್ರತ ಮತ್ತು ಆ. 26ರಂದು ಗಣೇಶ ಹಬ್ಬ ಇರುವುದರಿಂದ ಸಾರ್ವಜನಿಕರು ಬೆಂಗಳೂರು ಮತ್ತು ಇತರೇ ಪ್ರಮುಖ ಸ್ಥಳಗಳಿಂದ ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ಸಾರಿಗೆ ಬಸ್‌ಗಳು ಕಾರ್ಯನಿರ್ವಹಿಸಲಿವೆ.


ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ ಸುಮಾರು 265 ಹೆಚ್ಚುವರಿ ವಿಶೇಷ ಸಾರಿಗೆ ಬಸ್ಸುಗಳು ಕಾರ್ಯನಿರ್ವಹಿಸಲಿವೆ. ಬೆಂಗಳೂರಿನಿಂದ ರಾಜ್ಯ/ಅಂತರರಾಜ್ಯ ವಿವಿಧ ಸ್ಥಳಗಳಿಗೆ ತೆರಳಲು ಆ.22ರಿಂದ ಆ.26ರವರೆಗೆ ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಹಬ್ಬ ಮುಗಿದ ನಂತರ ಆ.27 ಹಾಗೂ ನಂತರ ದಿನಗಳಂದು ಪ್ರಮುಖ ಸ್ಥಳಗಳಿಗೆ ಜನದಟ್ಟಣೆಗೆ ಅನುಗುಣವಾಗಿ ಹೆಚ್ಚುವರಿ ಸಾರಿಗೆ ಬಸ್ಸುಗಳ ವ್ಯವಸ್ಥೆ ಮಾಡಲಾಗುವುದು.

ಸದರಿ ಹೆಚ್ಚುವರಿ ಸಾರಿಗೆಗಳ ಸದುಪಯೋಗಪಡಿಸಿಕೊಳ್ಳುವುದರೊಂದಿಗೆ, ಸುಖಕರ ಹಾಗೂ ಸುರಕ್ಷಿತ ಪ್ರಯಾಣಕ್ಕಾಗಿ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸುವಂತೆ ಮತ್ತು ವಿಶೇಷ ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದಿನಿಂದ ಹಿಂದುಳಿದ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಆರಂಭ

ಸಾರ್ವಜನಿಕರ ಸಹಕಾರಕ್ಕೆ ರಾಜ್ಯ ಆಯೋಗದ ಅಧ್ಯಕ್ಷ ಮಧುಸೂದನ್ ಆರ್ ನಾಯ್ಕ ಮನವಿ

ಮೈಸೂರು, ಆ.22– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಶನಿವಾರ(ಆ.23)ದಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಮೊದಲ ಹಂತದ ಪ್ರಕ್ರಿಯೆ ಪ್ರಾರಂಭಿಸುತ್ತಿದ್ದು, ಮೂರು ತಿಂಗಳಲ್ಲಿ ಸಮೀಕ್ಷೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ಆಯೋಗದ ಅಧ್ಯಕ್ಷ ಮಧುಸೂದನ್ ಆರ್.ನಾಯ್ಕ ತಿಳಿಸಿದ್ದಾರೆ.



ಪತ್ರಿಕಾ ಪ್ರಕಟಣೆ ಮೂಲಕ ಈ ವಿಷಯ ತಿಳಿಸಿರುವ ಅವರು, ಮೊದಲ ಹಂತದಲ್ಲಿ ಸಮೀಕ್ಷೆಯ ಪೂರ್ವಭಾವಿಯಾಗಿ ರಾಜ್ಯಾದ್ಯಂತ ಎಲ್ಲಾ ಮನೆಗಳ ಎಣಿಕೆ ಹಾಗೂ ಅನುಕ್ರಮ ಸಂಖ್ಯೆಯೊಂದಿಗೆ ಮನೆ ಪಟ್ಟಿ ಮಾಡಿ ಅವುಗಳ ನಕ್ಷೆ(ಮ್ಯಾಪಿಂಗ್) ಸಿದ್ಧಪಡಿಸಲಾಗುವುದು. ಎಲ್ಲಾ ವಾಸದ ಮನೆಗಳ ಆರ್‌ಆರ್ ಮೀಟರ್ ಆಧಾರದ ಮೇಲೆ ಮನೆಗಳನ್ನು ಗುರುತಿಸಿ ಅಲ್ಲಿರುವ ಜನರ ಸಮೀಕ್ಷೆ ಮಾಡುವುದರಿಂದ ಯಾವುದೇ ಮನೆ ಸಮೀಕ್ಷಾ ವ್ಯಾಪ್ತಿಯಿಂದ ತಪ್ಪಿ ಹೋಗುವುದಿಲ್ಲ ಎಂಬ ವಿಶ್ವಾಸವಿದೆ. ವಿದ್ಯುತ್ ಮೀಟರ್ ರೀಡರ್‌ಗಳು ಎಲ್ಲಾ ಮನೆಗಳ ಜಿಯೋಟ್ಯಾಗಿಂಗ್ ಕಾರ್ಯ ಪ್ರಾರಂಭಿಸಲಿದ್ದು, ಸಮೀಕ್ಷೆ ಯಶಸ್ವಿಗೆ ಸಾರ್ವಜನಿಕರು ಸಹ ಕರಿಸಬೇಕು ಎಂದು ಮನವಿ ಮಾಡಿದ್ದಾರೆ.

ಸೆ.22ರಿಂದ ಸಮೀಕ್ಷೆ: ಮನೆಗಳ ಮ್ಯಾಪಿಂಗ್‌ನಿಂದ ಎರಡನೇ ಹಂತದಲ್ಲಿ ಸಮೀಕ್ಷೆ ಕಾರ್ಯವನ್ನು ವ್ಯವಸ್ಥಿತ ಹಾಗೂ ವೈಜ್ಞಾನಿಕವಾಗಿ ಕಾರ್ಯಗತಗೊಳಿಸಲು ಅನುಕೂಲವಾಗುತ್ತದೆ. ಸಮೀಕ್ಷೆ ಕಾರ್ಯವನ್ನು ದಸರಾ ರಜೆಯ ಅವಧಿಯಲ್ಲಿ ಸೆ.22 ರಿಂದ ಅ.7ರವರೆಗೆ ನಡೆಸಲು ಗುರಿ ಹೊಂದಲಾಗಿದೆ. ಇ–ಆಡಳಿತ ಮತ್ತು ಇಂಧನ ಇಲಾಖೆ ಸಹಯೋಗದಲ್ಲಿ ಆಯೋಗದ ತಂಡವು ವಿದ್ಯುಚ್ಛಕ್ತಿ ಮೀಟರ್ ಸಂಪರ್ಕದ (ಆರ್.ಆರ್. ನಂಬರ್) ಆಧಾರದ ಮೇಲೆ ಈ ನವೀನ, ಕ್ರಿಯಾತ್ಮಕ ಮತ್ತು ವಿಶಿಷ್ಟ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ. ಇದಕ್ಕೆ ಪೂರಕವಾಗಿ ಅಪ್ಲಿಕೇಷನ್(ಆಪ್) ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ(ESCOM) ಮೀಟರ್ ರೀಡರ್‌ಗಳು ಗ್ರಾಹಕರ ಮನೆ ಬಳಕೆ ವಿದ್ಯುತ್ ಸಂಪರ್ಕದ ಮೀಟರ್ ಅನ್ನು ಓದುವುದು ಮತ್ತು ಬಿಲ್ಲಿಂಗ್ ಮಾಡುವುದರ ಜೊತೆಗೆ ಮನೆಗಳನ್ನು 'ಜಿಯೋ ಟ್ಯಾಗ್' ಮಾಡಿ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವ್ಯಾಪ್ತಿಗೆ ಒಳಪಡಿಸುತ್ತಾರೆ. ಈ ವೇಳೆ ಪ್ರತಿ ಮನೆಗೂ ಸ್ಟಿಕ್ಕರ್ ಅಂಟಿಸಿ ಸಮೀಕ್ಷಾದಾರರಿಗೆ ಮನೆಯ ಗುರುತಿಸುವಿಕೆ ಸುಲಭವಾಗುವಂತೆ ಮಾಡುತ್ತಾರೆ. ಮೀಟರ್ ರೀಡರ್‌ಗಳು ಸಿದ್ಧಪಡಿಸಿದ ಮನೆ ಪಟ್ಟಿ ಡೇಟಾವನ್ನು ನಾಗರಿಕ ಸೇವೆಗಳ ಎಲೆಕ್ಟ್ರಾನಿಕ್ ವಿತರಣೆ(EDCS) ಸರ್ವರ್‌ಗಳಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ನಂತರ ದ್ವಿತೀಯ ದತ್ತಾಂಶಗಳನ್ನು ಆಧರಿಸಿ, ಮೌಲೀಕರಿಸಿದ ನಂತರ ಸಮೀಕ್ಷೆಯ ಉದ್ದೇಶಕ್ಕಾಗಿ 'ಮ್ಯಾಪಿಂಗ್' ಮಾಡಲಾಗುತ್ತದೆ. ಆಪ್‌ನಲ್ಲಿ ಮನೆಯ 'ಸ್ಥಳ' (Location) ಸೆರೆಹಿಡಿದು ಪ್ರತಿ ಮನೆಗಳಿಗೆ 'ವಿಶಿಷ್ಟ ಸಂಖ್ಯೆ (Unique Number)' ನೀಡಲಾಗುತ್ತದೆ.

ಈ ಸಮೀಕ್ಷೆಯು ಹಿಂದುಳಿದ ವರ್ಗಗಳು ಮತ್ತು ಇತರ ಎಲ್ಲಾ ಜನರ ದತ್ತಾಂಶ ಸಂಗ್ರಹಿಸುವುದು ಮಾತ್ರವಲ್ಲದೆ ಅಂದಾಜು 7 ಕೋಟಿ ಜನರಿಗೆ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ತಲುಪಿಸಲು ಸಹಕಾರಿಯಾಗಲಿದೆ. ಮೊದಲ ಹಂತ ಸವಾಲಾಗಿದ್ದರೂ ರಾಜ್ಯದ ಎಲ್ಲಾ ಮನೆ ಗಳನ್ನು ಒಳಗೊಂಡಂತೆ ವ್ಯವಸ್ಥಿತವಾಗಿ ಸಮೀಕ್ಷೆ ನಡೆಸುವ ಬಹಳ ಮುಖ್ಯವಾಗಿದೆ ಆದ್ದರಿಂದ ಪ್ರತಿಯೊಂದು ಕುಟುಂಬದ ಸದಸ್ಯರೂ, ವಿಶೇಷವಾಗಿ ಅಪಾರ್ಟ್‌ಮೆಂಟ್ ಮತ್ತು ಕ್ಲಸ್ಟರ್ ನಿವಾಸಿಗಳು ಮನೆ ಪಟ್ಟಿ ಕೆಲಸ ಪೂರ್ಣಗೊಳಿಸಲು ಮೀಟರ್ ರೀಡರ್‌ಗಳಿಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಬೈಕ್ ಟ್ಯಾಕ್ಸಿ ಅಗ್ರಿಗೇಟರ್‌ಗಳ ವಿರುದ್ಧ ಕ್ರಮಕ್ಕೆ ಹೈಕೋರ್ಟ್ ಸೂಚನೆ

ಬೆಂಗಳೂರು, ಆ.22– ಬೈಕ್ ಟ್ಯಾಕ್ಸಿ ವಿಚಾರವಾಗಿ ಮಹತ್ವದ ಆದೇಶ ನೀಡಿರುವ ಹೈಕೋರ್ಟ್, ಅಗ್ರಿಗೇಟರ್‌ಗಳ ವಿರುದ್ಧ ಕ್ರಮ ಕೈಗೊಳ್ಳಬಹುದು. ಆದರೆ ಬೈಕ್ ಟ್ಯಾಕ್ಸಿ ಚಾಲಕರಿಗೆ ಕಿರುಕುಳ ನೀಡಬಾರದು ಎಂದು ಸ್ಪಷ್ಟಪಡಿಸಿದೆ.



ನಿನ್ನೆಯಿಂದ ಕರ್ನಾಟಕದಲ್ಲಿ ಮತ್ತೆ ಬೈಕ್ ಟ್ಯಾಕ್ಸಿ ಸೇವೆ ಪುನಾರಂಭಗೊಂಡಿದ್ದು, ಉಬರ್ ಮತ್ತು ರ್‍ಯಾಪಿಡೋ ಸಂಸ್ಥೆಗಳು ಬೈಕ್ ಟ್ಯಾಕ್ಸಿ ಸೇವೆಯನ್ನು ಪುನಾರಂಭಿಸಿವೆ. ಆ್ಯಪ್ ಆಧಾರಿತ ಸೇವೆ ಪುನಾರಂಭಗೊಂಡಿದ್ದು, ಈ ಕುರಿತು ಸಾಕಷ್ಟು ಗೊಂದಲಗಳು ಸೃಷ್ಟಿಯಾಗಿವೆ.

ಇದರ ನಡುವೆಯೇ ಶುಕ್ರವಾರ ಹೈಕೋರ್ಟ್ ಮಹತ್ವದ ನಿರ್ಣಯ ಕೈಗೊಂಡಿದ್ದು, ಬೈಕ್ ಟ್ಯಾಕ್ಸಿ ಸೇವೆಗಳನ್ನು ನೀಡಲು ಪ್ರಾರಂಭಿಸಿರುವ ಅಗ್ರಿಗೇಟರ್‌ಗಳ ವಿರುದ್ಧ ನೀವು (ಅಧಿಕಾರಿಗಳು) ಕಾನೂನು ಪ್ರಕಾರ ಯಾವುದೇ ಕ್ರಮ ಕೈಗೊಳ್ಳಬಹುದು. ಆ್ಯಪ್ ಆಧಾರಿತ ಸಂಸ್ಥೆಗಳಿಗೆ ನ್ಯಾಯಾಲಯವು ಅಂತಹ ಯಾವುದೇ ಸ್ವಾತಂತ್ರ್ಯವನ್ನು ನೀಡಲಿಲ್ಲ ಎಂದು ಹೇಳಿದೆ.

ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಹಾಗೂ ನ್ಯಾಯಮೂರ್ತಿ ಸಿ.ಎಂ. ಜೋಶಿ ಅವರಿದ್ದ ವಿಭಾಗೀಯ ನ್ಯಾಯಪೀಠದಲ್ಲಿ ಶುಕ್ರವಾರ ಕಲಾಪ ಆರಂಭವಾದಾಗ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ ಹಾಜರಾಗಿ, ಅಪ್ಲಿಕೇಶನ್ ಆಧಾರಿತ ಬೈಕ್ ಟ್ಯಾಕ್ಸಿ ಸೇವೆ ನೀಡುವವರು ಸೇವೆ ಆರಂಭಿಸಿದ್ದಾರೆ. ಕ್ರಮ ತೆಗೆದುಕೊಳ್ಳುವುದಕ್ಕೂ ಮುನ್ನ ನ್ಯಾಯಾಲಯದ ಗಮನಕ್ಕೆ ತರುವುದು ನನ್ನ ಕರ್ತವ್ಯ ಎಂದರು.

ಬೈಕ್ ಟ್ಯಾಕ್ಸಿ ಚಾಲಕರ ಪರವಾಗಿ ಹಾಜರಾಗಿದ್ದ ವಕೀಲ ಗಿರೀಶ್ ಕುಮಾರ್, ಸರ್ಕಾರ ಅಪ್ಲಿಕೇಶನ್ ವಿರುದ್ಧ ಕ್ರಮ ಕೈಗೊಳ್ಳಬಹುದು. ಅಪ್ಲಿಕೇಶನ್ ಆಧರಿಸಿ ಸೇವೆ ನೀಡುವ ಟ್ಯಾಕ್ಸಿಗಳ ಮೇಲಲ್ಲ. ವೈಕ್ತಿಗತ ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಇದಕ್ಕೆ ಅಡ್ವೊಕೇಟ್ ಜನರಲ್ ಪ್ರತಿಕ್ರಿಯಿಸಿ, ವ್ಯಕ್ತಿಗತ ಬೈಕ್ ಟ್ಯಾಕ್ಸಿ ಸೇವೆ ನೀಡುವವರನ್ನು ಬಂಧಿಸಿಲ್ಲ. ಈ ವಾದ ಸರಿಯಲ್ಲ. ಅವರನ್ನು ನಾವು ಬಂಧಿಸುವುದಿಲ್ಲ ಎಂದು ಸ್ಪಷ್ಟನೆ ನೀಡಿದರು.

ರಾಜ್ಯದಲ್ಲಿ ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆ ನಿಷೇಧಿಸಿ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಹೊರಡಿಸಿರುವ ಆದೇಶ ಪ್ರಶ್ನಿಸಿ ಅಗ್ರಿಗೇಟರ್ ಸಂಸ್ಥೆಗಳಾದ ಓಲಾ, ಉಬರ್ ಹಾಗೂ ರ್‍ಯಾಪಿಡೋ ಸಲ್ಲಿಸಿರುವ ಮೇಲ್ಮನವಿ ವಿಚಾರಣೆ ವೇಳೆ, ಬೈಕ್ ಟ್ಯಾಕ್ಸಿಗೆ ಸಂಬಂಧಿಸಿದ ತೀರ್ಮಾನವನ್ನು ಸರ್ಕಾರದ ಅತ್ಯುನ್ನತ ಮಟ್ಟದಲ್ಲಿ ನಿರ್ಧರಿಸಲಾಗುವುದು ಎಂದು ಸರ್ಕಾರ ಹೈಕೋರ್ಟ್‌ಗೆ ತಿಳಿಸಿತ್ತು. ಬೈಕ್ ಟ್ಯಾಕ್ಸಿ ಸೇವೆಯನ್ನು ಹಲವರು ಜೀವನೋಪಾಯಕ್ಕಾಗಿ ಅವಲಂಬಿಸಿರುವುದರಿಂದ ಈ ವಿಚಾರದ ಬಗ್ಗೆ ಗಂಭೀರವಾಗಿ ಆಲೋಚಿಸುವಂತೆ ಸರ್ಕಾರಕ್ಕೆ ನ್ಯಾಯಾಲಯ ಸಲಹೆ ನೀಡಿತ್ತು. ಇದೇ ವೇಳೆ ನ್ಯಾಯಾಲಯ ಬೈಕ್ ಟ್ಯಾಕ್ಸಿ ಸೇವೆ ನೀಡುವ ಚಾಲಕರಿಗೆ ಕಿರುಕುಳ ನೀಡಬಾರದು ಎಂದು ನ್ಯಾಯಾಲಯ ಹೇಳಿದೆ.

ನಕ್ಕರೆ ಅದೇ ಸ್ವರ್ಗ

ಗಂಡ : ಲೇ ನನ್ನ ಮಗಳಿಗೆ ಬುದ್ಧಿ ಅಂತ ಹೆಸರಿಡಬಾರದಿತ್ತು?
ಹೆಂಡತಿ : ಯಾಕ್ರೀ... ಏನಾಯ್ತೀಗ?
ಗಂಡ : ಅವರ ಫ್ರೆಂಡ್ಸೆಲ್ಲ ಫೋನ್ ಮಾಡಿ
ಬುದ್ಧಿ ಇಲ್ವಾ, ಬುದ್ಧಿ ಇಲ್ವಾ ಅಂತ ಕೇಳ್ತಾರೆ ಕಣೆ !

ಮೈಸೂರು ಮಿತ್ರ
ಶನಿವಾರ, 23 ಆಗಸ್ಟ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

'ಜೀವನದಲ್ಲಿ ಕಾಯುವುದನ್ನು ಕಲಿಯಬೇಕು. ಎಲ್ಲ ನಡೆಯುವುದು ಸಮಯಕ್ಕೆ ಸರಿಯಾಗಿಯೇ ಹೊರತು ನಮ್ಮ ಅವಸರದಂತೆ ಅಲ್ಲ....'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಲಿತವನಿಗಿಂತ ನುರಿತವನೇ ಮೇಲು

ನಿಮ್ಮ ಪತ್ರಗಳು

■ ಕಡಿಮೆ ಬೆಲೆಗೆ ಹಸಿವು ನೀಗಿಸುವ ಬೀದಿ ಬದಿ ವ್ಯಾಪಾರಿಗಳು

ಮಾನ್ಯರೆ,

ದೊಡ್ಡ ದೊಡ್ಡ ಹೋಟೆಲ್‌ಗಳ ಕಣ್ಣು ಯಾವಾಗಲೂ ಬೀದಿ ಬದಿ ವ್ಯಾಪಾರಿಗಳ ಮೇಲೆ ಇರುವಂತಹದ್ದೆ. ಹೊಟೇಲ್ ಅಥವಾ ಅಂಗಡಿಗಳಲ್ಲಿ ಒಂದಕ್ಕೆ ನಾಲ್ಕು ಪಟ್ಟು ಬೆಲೆ ಇಟ್ಟು ಮಾರುವುದರ ಜೊತೆಗೆ ತೆರಿಗೆ, ದುರಂತವೆಂದರೆ ಕುಡಿಯುವ ಕಾಫಿ, ಚಹಾಕ್ಕೂ ತೆರಿಗೆ ಹಾಕುತ್ತಾರೆ. ಆದರೆ ಬೀದಿ ಬದಿ ವ್ಯಾಪಾರಿಗಳು ಕನಿಷ್ಟ ಬೆಲೆಗೆ ರುಚಿಯಾದ, ಶುಚಿಯಾದ ಆಹಾರವನ್ನು ನಮ್ಮ ಕಣ್ಣೆದುರಿಗೇ ತಯಾರಿಸಿ ಕೊಡುತ್ತಾರೆ. ನಗರಗಳಲ್ಲಿ ಶೇ.50ಕ್ಕಿಂತಲೂ ಹೆಚ್ಚು ಜನರ ಹಸಿವನ್ನು ನೀಗಿಸುತ್ತಿರುವವರು ಬೀದಿ ಬದಿ ವ್ಯಾಪಾರಿಗಳೇ. ಒಂದು ಲೀಟರ್ ಹಾಲಿಗೆ ನಾಲ್ಕು ರೂಪಾಯಿ ಹೆಚ್ಚಾದರೆ ಹೊಟೇಲಿನವರು ಒಂದು ಕಾಫಿಗೆ ಐದು ರೂಪಾಯಿ ಹೆಚ್ಚಿಸುತ್ತಾರೆ. ಒಂದು ಲೀ.ಗೆ ಕನಿಷ್ಟ ಇಪ್ಪತ್ತು ಚಹಾ ಮಾಡಬಹುದು. ನೂರು ರೂ. ಲಾಭ ಮಾಡುವ ಪುಣ್ಯಾತ್ಮರು ಸ್ಪರ್ಧಾತ್ಮಕ ಬೆಲೆಗೆ ಗುಣಾತ್ಮಕ ಆಹಾರವನ್ನು ನೀಡಿದರೆ ಜನರು ಹೊಟೇಲ್‌ಗೇ ಬರುತ್ತಾರಲ್ಲವೆ? ನಗರದ ಹೊಟೇಲ್‌ಗಳಲ್ಲಿ ಚಹಾ ಬೆಲೆ ರೂ.20 ರಿಂದ 40 ರವರೆಗೆ ಇದೆ. ಆದರೆ ಬೀದಿ ಬದಿ ಅಂಗಡಿಯವರು ಕೇವಲ ರೂ.10ಕ್ಕೆ ಕೊಡುತ್ತಾರೆ.

ಬೀದಿ ಬದಿ ವ್ಯಾಪಾರಿಗಳು ಇಲ್ಲದಿದ್ದರೆ ಖಂಡಿತ ನಾಗರಿಕರ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುತ್ತಿರಲಿಲ್ಲ. ಇದ್ದರೂ ದುಪ್ಪಟ್ಟು ಬೆಲೆ ಇಟ್ಟು ಹಣ ದೋಚುತ್ತಿದ್ದರು. ಸರ್ವಕಾಲಕ್ಕೂ ನಗರಗಳಲ್ಲಿ ಬೀದಿ ಬದಿ ವ್ಯಾಪಾರಿಗಳ ಅವಶ್ಯಕತೆ ಇದೆ. ಸ್ವಚ್ಛತೆ ಹಾಗೂ ಪಾದಚಾರಿ ಮಾರ್ಗ ಒತ್ತುವರಿ ಬಗ್ಗೆ ಅವರುಗಳ ಮೇಲೆ ಅಗತ್ಯವಾಗಿ ಶಿಸ್ತು ಪಾಲನೆಯ ನಿಯಮಗಳನ್ನು ವಿಧಿಸಲೇಬೇಕು. ಆ ನಿಟ್ಟಿನಲ್ಲಿ ಮಹಾನಗರ ಪಾಲಿಕೆ ಹಾಗೂ ಪೊಲೀಸ್ ಇಲಾಖೆಗಳು ಕ್ರಮವಹಿಸಬೇಕಾಗಿದೆ. ಅದರ ಹೊರತಾಗಿ ನೆಗಡಿ ಬಂತೆಂದು ಮೂಗನ್ನೇ ಕೊಯ್ದುಕೊಂಡರೆ ಹೇಗೆ?

ಇಲ್ಲಿ ಮುಖ್ಯವಾಗಿ ಬೀದಿ ಬದಿ ವ್ಯಾಪಾರಿಗಳಿಗಿಂತ ಹೆಚ್ಚು ನಿಯಂತ್ರಣವನ್ನು ಹೊಟೇಲ್‌ಗಳ ಮೇಲೆ ಹೇರಲೇಬೇಕು. ಬಹುತೇಕ ಹೊಟೇಲ್‌ಗಳಲ್ಲಿ ಒಳಗೆ ಶುಚಿಯೂ ಇಲ್ಲ ಹೊರಗೆ ನ್ಯಾಯಯುತ ಬೆಲೆಯೂ ಇಲ್ಲ!.

ಭಾರತ ಸಂಹಿತೆಯ ಬೀದಿ ವ್ಯಾಪಾರಿಗಳ (ಜೀವನೋಪಾಯ ಮತ್ತು ಬೀದಿ ವ್ಯಾಪಾರಿಗಳ ನಿಯಂತ್ರಣ) ಕಾಯ್ದೆ–2014ರಲ್ಲಿ ನಗರ ಬೀದಿಬದಿ ವ್ಯಾಪಾರಿಗಳ ಹಕ್ಕುಗಳನ್ನು ರಕ್ಷಿಸಲು ಮತ್ತು ನಿಯಂತ್ರಿಸಲು ಸ್ಪಷ್ಟವಾದ ನಿಯಮಗಳನ್ನು ರೂಪಿಸಲಾಗಿದೆ, ಅದರನ್ವಯ ಸ್ಟ್ರೀಟ್ ವೆಂಡರ್ ಕಮಿಟಿಯು ನಿಷ್ಪಕ್ಷಪಾತವಾಗಿ ಕರ್ತವ್ಯ ನಿರ್ವಹಿಸಿದರೆ ಬೀದಿಬದಿ ವ್ಯಾಪಾರಿಗಳಿಂದ ನಗರಕ್ಕೆ ಸಮಸ್ಯೆ ಆಗದು, ಬದಲಾಗಿ ಸಾಮಾನ್ಯ ಜನರಿಗೆ ಮತ್ತು ಬಡವರಿಗೆ ಬಹಳವೇ ಅನುಕೂಲ ಆಗುವುದು.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

■ ಅಭಿವೃದ್ಧಿ ಕಾಣದಿರುವ ಹಿಂದುಳಿದ ತಾಲೂಕು ಹೆಗ್ಗಡದೇವನ ಕೋಟೆ

ಮಾನ್ಯರೆ,

ಹಿಂದುಳಿದ ತಾಲೂಕು ಎಂಬ ಹಣೆಪಟ್ಟಿ ಹೊಂದಿರುವ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ಇದೀಗ ಮತ್ತಷ್ಟು ಸಂಕಷ್ಟದಲ್ಲಿದೆ. ತಾಲೂಕಿನ ಮಿನಿ ವಿಧಾನಸೌಧದ ಮುಂದಿರುವ ಮುಖ್ಯರಸ್ತೆ ಸಂಪೂರ್ಣ ಹಾಳಾಗಿದ್ದು, ತಮ್ಮದೇ ಸರ್ಕಾರ ಇದ್ದರೂ ರಸ್ತೆ ಅಭಿವೃದ್ಧಿ ಮಾಡಲು ಶಾಸಕ ಅನಿಲ್ ಚಿಕ್ಕಮಾದು ಹೆಣಗಾಡುತ್ತಿದ್ದಾರೆ.

ಇತ್ತೀಚೆಗೆ ಮಾಜಿ ಸಂಸದ ಪ್ರತಾಪ್ ಸಿಂಹಗೆ ಮನವಿ ಮಾಡಿ ನಮ್ಮ ತಾಲೂಕಿಗೆ ಒಮ್ಮೆ ಭೇಟಿ ಕೊಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸಹಕಾರದಿಂದ ಕೋಟೆ ತಾಲೂಕಿನಾದ್ಯಂತ ಎಷ್ಟು ಅಭಿವೃದ್ಧಿಯಾಗಿದೆ ಎಂಬುದನ್ನು ತೋರಿಸುತ್ತೇನೆ ಎಂದಿದ್ದರು. ಇದಕ್ಕೆ ಪ್ರತಿಯಾಗಿ ಪ್ರತಾಪ್ ಸಿಂಹ ಮೈಸೂರಿನಿಂದ ಕೋಟೆಗೆ ಹೆದ್ದಾರಿ ಸಂಪರ್ಕ ಇದೆ. ಆ ರಸ್ತೆಯನ್ನೇ ಅಭಿವೃದ್ಧಿ ಮಾಡಿಲ್ಲ. ಇನ್ನೂ ಅಲ್ಲಿಗೆ ಬಂದರೆ ಇನ್ನೇನು ನೋಡಲು ಸಾಧ್ಯ ಎಂದು ಟಾಂಗ್ ಕೊಟ್ಟಿದ್ದರು. ಹೌದು, 100 ಕೋಟಿ ರೂ. ಅನುದಾನ ಬಿಡುಗಡೆಗೆ ಮುಖ್ಯಮಂತ್ರಿ ನೇತೃತ್ವದಲ್ಲಿ ಶಂಕುಸ್ಥಾಪನೆ ಮಾಡಲಾಗಿದೆ. ಹೆಸರಿಗಷ್ಟೇ ಶಂಕುಸ್ಥಾಪನೆ, ಅಭಿವೃದ್ಧಿಗೆ 1 ರೂಪಾಯಿಯ ಅನುದಾನವೂ ಬಂದಿಲ್ಲ. ನಿರಂತರ ಮಳೆಗೆ ಪ್ರತೀ ಹಳ್ಳಿಗಳಲ್ಲೂ ರಸ್ತೆಗಳು ಕೆರೆಗಳಂತಾಗಿವೆ. ಜನರು ಓಡಾಡಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ.

ಮೈಸೂರು–ಮಾನಂದವಾಡಿಗೆ ಸಂಪರ್ಕ ಕಲ್ಪಿಸುವ ರಸ್ತೆಯಂತೂ ತೀರಾ ಹದಗೆಟ್ಟು ಅಪಘಾತಗಳಿಗೆ, ಸಾವು–ನೋವುಗಳಿಗೆ ಎಡೆಮಾಡಿ ಕೊಟ್ಟಿದೆ. ಶಾಸಕರು ಅಭಿವೃದ್ಧಿ ಕಡೆ ಗಮನ ವಹಿಸದೆ ತಾಲೂಕಿನಲ್ಲಿ ಅನಧಿಕೃತ ರೆಸಾರ್ಟ್‌ಗಳ ಹಾವಳಿಗೆ ಅನುವು ಮಾಡಿಕೊಡುವಲ್ಲಿ ನಿರತರಾಗಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಸಮಸ್ಯೆಗಳ ಆಗರವಾಗಿರುವ ಕೋಟೆ ತಾಲೂಕಿನ ಬಗ್ಗೆ ತಕ್ಷಣ ತಮ್ಮ ನಾಯಕ ಸಿದ್ದರಾಮಯ್ಯನವರ ಗಮನಕ್ಕೆ ತಂದು ಅಭಿವೃದ್ಧಿ ಮಾಡುವುದು ಅವಶ್ಯವಾಗಿದೆ.

–ಪ್ರದೀಪ್ ಸೋನಿ ಸೋಗಳ್ಳಿ, ಹೆಚ್.ಡಿ. ಕೋಟೆ ತಾ.

■ ಸರ್ಕಾರಿ ಶಾಲೆಗಳ ಬಗ್ಗೆ ಆದ್ಯತೆ ಅಗತ್ಯ

ಮಾನ್ಯರೆ,

ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಶಾಲೆಗೆ ಸೇರುವ ಮಕ್ಕಳ ಸಂಖ್ಯೆ ಸುಮಾರು 5 ಲಕ್ಷದಷ್ಟು ಕಡಿಮೆ ಆಗಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಇತ್ತೀಚೆಗೆ ವಿಧಾನಸಭೆಯಲ್ಲಿ ತಿಳಿಸಿದ್ದಾರೆ. ಇದು ನಿಜಕ್ಕೂ ಆತಂಕಕಾರಿ ವಿಷಯ. ಸರ್ಕಾರಿ ಶಾಲೆಗೆ ಪೋಷಕರು, ತಮ್ಮ ಮಕ್ಕಳನ್ನು ಸೇರಿಸದೇ ಇರುವುದಕ್ಕೆ ಹಲವು ಕಾರಣಗಳಿವೆ. ಮುಖ್ಯವಾಗಿ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳು ಇಲ್ಲದೇ ಇರುವುದು. (ಬಹಳಷ್ಟು ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ಇಲ್ಲದೇ ಇರುವುದು), ಗುಣಮಟ್ಟದ ಶಿಕ್ಷಣ ಇಲ್ಲದೇ ಇರುವುದು, ಸರ್ಕಾರಿ ಶಾಲೆಗಳಲ್ಲಿ ಅಗತ್ಯ ಇರುವ ಶಿಕ್ಷಕರ ಕೊರತೆ, ಕೆಲವು ಸರ್ಕಾರಿ ಶಾಲೆಗಳಂತೂ ಪಾಳುಬಿದ್ದ ಮನೆಯಂತಾಗಿ ಸುಣ್ಣ – ಬಣ್ಣ ಕಂಡು ಬಹಳ ವರ್ಷಗಳೇ ಕಳೆದಿವೆ. ಶಿಕ್ಷಣ ಸಚಿವರೇ, ಮೊದಲು ಈ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಶಿಕ್ಷಣ ಎಂಬುದು ಸಂಪೂರ್ಣ ಖಾಸಗಿಯವರ ಪಾಲಾಗುತ್ತದೆ. ಈ ಬಗ್ಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ನಾನತ್ವ ಅಳಿಯಲಿ, ಮನುಷ್ಯತ್ವ ಉಳಿಯಲಿ

ಓಳಿತು ಮಾಡು ಮನುಸ ನೀ ಇರೋದು ಮೂರೇ ದಿವಸ ಎಂಬ ರಿಷಿ ಅವರು ಬರೆದಿರುವ ಹಾಡಿನಲ್ಲಿ ಬರುವ ಸಾಲೊಂದು ಈ ರೀತಿ ಇದೆ. ನಾನು ನಾನು ಎಂದು, ಮೆರೆಯಬ್ಯಾಡ ಮೂಢ ನಾನು ಎಂಬುದು ಮಣ್ಣು, ಮರೆತು ಹೋಗಬೇಡ ಈ ಸಾಲಿನ ಅರ್ಥ ಪ್ರತಿಯೊಂದು ಸಲಕ್ಕೂ ಸಲ್ಲುವಂತದ್ದು. ಮನುಜರಾದ ನಮಗೆಲ್ಲ ಒಂದಲ್ಲ ಒಂದು ಸಂದರ್ಭದಲ್ಲಿ ನಾನತ್ವ ಎಂಬ ಅಹಮಿಕೆ ತಲೆಯನ್ನೇರಿ ಬಿಡುತ್ತದೆ.ನಾನೇ ಎಲ್ಲ,ನನ್ನಿಂದನೇ ಎಲ್ಲ ಎಂಬ ಅಹಂ ಕಾರದಿಂದ ಕೆಲವೊಮ್ಮೆ ಮನುಷ್ಯತ್ವವನ್ನು ಮೀರಿ ಬದುಕುವ ಕೆಲಸವನ್ನು ಮಾಡುತ್ತಾನೆ. ನಾನತ್ವದ ಅಹಮಿಕೆ ತಲೆಗೇರಿದಾಗ ಲೊಮ್ಮೆ ಅದನ್ನು ಬದಿಗಿಟ್ಟು ವಾಸ್ತವದ ಅರಿವನ್ನು ತಿಳಿಯಲೇಬೇಕು.

ನಾನೇ–ನನ್ನಿಂದಲೇ ಎಲ್ಲ ಎಂಬ ಭ್ರಮೆ ಕಳಚಿ ಹೋಗಲಿ : ಇದನ್ನು ಹೇಳುವ ಮುಂಚೆ ಬಾಲ್ಯದಲ್ಲೊಮ್ಮೆ ಓದಿದ್ದ ಕಥೆಯೊಂದು ನೆನಪಿಗೆ ಬರುತ್ತಿದೆ. ಅಜ್ಜಿಯ ಜಂಭ ಎನ್ನುವ ಕಥೆ–ತನ್ನ ಕೋಳಿ ಕೂಗುವುದರಿಂದಲೇ ಬೆಳಗ್ಗೆ ಆಗುವುದು, ಜನರು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿಕೊಳ್ಳುವುದೆಂದು ಭ್ರಮಿಸಿದ್ದ ಅಜ್ಜಿ ಜಂಭದಿಂದ ಊರು ಬಿಟ್ಟು ಹೋಗುವ, ಅನಂತರ ವಾಸ್ತವದ ಅರಿವನ್ನು ಮಾಡಿಕೊಂಡು ಜಂಭವನ್ನು ಕರಗಿಸಿಕೊಂಡ ಕಥೆ ಬಹುತೇಕ ಎಲ್ಲರಿಗೂ ತಿಳಿದಿರುತ್ತದೆ. ಕಥೆಯನ್ನು ಓದಿ ವರ್ಷಗಳೇ ಉರುಳಿ ಹೋಗಿದ್ದರೂ ಇಂದಿಗೂ ಸಹ ನಮ್ಮಲ್ಲಿ ನಾನು ಹಾಗೆ ಮಾಡಿದೆ, ಹೀಗೆ ಮಾಡಿದೆ ಎಂದು ಜಂಭ ಕೊಚ್ಚಿಕೊಳ್ಳುವ, ತಮ್ಮನ್ನು ತಾವೇ ಬಣ್ಣಿಸಿಕೊಳ್ಳುವ ಜನರಿಗೇನು ಕಡಿಮೆ ಇಲ್ಲ. ಇಂಥವರು ನಾನು, ನನ್ನಿಂದಲೇ ಎಲ್ಲವೂ ಸಾಧ್ಯ ಎಂಬ ಭ್ರಮೆಯನ್ನು ಬಿಟ್ಟು ವಾಸ್ತವದ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲೇಬೇಕು. ಎಲ್ಲಿಯವರೆಗೆ ಮನುಷ್ಯನಿಗೆ ನಾನತ್ವ ಇರುತ್ತದೆ ಅಲ್ಲಿಯವರೆಗೆ ವಾಸ್ತವದ ಚಿತ್ರಣ ಸಿಗಲಾರದು. ನನಗೆ ಈ ಮಾತನ್ನು ಹೇಳುವಾಗ ಡಿವಿಜಿ ಅವರ ಮಂಕುತಿಮ್ಮನ ಕಗ್ಗದ ಒಂದು ಕಗ್ಗ ನೆನಪಾಗುತ್ತದೆ.

ಅಕ್ಕಿಯೊಳನ್ನವನು ಮೊದಲಾರು ಕಂಡವನು
ಅಕ್ಕರದ ಬರಹಕ್ಕೆ ಮೊದಲಿಗನದಾರು?
ಲೆಕ್ಕವಿರಿಸಿಲ್ಲ ಜಗ ತನ್ನಾದಿಬಂಧುಗಳ
ದಕ್ಕುವುದೆ ನಿನಗೆ ಜಸ – ಮಂಕುತಿಮ್ಮ

ಇದರ ತಿಳಿದುಕೊಂಡರೆ ಖಂಡಿತವಾಗಿಯೂ ನಾನತ್ವ ಎಂಬ ಅಹಂಕಾರದ ಭಾವ ಕಣ್ಮರೆಯಾಗಿ ವಾಸ್ತವದ ಅರಿವು ನಮ್ಮದಾಗುತ್ತದೆ ಇದರಲ್ಲಿ ಯಾವುದೇ ಸಂದೇಹವಿಲ್ಲ. ನಾನತ್ವ ಅಳಿದು ಮನುಷ್ಯತ್ವ ಉಳಿದರೆ ಮನುಷ್ಯನಾಗಿ ಜನ್ಮ ಪಡೆದಿದ್ದಕ್ಕೂ ಸಾರ್ಥಕತೆ ಬರುತ್ತದೆ ಎನ್ನುವುದು.

ಹೊಂದಾಣಿಕೆ ಮನೋಭಾವ ಇರಲೇಬೇಕು: ನಮ್ಮಲ್ಲಿ ಬಹುತೇಕರಿಗೆ ಮತ್ತೊಬ್ಬರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬದುಕುವ ಗುಣವೇ ಇರುವುದಿಲ್ಲ. ನಾನು ಹೇಳಿದ್ದೆ ಸರಿ ನಾನು ಹೇಳಿದಂತೆ ಆಗಬೇಕು ಎಂಬ ಮನೋಭಾವದಿಂದ ಪರಸ್ಪರ ಇರುವ ಪ್ರೀತಿ, ಸೌಹಾರ್ದತೆಗಳನ್ನು ಕಳೆದುಕೊಂಡು ಜೀವನವನ್ನು ನಡೆಸುತ್ತಾರೆ. ಅದು ಮನೆಯಲ್ಲಿ ಆಗಿರಬಹುದು ಅಥವಾ ಕೆಲಸ ಮಾಡುವ ಜಾಗ ದಲ್ಲಾಗಿರಬಹುದು. ಒಬ್ಬರಿಗೆ ಸಿಕ್ಕ ಮನ್ನಣೆ ನಮಗೆ ಸಿಗಲಿಲ್ಲ ಎಂಬ ಹೊಟ್ಟೆಕಿಚ್ಚಿನಿಂದಲೋ ಅಥವಾ ಎಲ್ಲವೂ ತನಗೆ ದೊರಕಬೇಕೆಂಬ ಮನೋಭಾವದಿಂದಲೂ ಏನೋ ಇಲ್ಲಸಲ್ಲದ ಭಿನ್ನಾಭಿಪ್ರಾಯಗಳನ್ನು ಮಾಡಿಕೊಂಡು ಪರಸ್ಪರ ನಿಂದನೆಗಳ ಮೂಲಕ ಸಮಯವನ್ನು ದೂಡುವ ಕೆಲಸವನ್ನು ಮಾಡುತ್ತಾರೆ. ಇಂಥವರಿಗೆ ಹೇಳಲೇಬೇಕಾದ ಮಾತೊಂದು ಇದೆ – ನಾನು ಬುದ್ಧಿವಂತನೆಂದುಕೊಂಡರೆ ತಪ್ಪಿಲ್ಲ ನಾನೊಬ್ಬನೇ ಬುದ್ಧಿವಂತ ಎಂದುಕೊಂಡರೆ ಅದು ತಪ್ಪು. ಈ ವಾಸ್ತವ ಅರ್ಥವಾದ ದಿನ ಹೊಂದಾಣಿಕೆ ಮನೋಭಾವ ಬಹುಶಃ ಬರಬಹುದು.

> “ ತನ್ನ ಕೋಳಿ ಕೂಗುವುದರಿಂದಲೇ ಬೆಳಗ್ಗೆ ಆಗುವುದು, ಜನರು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿಕೊಳ್ಳುವರೆಂದು ಭ್ರಮಿಸಿದ್ದ ಅಜ್ಜಿ ಜಂಭದಿಂದ ಊರು ಬಿಟ್ಟು ಹೋಗುವ, ಅನಂತರ ವಾಸ್ತವದ ಅರಿವನ್ನು ಮಾಡಿಕೊಂಡು ಜಂಭವನ್ನು ಕರಗಿಸಿಕೊಂಡ ಕಥೆ ಬಹುತೇಕ ಎಲ್ಲರಿಗೂ ತಿಳಿದಿರುತ್ತದೆ. ಕಥೆಯನ್ನು ಓದಿ ವರ್ಷಗಳೇ ಉರುಳಿ ಹೋಗಿದ್ದರೂ ಇಂದಿಗೂ ಸಹ ನಮ್ಮಲ್ಲಿ ನಾನು ಹಾಗೆ ಮಾಡಿದೆ, ಹೀಗೆ ಮಾಡಿದೆ ಎಂದು ಜಂಭ ಕೊಚ್ಚಿಕೊಳ್ಳುವ, ತಮ್ಮನ್ನು ತಾವೇ ಬಣ್ಣಿಸಿಕೊಳ್ಳುವ ಜನರಿಗೇನು ಕಡಿಮೆ ಇಲ್ಲ. ಇಂಥವರು ನಾನು, ನನ್ನಿಂದಲೇ ಎಲ್ಲವೂ ಸಾಧ್ಯ ಎಂಬ ಭ್ರಮೆಯನ್ನು ಬಿಟ್ಟು ವಾಸ್ತವದ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲೇಬೇಕು. ಎಲ್ಲಿಯವರೆಗೆ ಮನುಷ್ಯನಿಗೆ ನಾನತ್ವ ಇರುತ್ತದೆ ಅಲ್ಲಿಯವರೆಗೆ ವಾಸ್ತವದ ಚಿತ್ರಣ ಸಿಗಲಾರದು.

ಈ ಸಂದರ್ಭದಲ್ಲಿ ಆತ್ಮೀಯರೊಬ್ಬರ ಮನೋಭಾವ ನೆನಪಿಗೆ ಬರುತ್ತದೆ. ಇತರರನ್ನು ಹೀಗೆಯೇ ಇರಬೇಕು ಎಂದು ಸೂಚಿಸುವ ಅವರು ತಾವು ಮಾತ್ರ ತಮ್ಮ ಮೂಗಿನ ನೇರಕ್ಕೆ ನಡೆದುಕೊಳ್ಳುವುದನ್ನು ನೋಡಿ ನಗಬೇಕೋ... ಅಳಬೇಕೊ ತಿಳಿಯದೆ ಮೌನವಾಗಿ ನುಣಚಿಕೊಳ್ಳುವ ಪ್ರಯತ್ನ ಮಾಡಿದೆ. ತನ್ನಂತೆ ಇತರರಲ್ಲೂ ಕೂಡ ಪ್ರತಿಭೆ ಎಂಬುದು ಇರುತ್ತದೆ ಎಂಬ ವಾಸ್ತವ ಅರ್ಥ ಮಾಡಿಕೊಳ್ಳದೆ ತನ್ನೊಬ್ಬನಿಂದಲೇ ಎಲ್ಲವೂ ಸಾಧ್ಯ, ತಾನೇ ಮೇಧಾವಿ ಎಂದು ಭಾವಿಸುವ ಸಂಕುಚಿತ ಮನೋಭಾವವನ್ನು ಬಿಟ್ಟು ನಾವೆಲ್ಲರೂ ಒಂದೇ ಎಂಬ ವಿಶಾಲ ಮನೋಭಾವವನ್ನು ಬೆಳೆಸಿಕೊಂಡಾಗ ಮಾತ್ರ ಬದುಕು ಹಸನಾಗುತ್ತದೆ.

ವ್ಯಕ್ತಿಗಿಂತ ವ್ಯಕ್ತಿತ್ವ ಮುಖ್ಯವಾದುದು : ನನಗೆ ಇದನ್ನು ಹೇಳುವುದಕ್ಕಿಂತ ಮುಂಚೆ ಗಾದೆ ಒಂದು ನೆನಪಿಗೆ ಬರುತ್ತದೆ. **ತುಂಬಿದ ಕೊಡ ತುಳುಕುವುದಿಲ್ಲ** ಈ ಗಾದೆ ಮಾತು ಬಹುತೇಕ ಸಾಧನೆ ಮಾಡಿದ ಕೆಲವರಲ್ಲಿ ಇದನ್ನು ಸೂಕ್ಷ್ಮವಾಗಿ ಗಮನಿಸಿದ್ದೇನೆ. ತಮ್ಮ ಪಾಡಿಗೆ ತಾವು ತಮ್ಮ ಕೆಲಸವನ್ನು ಮಾಡಿಕೊಂಡು ಜೀವನವನ್ನು ನಡೆಸುವ ವ್ಯಕ್ತಿಗಳು ಇತರರ ಬಗ್ಗೆ ಅಷ್ಟಾಗಿ ಗಮನ ಹರಿಸದೆ ಮಾಡಬೇಕಾಗಿರುವ ಕೆಲಸದ ಕಡೆಗೆ ಶ್ರದ್ಧೆಯಿಂದ, ಆಸಕ್ತಿಯಿಂದ ಕೆಲಸ ಮಾಡುತ್ತಾ ಬದುಕು ನಡೆಸುತ್ತಾರೆ. ಇಂತಹ ಜನರನ್ನು ನೋಡಿದಾಗ ವ್ಯಕ್ತಿಗಿಂತ ಅವರ ವ್ಯಕ್ತಿತ್ವ ಮುಖ್ಯ ಎಂಬಂತಹ ಮಾತು ಮತ್ತೆ ಮತ್ತೆ ನೆನಪಾಗುತ್ತದೆ. ವ್ಯಕ್ತಿಯ ವ್ಯಕ್ತಿತ್ವಕ್ಕೆ ಕೊಡುವ ಪ್ರಾಧ್ಯಾನತೆಗಿಂತ ನಮ್ಮಲ್ಲಿ ವ್ಯಕ್ತಿಯ ಉದ್ಯೋಗಕ್ಕೆ, ಅವರ ಸಿರಿವಂತಿಕೆಗೆ ಮಹತ್ವ ಕೊಡುವವರೇ ಹೆಚ್ಚಾಗಿದ್ದಾರೆ. ಸಿರಿವಂತಿಕೆಯಾಗಲಿ, ಉದ್ಯೋಗವಾಗಲಿ ಶಾಶ್ವತವಲ್ಲ. ವ್ಯಕ್ತಿತ್ವ ಮನುಷ್ಯತ್ವ, ಮಾನವೀಯತೆ ಸದಾಕಾಲ ನಮ್ಮನ್ನು ಉತ್ತಮ ಸ್ಥಿತಿಯತ್ತ ಕೊಂಡೊಯ್ಯುತ್ತದೆ ಈ ಸತ್ಯವನ್ನು ಅರಿತುಕೊಂಡಾಗ ಜ್ಞಾನತ್ವ ಎಂಬ ಅಹಂಕಾರ ಇನ್ನಿಲ್ಲದಂತೆ ಮರೆಯಾಗಬಹುದು ಎಂಬುದು ನನ್ನ ಅಭಿಪ್ರಾಯವಾಗಿದೆ.

ತಗ್ಗಿ ಬಗ್ಗಿ ಬಾಳುವ ಗುಣ ನಮ್ಮದಾಗಬೇಕು : ಎಲ್ಲೆಡೆ ನನ್ನ ಮಾತೆ ನಡೆಯಬೇಕು ಎಂಬುದನ್ನು ಬಿಟ್ಟು ತಗಿ ಬಗ್ಗಿ ಬಾಳುವ ಗುಣ ನಮ್ಮದಾದರೆ ಅಂತಹ ಬದುಕು ನಿಜಕ್ಕೂ ಸುಂದರವಾಗಿರುತ್ತದೆ. ಇದರರ್ಥ ನಾವು ಸೋತು ನಡೆಯಬೇಕು ಎಂಬುದಲ್ಲ, ಪರಿಸ್ಥಿತಿಯನ್ನು ಅವಲೋಕಿಸಿಕೊಂಡು ಕಾಲಕ್ಕೆ ತಕ್ಕಂತೆ ನಮ್ಮ ನಡವಳಿಕೆಗಳನ್ನು ಬದಲಿಸಿಕೊಂಡು ಬೇಕು ಬೇಡಗಳ ಅರ್ಥವನ್ನು ಬದುಕಿನಲ್ಲಿ ಅಳವಡಿಸಿಕೊಂಡು ಜೀವನ ನಡೆಸಿದರೆ ನಿಜಕ್ಕೂ ಆ ಬದುಕು ಸುಂದರವಾಗಿರುತ್ತದೆ. ನಮಗೆಲ್ಲ ನೆನಪಿದ್ದರೆ ತುಂಬಾ ಹಿಂದಿನ ಕಾಲದ ಮನೆಗಳಲ್ಲಿ ಬಾಗಿಲುಗಳು ನಮ್ಮ ಎತ್ತರಕ್ಕಿಂತ ಕಡಿಮೆ ಇರುತ್ತಿದ್ದವು ತಗ್ಗಿ ಬಗ್ಗಿ ನಡೆ ಎಂಬುದನ್ನು ಸೂಚಿಸುವ ರೀತಿಯಲ್ಲಿ ಆ ಬಾಗಿಲುಗಳ ನಿರ್ಮಾಣವಾಗುತ್ತಿತ್ತು. ಇದು ಕೇವಲ ಬಾಗಿಲಿಗೆ ಮಾತ್ರವಲ್ಲ ನಮ್ಮ ಬದುಕಿಗೂ ಅನಿವಾರ್ಯ. ಎಲ್ಲಾ ಕಡೆ ನನ್ನ ಮಾತೆ ನಡೆಯಬೇಕು ಎಂಬುದನ್ನು ಬಿಟ್ಟು ಕೆಲವು ಸಂದರ್ಭಗಳಲ್ಲಿ ತಗ್ಗಿ ಸೋತು ಗೆಲ್ಲುವ ಗುಣ ನಮ್ಮದಾದರೆ ನಿಜಕ್ಕೂ ಆ ಬದುಕಿಗೆ ಮೌಲ್ಯ ಬರುತ್ತದೆ.

ಕಾಮೆಂಟ್ ಮಾಡುವುದಕ್ಕಿಂತ ಕಮ್ಮಿಟ್ಮೆಂಟ್ ಮುಖ್ಯ : ನಮ್ಮ ಭಾರತ ದೇಶ ಮುಖ್ಯವಾಗಿ ಮುಂದುವರಿಯುತ್ತಿರುವ ದೇಶವೆಂದೇ ಕರೆಸಿಕೊಳ್ಳಲು ಬಹು ಮುಖ್ಯವಾದ ಕಾರಣ ನಮ್ಮಲ್ಲಿ ಕೆಲಸ ಮಾಡುವವರಿಗಿಂತ ಮಾಡಿದ ಕೆಲಸದಲ್ಲಿ ಕೊಂಕನ್ನು ಹುಡುಕುವ, ಅದನ್ನು ಟೀಕಿಸುವ ಮಂದಿ ಹೆಚ್ಚಾಗಿದ್ದಾರೆ. ತಾವು ಕೆಲಸವನ್ನು ಮಾಡುವುದಿಲ್ಲ, ಕೆಲಸ ಮಾಡುವವರನ್ನ ನೋಡಿ ಸುಮ್ಮನಿರುವುದಿಲ್ಲ. ಏನಾದರೂ ಮಾಡಿ ಅವರ ಕಾಲನ್ನು ಎಳೆಯಬೇಕೆಂದೆ ಕಾಯುತ್ತಿರುತ್ತಾರೆ. ಈ ಗುಣವನ್ನುಳ್ಳವರಿಂದ ಸಮಾಜಕ್ಕಾಗಲೀ,ದೇಶಕ್ಕಾಗಲೀ ಯಾವುದೇ ಉಪಯೋಗ ಇರುವುದಿಲ್ಲ. ಕಾಮೆಂಟ್ ಮಾಡುವುದಕ್ಕಿಂತ ಮುಂಚೆ ನಮ್ಮ ಕೆಲಸದ ಬಗ್ಗೆ ತಲ್ಲೀನತೆ (ಕಮ್ಮಿಟ್ಮೆಂಟ್) ಬೆಳೆಸಿಕೊಂಡರೆ ಸೂಕ್ತ ಎಂಬುದು ನನ್ನ ಅಭಿಪ್ರಾಯವಿದೆ.

ನಾನು ಬುದ್ಧಿವಂತ ಎಂದುಕೊಂಡರೆ ತಪ್ಪಿಲ್ಲ, ನಾನೊಬ್ಬನೇ ಬುದ್ಧಿ ವಂತ ಎಂದುಕೊಂಡರೆ ಅದು ನಮ್ಮ ಮೂರ್ಖತನ : ಈ ಸತ್ಯ ನಮ್ಮಲ್ಲಿ ಬಹುತೇಕರಿಗೆ ಅರ್ಥವಾಗಲೇ ಬೇಕಾಗಿದೆ. ಪ್ರಕೃತಿಯ ಈ ಸೃಷ್ಟಿಯಲ್ಲಿ ಉಪಯೋಗಕ್ಕೆ ಬಾರದ ಯಾವ ಒಂದು ವಸ್ತುವಾಗಲೀ, ವ್ಯಕ್ತಿಯಾಗಲೀ ಇರುವುದಕ್ಕೆ ಸಾಧ್ಯವಿಲ್ಲ. ಪ್ರತಿಯೊಬ್ಬರಲ್ಲೂ ಅವರದೇ ಆದ ವ್ಯಕ್ತಿತ್ವ, ಸಾಮರ್ಥ್ಯ, ಪ್ರತಿಭೆ ಅಡಕವಾಗಿರುತ್ತದೆ. ಅದಕ್ಕೆ ಸೂಕ್ತ ಮಾರ್ಗದರ್ಶನ ಮತ್ತು ಸಮಯ ಪ್ರಮುಖವಾಗಿ ಬೇಕಾಗಿರುತ್ತದೆ. ಇದನ್ನು ಅರ್ಥ ಮಾಡಿಕೊಳ್ಳದೆ ನಾನು ಬುದ್ಧಿವಂತ ನಾನೊಬ್ಬನೇ ಬುದ್ಧಿವಂತ ಎಂದುಕೊಂಡು ಬದುಕನ್ನು ಸಾಗಿಸಿದರೆ ನಿಜಕ್ಕೂ ಅದು ನಮ್ಮ ಮೂರ್ಖತನವೆಂದೇ ಹೇಳಬೇಕು. ಪ್ರತಿಭೆ ಯಾರೊಬ್ಬರ ಸ್ವತ್ತು ಅಲ್ಲ,ಸೂಕ್ತ ಸಮಯ, ಜಾಗ, ಪರಿಸ್ಥಿತಿ ನಿರ್ಮಾಣವಾದಾಗ ಅದು ಅನಾವರಣಗೊಳ್ಳುತ್ತದೆ. ಈ ವಾಸ್ತವವನ್ನು ಮನದಟ್ಟು ಮಾಡಿ ಕೊಂಡಾಗ ನಾನತ್ವವೆಂಬ ಮರೀಚಿಕೆ ಮರೆಯಾಗಿ ಸಕಲರಲ್ಲೂ ಸಕರಾತ್ಮಕತೆಯ ಗುಣವನ್ನು ಗುರುತಿಸುವ ಮನೋಧರ್ಮ ನಮ್ಮದಾಗುತ್ತದೆ.

ನಾನು ಎಂಬ ಅಹಂಕಾರವನ್ನು ಬೇರು ಸಮೇತವಾಗಿ ಕತ್ತರಿಸಿ ನಾವು ಎಂಬಂತಹ ವಿಶಾಲ ಮನೋಭಾವವನ್ನು ಬೆಳೆಸಿಕೊಂಡು ಪ್ರತಿಯೊಬ್ಬ ರೊಂದಿಗೆ ಹೊಂದಾಣಿಕೆ ಮನೋಭಾವನೆಯನ್ನು ರೂಢಿಸಿಕೊಂಡು ಬದುಕನ್ನು ನಡೆಸಿದರೆ ನಿಜವಾಗಿಯೂ ಮಾನವೀಯ ಮೌಲ್ಯವನ್ನು ಬೆಳೆಸಿ ಕೊಂಡು,ನಮ್ಮತನವನ್ನು ಉಳಿಸಿಕೊಂಡು ಜೀವನ ಸಾಗಿಸಲು ಸಾಧ್ಯ.

ತೊಲಗಲಿ ನಾನತ್ವ, ಅರಳಲಿ ಮನುಷ್ಯತ್ವ
ನಾನೇ ಬುದ್ಧಿವಂತನೆಂಬ ಭ್ರಮೆಯಲ್ಲಿ ನೀ ಮುಳುಗಿರಬೇಡ
ಸಕಲರಲ್ಲೂ ಸುಪ್ತ ಪ್ರತಿಭೆ ಅಡಗಿಹದುಮರೆಯಬೇಡ.
ಅಹಂಕಾರ ಸುಡುವುದು ನಿನ್ನತನವನ್ನೇ,
ಎಲ್ಲರಿಂದಲೂ ಭಿನ್ನನೆಂಬ ತೋರ್ಪಡಿಕೆಯಿಂದ ಖಿನ್ನತೆಗೆ ಒಳಗಾಗಬೇಡ
ಎಲ್ಲರೊಳಗೊಂದಾಗಿ ಬೆರೆತು ಬಾಳುವುದನ್ನು
ನೀ ಕಲಿತ ದಿನ, ನಾನತ್ವ ಅಳಿದು ಮನುಷ್ಯತ್ವ ಬೆಳೆಯುವುದು

ಸಂತಾನಹರಣ ಚಿಕಿತ್ಸೆ ಮಾಡಿಸಿ ನಾಯಿಗಳ ಹೊರಗೆ ಬಿಡಿ !

ಸುಪ್ರೀಂಕೋರ್ಟ್ ಆದೇಶದಲ್ಲಿ ಸಡಿಲಿಕೆ



ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ.

ನವದೆಹಲಿ, ಆ.22– ದೆಹಲಿ ಹಾಗೂ ಎನ್‌ಸಿಆರ್‌ನಲ್ಲಿ ಬೀದಿ ನಾಯಿಗಳ ಕಾಟ ವಿಪರೀತವಾದ ಹಿನ್ನೆಲೆಯಲ್ಲಿ ಬೀದಿ ನಾಯಿಗಳ ತೆರವಿಗೆ ಆದೇಶ ನೀಡಿದ್ದ ಸುಪ್ರೀಂಕೋರ್ಟ್ ಕೊನೆಗೂ ತನ್ನ ಆದೇಶವನ್ನು ಸಡಿಲಿಸಿದ್ದು, ನಾಯಿಗಳಿಗೆ ಸಂತಾನಹರಣ ಚಿಕಿತ್ಸೆ ಮಾಡಿಸಿ ಹೊರಗೆ ಬಿಡಬಹುದು ಎಂದು ಹೇಳಿದೆ.

ದೆಹಲಿ–ಎನ್‌ಸಿಆರ್‌ನ ಸುತ್ತಮುತ್ತಲಿನಲ್ಲಿ ಬೀದಿ ನಾಯಿಗಳನ್ನು ಹಿಡಿದು ಆಶ್ರಯ ತಾಣಗಳಿಗೆ ಸ್ಥಳಾಂತರಿಸುವಂತೆ ಅಧಿಕಾರಿಗಳಿಗೆ ಸುಪ್ರೀಂಕೋರ್ಟ್ ಕೆಲ ದಿನಗಳ ಹಿಂದೆ ನಿರ್ದೇಶಿಸಿತ್ತು.

ಈ ನಿರ್ದೇಶನದ ವಿರುದ್ಧ ಶ್ವಾನ ಪ್ರಿಯರು ಮತ್ತು ಪ್ರಾಣಿ ಸಂಘಟನೆಗಳು ಸಲ್ಲಿಸಿದ್ದ ಮರು ಪರಿಶೀಲನಾ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಶುಕ್ರವಾರ ಬೀದಿ ನಾಯಿಗಳಿಗೆ ಲಸಿಕೆ, ಸಂತಾನ ಹರಣ ಚಿಕಿತ್ಸೆ ಮಾಡಿಸಿ ಬಳಿಕ ಹೊರಗೆ ಬಿಡಬಹುದು

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್.ವಿ. ಅಂಜಾರಿಯಾ ಅವರನ್ನೊಳಗೊಂಡ ಮೂವರು ನ್ಯಾಯಾಧೀಶರ ಪೀಠವು, ನ್ಯಾಯಾಲಯದ ಹಿಂದಿನ ಆದೇಶವನ್ನು ಪರಿಶೀಲಿಸಿ, ಈ ವಿಷಯದ ವ್ಯಾಪ್ತಿಯನ್ನು ವಿಸ್ತರಿಸಿತು ಮತ್ತು ಹೈಕೋರ್ಟ್‌ಗಳ ಮುಂದೆ ಬಾಕಿ ಇರುವ ಎಲ್ಲಾ ರೀತಿಯ ವಿಷಯಗಳನ್ನು ಅಂತಿಮ ರಾಷ್ಟ್ರೀಯ ನೀತಿಗಾಗಿ ಉನ್ನತ ನ್ಯಾಯಾಲಯಕ್ಕೆ ವರ್ಗಾಯಿಸಲು ಆದೇಶಿಸಿತು.

ಆಹಾರ ನೀಡಿಕೆ ನಿಷೇಧ: ಇದೇ ವೇಳೆ ಬೀದಿ ನಾಯಿಗಳಿಗೆ ಸಾರ್ವಜನಿಕವಾಗಿ ಆಹಾರ ನೀಡುವುದನ್ನು ಯಾವುದೇ ಪರಿಸ್ಥಿತಿಯಲ್ಲಿ ಅನುಮತಿಸಲಾಗುವುದಿಲ್ಲ ಎಂದು ನ್ಯಾಯಾಲಯ ಹೇಳಿದ್ದು, ಪುರಸಭೆಯ ವಾರ್ಡ್‌ಗಳಲ್ಲಿ ಮೀಸಲಾದ ಆಹಾರ ಪ್ರದೇಶಗಳನ್ನು ರಚಿಸಲು ನಾಗರಿಕ ಸಂಸ್ಥೆಗಳಿಗೆ ಆದೇಶಿಸಿದೆ. ಆದೇಶವನ್ನು ಉಲ್ಲಂಘಿಸುವವರು ಕಾನೂನು ಕ್ರಮವನ್ನು ಎದುರಿಸಬೇಕಾಗುತ್ತದೆ ಎಂದು ಅದು ಎಚ್ಚರಿಸಿದೆ.

ಸಂಸತ್ ಭವನದಲ್ಲಿ ಮತ್ತೊಂದು ಭದ್ರತಾ ವೈಫಲ್ಯ

ಗೋಡೆ ಏರಲು ಯತ್ನಿಸಿದ ಯುವಕನ ಬಂಧನ

ನವದೆಹಲಿ, ಆ.22– ಶುಕ್ರವಾರ ಬೆಳಿಗ್ಗೆ 20 ವರ್ಷದ ಯುವಕನೊಬ್ಬ ಸಂಸತ್ತಿನ ಗೋಡೆ ಏರಲು ಯತ್ನಿಸಿದಾಗ ಭದ್ರತಾ ಸಿಬ್ಬಂದಿ ಆತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಮ ಎಂದು ಗುರುತಿಸಲಾದ ಆ ವ್ಯಕ್ತಿ ಉತ್ತರ ಪ್ರದೇಶದವನಾಗಿದ್ದು, ಮಾನಸಿಕ ಅಸ್ವಸ್ಥ ಎಂದು ತೋರುತ್ತದೆ ಎಂದು ಪೊಲೀಸರು ತಿಳಿಸಿದ್ದು, ಶುಕ್ರವಾರ ಬೆಳಿಗ್ಗೆ 5.50ರ ಸುಮಾರಿಗೆ ವ್ಯಕ್ತಿಯೊಬ್ಬ ಸಂಸತ್ತಿನ ಆವರಣ ಗೋಡೆಯನ್ನು ಏರಲು ಪ್ರಯತ್ನಿಸಿದ. ಆದರೆ, ಎಚ್ಚರದಿಂದಿದ್ದ ಸಿಐಎಸ್‌ಎಫ್ ಮತ್ತು ದೆಹಲಿ ಪೊಲೀಸ್ ಸಿಬ್ಬಂದಿ ಆತನನ್ನು ತಕ್ಷಣವೇ ಬಂಧಿಸಿದರು. ಆತ ಮಾನಸಿಕ ಅಸ್ವಸ್ಥನಂತೆ ಕಾಣುತ್ತಿದ್ದಾನೆ ಮತ್ತು ಹೆಚ್ಚಿನ ವಿಚಾರಣೆ ಮತ್ತು ಪರಿಶೀಲನೆ ನಡೆಯುತ್ತಿದೆ ಎಂದು ಉಪ ಪೊಲೀಸ್ ಆಯುಕ್ತ (ನವದೆಹಲಿ) ದೇವೇಶ್ ಮಹ್ಲಾ ಹೇಳಿದರು.

ಮೂಲಗಳ ಪ್ರಕಾರ ಆತ ಗೋಡೆಯ ಪಕ್ಕದಲ್ಲಿರುವ ಮರವನ್ನು ಹತ್ತಿ, ಅಲ್ಲಿಂದ ಗೋಡೆಯನ್ನು ದಾಟಿ ಸಂಸತ್ತಿಗೆ ಪ್ರವೇಶಿಸಲು ಪ್ರಯತ್ನಿಸಿದ್ದಾನೆ. ಗುಪ್ತಚರ ಬ್ಯೂರೋ (ಐಬಿ) ಮತ್ತು ದೆಹಲಿ ಪೊಲೀಸರ ವಿಶೇಷ ಘಟಕ ಸೇರಿದಂತೆ ಹಲವು ಕೇಂದ್ರ ತನಿಖಾ ಸಂಸ್ಥೆಗಳು ಆ ವ್ಯಕ್ತಿಯನ್ನು ವಿಚಾರಣೆ ನಡೆಸುತ್ತಿವೆ. ಆತನನ್ನು ಹೆಚ್ಚಿನ ವಿಚಾರಣೆಗಾಗಿ ದೆಹಲಿ ಪೊಲೀಸರಿಗೆ ಹಸ್ತಾಂತರಿಸಲಾಗಿದೆ. ಅವನ ಉದ್ದೇಶ ಏನೆಂಬುದನ್ನು ತಿಳಿಯಲು ಐಬಿ ಮತ್ತು ವಿಶೇಷ ಘಟಕದ ಅಧಿಕಾರಿಗಳು ಆತನನ್ನು ವಿಚಾರಣೆ ನಡೆಸುತ್ತಿದ್ದಾರೆ.


ಈ ಘಟನೆಯು 2023ರ ಡಿಸೆಂಬರ್ 13 ರಂದು ನಡೆದಿದ್ದ ಭದ್ರತಾ ವೈಫಲ್ಯದ ಘಟನೆಯನ್ನು ನೆನಪಿಸಿದೆ. ಅಂದು ಇಬ್ಬರು ವ್ಯಕ್ತಿಗಳು ಸಂದರ್ಶಕರ ಗ್ಯಾಲರಿಯಲ್ಲಿ ಲೋಕಸಭಾ ಕೊಠಡಿಯೊಳಗೆ ಹಳದಿ ಬಣ್ಣದ ಕಲರ್ ಬಾಂಬ್ ಎಸೆದಿದ್ದರು ಮತ್ತು ಇತರ ಇಬ್ಬರು ಸಂಸತ್ತಿನ ಹೊರಗಡೆಯೂ ಅದೇ ರೀತಿಯ ಕೃತ್ಯ ಎಸಗಿದ್ದರು. 2001ರ ಸಂಸತ್ತಿನ ಮೇಲಿನ ಭಯೋತ್ಪಾದಕ ದಾಳಿಯ ವಾರ್ಷಿಕೋತ್ಸವದ ವೇಳೆಯಲ್ಲೇ ಈ ಘಟನೆ ನಡೆಯಿತು ಮತ್ತು ಇದು ಭದ್ರತೆಯ ಕುರಿತಾದ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿತು.

ಇಂದಿನಿಂದ ಬಹುಭಾಷಾ ದೇಶಭಕ್ತಿ ಗೀತಗಾಯನ ಸ್ಪರ್ಧೆ

ಮೈಸೂರು, ಆ.22– ಅಖಿಲ ಭಾರತೀಯ ಸಾಹಿತ್ಯ ಪರಿಷದ್(ಅಭಾಸಾಪ) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಸರಸ್ವತಿಪುರಂನ ವಿಜಯ ವಿಠಲ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಎರಡು ದಿನ ಬಹುಭಾಷಾ ದೇಶಭಕ್ತಿ ಗೀತ ಗಾಯನ ಸ್ಪರ್ಧೆ ಆಯೋಜಿಸಲಾಗಿದೆ.

ನಾಳೆ(ಆ.23) ಮಧ್ಯಾಹ್ನ 2.15ಕ್ಕೆ ತಜ್ಞ ವೈದ್ಯ ಡಾ.ಪಿ.ಹೆಚ್.ರಾಘವೇಂದ್ರ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ವಿಜಯ ವಿಠಲ ಪ.ಪೂ.ಕಾಲೇಜು ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್, ವನವಾಸಿ ಕಲ್ಯಾಣಾಶ್ರಮದ ದಕ್ಷಿಣ ಭಾರತ ಮಹಿಳಾ ಪ್ರಮುಖರಾದ ಕೌಸಲ್ಯಾ ರವೀಂದ್ರ ಭಾಗವಹಿಸಲಿದ್ದಾರೆ. ಭಾನುವಾರ ಬೆಳಗ್ಗೆ 10.15ಕ್ಕೆ ಎರಡನೇ ದಿನದ ಕಾರ್ಯಕ್ರಮವನ್ನು ಉದ್ಯಮಿ ಡಾ.ಜಗನ್ನಾಥ ಶೆಣೈ ಉದ್ಘಾಟಿಸಲಿದ್ದು, ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ವಿ.ಭೈರಿ, ಅಭಾಸಾಪ ಅಧ್ಯಕ್ಷ ಎಸ್.ಸುಬ್ರಹ್ಮಣ್ಯ, ಪ್ರಾಂತ ಸಂಪರ್ಕ ಪ್ರಮುಖ ಡಾ.ವಿ.ರಂಗನಾಥ್ ಭಾಗವಹಿ ಸಲಿದ್ದಾರೆ.

ಜಿ.ಪ್ರಣತಿಗೆ ಚಿನ್ನದ ಪದಕ



ಆ.1ರಿಂದ 6ರವರೆಗೆ ಜಾರ್ಜಿಯಾದ ಬಟುಮಿಯಲ್ಲಿ ನಡೆದ ಬಟುಮಿ ಓಪನ್ ಇಂಟರ್ ನ್ಯಾಷನಲ್ ವುಶು ಟೂರ್ನಮೆಂಟ್ 2025ರಲ್ಲಿ ಮೈಸೂರು ನಗರದ ವುಶು ಚಾಂಪಿಯನ್ ಪೊಲೀಸ್ ಪಬ್ಲಿಕ್ ಶಾಲೆಯ ಪ್ರಣತಿ.ಜಿ ಚಿನ್ನದ ಪದಕ ಗೆದ್ದಿದ್ದಾರೆ. ರೋಮಾಂಚಕ ಫೈನಲ್ ಪಂದ್ಯದಲ್ಲಿ, ಅವರು ಅಸಾಧಾರಣ ಹೋರಾಟದ ಕೌಶಲ್ಯ, ಧೈರ್ಯ ಮತ್ತು ಸಾಟಿಯಿಲ್ಲದ ದೃಢತೆಯನ್ನು ಪ್ರದರ್ಶಿಸಿದರು. ಹೆಚ್ಚಿನ ತೂಕದ ವರ್ಗದ ಎದುರಾಳಿಯನ್ನು 2–0 ಅಂತರದಿಂದ ಸೋಲಿಸಿ ಮೈಸೂರು, ಕರ್ನಾಟಕ ಮತ್ತು ಭಾರತವನ್ನು ಹೆಮ್ಮೆಪಡುವಂತೆ ಮಾಡಿದರು! ಮತ್ತು ಈ ಗೋಲ್ಡನ್ ಗರ್ಲ್ ಅಂತರರಾಷ್ಟ್ರೀಯ ವುಶು ಟೂರ್ನಮೆಂಟ್‌ನಲ್ಲಿ ಚಿನ್ನದ ಪದಕ ಗೆದ್ದ ಅತ್ಯಂತ ಕಿರಿಯ ಭಾರತೀಯ ಕ್ರೀಡಾಪಟು ಎಂಬ ದಾಖಲೆಯನ್ನು ಸ್ಥಾಪಿಸಿದರು.

ಪಿಸ್ತೂಲ್ ಹಿಡಿದು ಪೋಸು ನೀಡಿದ ಯುವಕನ ವಿರುದ್ಧ ಪ್ರಕರಣ ದಾಖಲು

ಮೈಸೂರು: ಪಿಸ್ತೂಲ್ ಹಿಡಿದಿರುವ ಫೋಟೋವನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದ್ದ ಯುವಕನ ವಿರುದ್ಧ ಮೈಸೂರಿನ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪರ್ಫ್ಯೂಮ್ ಅಂಗಡಿಯಲ್ಲಿ ಕೆಲಸ ಮಾಡುವ ಅಜೀಜ್ ಷರೀಫ್ ವಿರುದ್ಧ ಪೊಲೀಸರು ಸುಮೋಟೋ ಪ್ರಕರಣ ದಾಖಲಿಸಿಕೊಂಡು, ಆತನ ಬಂಧನಕ್ಕೆ ಮುಂದಾಗಿದ್ದಾರೆ. ಠಾಣೆಯ ಅಪರಾಧ ವಿಭಾಗದ ಸಿಬ್ಬಂದಿ ಪ್ರೇಮ್‌ಕುಮಾರ್, ಸಾಮಾಜಿಕ ಜಾಲತಾಣಗಳ ಪರಿಶೀಲಿಸುವ ವೇಳೆ ಅಜೀಜ್ ಶರೀಫ್ ಹೆಸರಿನ ಫೇಸ್‌ಬುಕ್ ಖಾತೆಯಲ್ಲಿ ಪಿಸ್ತೂಲ್ ಹಿಡಿದು ಪೋಸ್ ನೀಡಿರುವ ಫೋಟೋ ಗಮನಿಸಿದ್ದಾರೆ. ಸಾರ್ವಜನಿಕರಿಗೆ ಭಯ ಉಂಟುಮಾಡುವ ರೀತಿಯಲ್ಲಿ ಪಿಸ್ತೂಲ್ ಹಿಡಿದಿದ್ದ ಯುವಕನ ಬಗ್ಗೆ ಮಾಹಿತಿ ಕಲೆಹಾಕಿ, ಠಾಣೆಗೆ ದೂರು ನೀಡಿದ್ದಾರೆ. ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು, ಆತ ಹಿಡಿದಿದ್ದ ಪಿಸ್ತೂಲ್ ಬಗ್ಗೆ ವಿಚಾರಣೆ ವೇಳೆ ಮಾಹಿತಿ ತಿಳಿಯಬೇಕಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಶನಿವಾರ 23 ಆಗಸ್ಟ್ 2025

'ಕೆಮಿಸ್ಟ್ ರತ್ನ–2024'



ಕರ್ನಾಟಕ ಔಷಧ ವ್ಯಾಪಾರಿಗಳ ಸಂಘದ ವತಿಯಿಂದ ರಘುಲಾಲ್ ಅಂಡ್ ಕಂಪನಿ ಮಾಲೀಕರಾದ ಎನ್.ರಾಘವನ್ ಅವರಿಗೆ 'ಕೆಮಿಸ್ಟ್ ರತ್ನ–2024' ರಾಜ್ಯ ಪ್ರಶಸ್ತಿಯನ್ನು ಶುಕ್ರವಾರ ಸಂಘದ ಅಧ್ಯಕ್ಷ ಕುಮಾರಸ್ವಾಮಿ ಹಾಗೂ ಕಾರ್ಯದರ್ಶಿ ಅಮಾನುಲ್ಲಾ ಖಾನ್ ಪ್ರದಾನ ಮಾಡಿದರು. ಶಿವಮೊಗ್ಗದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಘವನ್ ಪಾಲ್ಗೊಳ್ಳಲು ಸಾಧ್ಯವಾಗದ ಕಾರಣ ಅವರಿಗೆ ಮೈಸೂರಿನಲ್ಲೇ ಈ ಪ್ರಶಸ್ತಿಯನ್ನು ನೀಡಲಾಯಿತು.

ಸಂಚಾರ ನಿಯಮ ಉಲ್ಲಂಘನೆ

ಶೇ.50 ರಿಯಾಯಿತಿಯಡಿ ದಂಡ ಪಾವತಿಯ ವಿಧಾನ ಪ್ರಕಟಣೆ



ಮೈಸೂರು, ಆ.22– ಸಂಚಾರಿ ನಿಯಮಗಳ ಉಲ್ಲಂಘನೆ ಮಾಡಿ ದಂಡ ಪಾವತಿಸದೆ ಬಾಕಿ ಉಳಿಸಿಕೊಂಡವರಿಗೆ ಕಳೆದ ವರ್ಷದಂತೆಯೇ ಈ ವರ್ಷವೂ ಸಂಚಾರ ಪೊಲೀಸರು ಶೇ50 ರ ರಿಯಾಯಿತಿ ಘೋಷಣೆ ಮಾಡಿದ್ದಾರೆ.

ಒಂದು ಬಾರಿಗೆ ಅನ್ವಯವಾಗುವ ರಿಯಾಯಿತಿ ಇದಾಗಿದ್ದು, ಆಗಸ್ಟ್ 23 ರಿಂದ ಸೆಪ್ಟೆಂಬರ್ 12ರವರೆಗೆ ಅವಕಾಶ ನೀಡಲಾಗಿದೆ. ಈ ಆಫರ್ 2023 ರ ಫೆಬ್ರವರಿ 11 ರವರೆಗೆ ದಾಖಲಾದ ಪ್ರಕರಣಗಳಿಗೆ ಮಾತ್ರ ಅನ್ವಯವಾಗಲಿದೆ. ಎಲ್ಲೆಲ್ಲಿ, ಹೇಗೆ? ದಂಡ ಪಾವತಿ ಮಾಡಬಹುದು ಎಂಬ ಮಾಹಿತಿಯನ್ನು ಮೈಸೂರು ನಗರ ಪೊಲೀಸ್ ವತಿಯಿಂದ ಮಾಹಿತಿ ಹಂಚಿಕೊಳ್ಳಲಾಗಿದೆ.

ಬಾಕಿ ಇರುವ ದಂಡವನ್ನು ಕರ್ನಾಟಕ ಸ್ಟೇಟ್ ಪೊಲೀಸ್ (ಕೆ.ಎಸ್.ಪಿ) ಆಪ್ ಮೂಲಕ ಪಾವತಿಸಬಹುದಾಗಿದೆ. ಹತ್ತಿರದ ಸಂಚಾರ ಪೊಲೀಸ್ ಠಾಣೆಗಳಲ್ಲಿ ನಿಮ್ಮ ವಾಹನದ ನೊಂದಣಿ ಸಂಖ್ಯೆಯ ವಿವರಗಳನ್ನು ಒದಗಿಸಿ ದಂಡವನ್ನು ಪಾವತಿಸಬಹುದಾಗಿದೆ. ಪೊಲೀಸ್ ಆಯುಕ್ತರ ಕಚೇರಿಯಲ್ಲಿರುವ ಸಂಚಾರ ನಿಯಂತ್ರಣ ಕೇಂದ್ರದಲ್ಲಿ (ಟಿಎಂಸಿ) ಪಾವತಿಸಬಹುದಾಗಿದೆ. ಕರ್ನಾಟಕ ಒನ್/ಮೈಸೂರು ಒನ್ ಕೇಂದ್ರಗಳಲ್ಲಿ ವಿವರಗಳನ್ನು ಪಡೆದು ಪಾವತಿಸಬಹುದಾಗಿದೆ ಎಂದು ಮೈಸೂರು ನಗರ ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನ್ನಸಂತರ್ಪಣೆ

ಮೈಸೂರು, ಆ.22– ಏಳನೇ ವರ್ಷದ 5ನೇ ಶ್ರಾವಣ ಶನಿವಾರದ ಅಂಗವಾಗಿ ಮೈಸೂರಿನ ಗಾಯತ್ರಿಪುರಂ 1ನೇ ಹಂತದ ಗೋವರ್ಧನ್ ಪೆಟ್ರೋಲ್ ಬಂಕ್ ಹಿಂಭಾಗದ ಜಾಗದಲ್ಲಿ ಶನಿವಾರ ಮಧ್ಯಾಹ್ನ 12.30 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಭಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಳ್ಳೇಗಾಲದ ವಯೋವೃದ್ಧ ಮೈಸೂರಿನಿಂದ ನಾಪತ್ತೆ



ಮೈಸೂರು, ಆ.22–ಮೈಸೂರಿನಲ್ಲಿರುವ ಮಗನ ಮನೆಯಲ್ಲಿ ನಡೆಯುತ್ತಿದ್ದ ಪೂಜೆಯಲ್ಲಿ ಭಾಗವಹಿಸಿ ಊಟ ಮಾಡಿಕೊಂಡು ಊರಿಗೆ ಹಿಂತಿರುಗುವುದಾಗಿ ಹೇಳಿ ಹೋದ ಕೊಳ್ಳೇಗಾಲ ತಾಲೂಕಿನ ವಯೋವೃದ್ಧರೊಬ್ಬರು ಕಾಣೆಯಾಗಿದ್ದು, ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕಿನ ಹೊಸ ಮಾಲಂಗಿ ಗ್ರಾಮದ ನಿವಾಸಿ ರಾಜೇಗೌಡ(82) ನಾಪತ್ತೆಯಾದವರು.

ಆ.19ರಂದು ಮೈಸೂರಿನ ನಿಮಿಷಾಂಬ ಲೇಔಟ್‌ನಲ್ಲಿರುವ ಪುತ್ರ ರೇವಣ್ಣ ಅವರ ನಿವಾಸದಲ್ಲಿ ಏರ್ಪಡಿಸಲಾಗಿದ್ದ ಮಂಗಳಗೌರಿ ವ್ರತದಲ್ಲಿ ರಾಜೇಗೌಡರು ಭಾಗವಹಿಸಿ ನರಸೀಪುರಕ್ಕೆ ಹೋಗಿ ಅಲ್ಲಿಂದ ಊರಿಗೆ ಹಿಂತಿರುಗುವುದಾಗಿ ಹೇಳಿ ಹೋದವರು ಇದುವರೆಗೂ ಮನೆಗೆ ಹಿಂತಿರುಗದೆ ಕಾಣೆಯಾಗಿದ್ದಾರೆ ಎಂದು ನಜರ್‌ಬಾದ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕವರು ದೂರವಾಣಿ ಸಂಖ್ಯೆ 9738566746, 6366595055 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ಸಣ್ಣಪುಟ್ಟ ವ್ಯಾಪಾರಿಗಳು ಜಿಎಸ್‌ಟಿ ನೋಂದಣಿ; ನಿಗದಿತ ತೆರಿಗೆ ಪಾವತಿಯಿಂದ ಸುರಕ್ಷಿತವಾಗಿರಬಹುದು

ತೆರಿಗೆ ಸಲಹೆಗಾರರೂ ಆದ ಹಿರಿಯ ವಕೀಲ ಬಿ.ಸಿ.ಭಟ್ ಕಿವಿಮಾತು

ಮೈಸೂರು, ಆ.22(ಎಸ್‌ಪಿಎನ್)– ಭವಿಷ್ಯದಲ್ಲಿ ಸಣ್ಣಸಣ್ಣ ವ್ಯಾಪಾರಿಗಳಿಗೆ ಗೊತ್ತಿಲ್ಲದೆ ಆಗುವ ತೆರಿಗೆ ವಂಚನೆಗಳು ಯುಪಿಐ ಬಳಕೆಯಿಂದ ಬೆಳಕಿಗೆ ಬರಲಿವೆ. ಹಾಗಾಗಿ ಸಣ್ಣಸಣ್ಣ ವ್ಯಾಪಾರಿಗಳು ಜಿಎಸ್‌ಟಿ ನೋಂದಣಿ ಮತ್ತು ಸರ್ಕಾರಕ್ಕೆ ಕಟ್ಟಬೇಕಾದ ತೆರಿಗೆಗಳನ್ನು ಕಟ್ಟಿ 'ಒಂದು ದೇಶ, ಒಂದು ತೆರಿಗೆ' ನೀತಿಗೆ ಬೆಂಬಲ ವ್ಯಕ್ತಪಡಿಸುವುದು ಸೂಕ್ತ ಎಂದು ತೆರಿಗೆ ಸಲಹೆಗಾರ, ಹಿರಿಯ ವಕೀಲ ಬಿ.ಸಿ.ಭಟ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಭವಾನಿ ಇ–ಟೆಂಡರ್ಸ್ ವತಿಯಿಂದ ಏರ್ಪಡಿಸಿದ್ದ 'ಜಿಎಸ್‌ಟಿ ನೋಂದಣಿ ಮತ್ತು ಯುಪಿಐ ವ್ಯವಹಾರಗಳು' ವಿಚಾರ ಸಂಕಿರಣದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಪ್ರಸ್ತುತ ಜಿಎಸ್‌ಟಿ ತೆರಿಗೆ ವ್ಯವಸ್ಥೆಯಲ್ಲಿ ನಾಲ್ಕು ಹಂತದ ತೆರಿಗೆ ಸಂಗ್ರಹ ನೀತಿಗಳು ಜಾರಿಯಲ್ಲಿವೆ. ಇದರಿಂದ ಕೆಲವು ವಸ್ತುಗಳಿಗೆ ತೆರಿಗೆ ವ್ಯಾಪ್ತಿಯಿಂದ ವಿನಾಯ್ತಿ ನೀಡಲಾಗಿದೆ. ಉಪ್ಪು, ಬೆಲ್ಲ, ಧಾನ್ಯಗಳು, ಬ್ರೆಡ್, ಹಾಲು, ಹಣ್ಣುಗಳು, ಎಸ್‌ಇಝಡ್ ವ್ಯಾಪ್ತಿಯ ಸಾಮಾಗ್ರಿಗಳು, ಪೆಟ್ರೋಲ್, ಇಂಧನ ಮತ್ತು ಇತ್ಯಾದಿಗಳು, ಭೂಮಿ ಮತ್ತು ಕಟ್ಟಡಗಳ ಮಾರಾಟ, ಜಿಎಸ್‌ಟಿ ತೆರಿಗೆ ವ್ಯಾಪ್ತಿಯಿಂದ ಹೊರಗಿವೆ ಎಂದರು.



ಹಿರಿಯ ವಕೀಲ ಬಿ.ಸಿ.ಭಟ್ ಮಾತನಾಡುತ್ತಿರುವುದು

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಈಗಿನ ತೆರಿಗೆ ಪದ್ಧತಿಯನ್ನು ಸರಳೀಕರಿಸುವುದಾಗಿ ಘೋಷಿಸಿದ್ದಾರೆ. ಆದರೆ, ಈಗಿನ ತೆರಿಗೆ ಪದ್ಧತಿಯಲ್ಲಿ ಯಾವ ರೀತಿ ಬದಲಾವಣೆಯಾಗಲಿದೆ ಕಾದು ನೋಡಬೇಕು. ಆದರೆ, ಗೂಗಲ್ ಪೇ, ಫೋನ್‌ಪೇ ಹಾಗೂ ಇತರೆ ಆ್ಯಪ್‌ಗಳ ಮೂಲಕ ನಡೆಸುವ ಎಲ್ಲಾ ಹಣಕಾಸು ವ್ಯವಹಾರಗಳು ಯುಪಿಐ ತಂತ್ರಜ್ಞಾನದ ಮೂಲಕ ನಡೆಯಲಿದ್ದು, ವಾರ್ಷಿಕವಾಗಿ ನಿಮ್ಮ ವಹಿವಾಟು 40 ಲಕ್ಷ ರೂ ಮೀರಿದರೆ, ಐಟಿ ಇಲಾಖೆ ನೋಟೀಸ್ ನೀಡುವುದು ಶತಸಿದ್ಧ. ಈ ಸಂದರ್ಭದಲ್ಲಿ ಯಾವುದು ತೆರಿಗೆ ರಹಿತ ವ್ಯವಹಾರ, ತೆರಿಗೆ ವ್ಯಾಪ್ತಿಯ ವ್ಯಾಪಾರ ಎಂಬುದನ್ನು ಐಟಿ ಇಲಾಖೆಗೆ ದಾಖಲೆ ಸಮೇತ ಸ್ಪಷ್ಟಪಡಿಸದಿದ್ದರೆ, ಸರ್ಕಾರ ವಿಧಿಸುವ ತೆರಿಗೆ, ಇದಕ್ಕೆ ತಗಲುವ ದಂಡದ ಮೊತ್ತವನ್ನು ಪಾವತಿಮಾಡುವುದು ಅನಿವಾರ್ಯವಾಗಲಿದೆ ಎಂದರು.

ಹಣಕಾಸು ಇಲಾಖೆ ಮಾಹಿತಿ ಪ್ರಕಾರ ಶೇ. 12 ದರದ ತೆರಿಗೆಯನ್ನು ತೆಗೆದು ಹಾಕುವುದಕ್ಕೆ ಹಲವು ರಾಜ್ಯಗಳು ಬೆಂಬಲ ನೀಡಿದ್ದು, ಈ ಸ್ಲ್ಯಾಬ್ ರದ್ದಾದರೆ ಶೇ. 12ರ ತೆರಿಗೆ ವ್ಯಾಪ್ತಿಯಲ್ಲಿದ್ದ ವಸ್ತುಗಳನ್ನು ಶೇ. 5 ಇಲ್ಲವೇ ಶೇ. 18ರ ವ್ಯಾಪ್ತಿಗೆ ತರಬಹುದು ಎನ್ನಲಾಗಿದ್ದು, ಇದರಿಂದ ಜಿಎಸ್‌ಟಿ ವ್ಯವಹಾರದಲ್ಲಿ ಸಾಕಷ್ಟು ಬದಲಾವಣೆಯಾಗಲಿದೆ ಎಂದರಲ್ಲದೆ, ಸಣ್ಣಸಣ್ಣ ವ್ಯಾಪಾರಿಗಳು ಈಗ ಬಂದಿರುವ ನೋಟೀಸ್‌ಗಳನ್ನು ಲಘುವಾಗಿ ಪರಿಗಣಿಸದೇ, ಸೂಕ್ತ ದಾಖಲಾತಿಗಳೊಂದಿಗೆ ತೆರಿಗೆ ಅಧಿಕಾರಿಗಳ ಮುಂದೆ ಹಾಜರಾಗಿ ಸ್ಪಷ್ಟಪಡಿಸಬೇಕು. ಇದಕ್ಕೆ ಈಗಿನಿಂದಲೇ ಸಿದ್ಧತೆ ಅಗತ್ಯ ಎಂದರು.

40 ಲಕ್ಷಕ್ಕೂ ಮಿಗಿಲಾದ ವ್ಯಾಪಾರ–ವಹಿವಾಟು ನಡೆಸುವ ಸಣ್ಣಸಣ್ಣ ವ್ಯಾಪಾರಿಗಳು ಕಡ್ಡಾಯವಾಗಿ ಜಿಎಸ್‌ಟಿ ನೋಂದಣಿ ಮಾಡಿಸಿ, ತೆರಿಗೆ ಪಾವತಿ ಮಾಡಬೇಕು. ಇದಕ್ಕೂ ನಮಗೂ ಸಂಬಂಧವಿಲ್ಲವೆಂದು ಸುಮ್ಮನಿದ್ದರೆ, ಇಂತಹ ನೋಟೀಸ್ ತಾನಾಗಿಯೇ ನಿಮ್ಮ ವಿಳಾಸಕ್ಕೆ ಬರಲಿದೆ. ಈಗಾಗಲೇ ಐಟಿ ಇಲಾಖೆ, ಹಣಕಾಸು ವ್ಯವಹಾರ ನಡೆಸುವ ಎಲ್ಲಾ ಕೇಂದ್ರಗಳಲ್ಲೂ ತನ್ನ ನೆಟ್‌ವರ್ಕ್ ಬೆಳೆಸಿಕೊಂಡಿದ್ದು, ಇಲ್ಲಿಂದ ಕಾಲಾಕಾಲಕ್ಕೆ ಮಾಹಿತಿ ಪಡೆದು, ಪರಿಶೀಲನೆ ಮಾಡುತ್ತಿರುತ್ತದೆ. ಈ ವೇಳೆ ತೆರಿಗೆ ವಂಚನೆ ಕಂಡು ಬಂದಲ್ಲಿ, ಐಟಿ ಇಲಾಖೆ ಕಾರ್ಯಾಚರಣೆ ನಡೆಸಿ, ನಿಮ್ಮ ಹಣಕಾಸಿನ ಮೂಲಗಳನ್ನು ಕೆದಕುತ್ತದೆ. ಇದಕ್ಕೆ ಅವಕಾಶ ನೀಡದಂತೆ ತೆರಿಗೆ ಪಾವತಿಸಿ ಎಂದು ಸಲಹೆ ನೀಡಿದರು.

ಮಹಾರಾಜ ಟ್ರೋಫಿ-2025

ಪಡಿಕ್ಕಲ್, ಕಾರ್ತಿಕೇಯ ಅಬ್ಬರ: ಗೆದ್ದು ಬೀಗಿದ ಟೈಗರ್ಸ್

ಮೈಸೂರು, ಆ.22(ವಿವಿಹೆಚ್)– ನಾಯಕ ದೇವ್‌ದತ್ ಪಡಿಕ್ಕಲ್ ಹಾಗೂ ಕೆ.ಪಿ.ಕಾರ್ತಿಕೇಯ ಅವರ ಅರ್ಧಶತಕದ ನೆರವಿನಿಂದ ಹುಬ್ಬಳ್ಳಿ ಟೈಗರ್ಸ್, ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ 8 ವಿಕೆಟ್‌ಗಳಿಂದ ಗೆದ್ದು ಬೀಗಿದೆ.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಶುಕ್ರವಾರ ಮಧ್ಯಾಹ್ನ ನಡೆದ ಮಹಾರಾಜ ಟ್ರೋಫಿ–2025 ಪಂದ್ಯಾವಳಿಯ 23ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಗುಲ್ಬರ್ಗಾ ಮಿಸ್ಟಿಕ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 172 ರನ್ ಗಳಿಸಿತು. ಬಳಿಕ ಗೆಲುವಿನ ಗುರಿ ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ 18.2 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 173 ರನ್ ಗಳಿಸಿ ಭರ್ಜರಿ ಜಯ ದಾಖಲಿಸಿತು.



ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಮೊಹಮ್ಮದ್ ತಾಹ 13 ಎಸೆತಗಳಲ್ಲಿ 1 ಸಿಕ್ಸರ್, 2 ಬೌಂಡರಿ ಒಳಗೊಂಡ 17ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ನಾಯಕ ದೇವದತ್ ಪಡಿಕ್ಕಲ್ ಹಾಗೂ ಕೆ.ಪಿ.ಕಾರ್ತಿಕೇಯ 2ನೇ ವಿಕೆಟ್‌ಗೆ 144 ರನ್‌ಗಳ ದಾಖಲೆಯ ಜೊತೆಯಾಟವಾಡಿ ತಂಡಕ್ಕೆ ಜಯ ತಂದು ಕೊಟ್ಟರು. ನಾಯಕನಿಗೆ ತಕ್ಕ ಆಟವಾಡಿದ ಪಡಿಕ್ಕಲ್ 47 ಎಸೆತಗಳಲ್ಲಿ 5 ಬೌಂಡರಿ, 3 ಸಿಕ್ಸರ್ ಒಳಗೊಂಡ 69 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಗುಲ್ಬರ್ಗಾ ಬೌಲರ್‌ಗಳ ಸವಾರಿ ಮಾಡಿದ ಕೆ.ಪಿ.ಕಾರ್ತೀಕೇಯ 48 ಎಸೆತಗಳಲ್ಲಿ 3 ಸಿಕ್ಸರ್, 8 ಬೌಂಡರಿ ಒಳಗೊಂಡ ಬಿರುಸಿನ 81 ರನ್ ಗಳಿಸಿ ಅಜೇಯರಾಗಿ ಉಳಿದು ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು. ಉಳಿದಂತೆ ಅಭಿನವ್ ಮನೋಹರ್ 2 ರನ್ ಗಳಿಸಿದರು. ಗುಲ್ಬರ್ಗಾ ಪರ ಪ್ರವೀಣ್ ದುಬೆ, ಮೋನಿಶ್ ರೆಡ್ಡಿ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ ಪರ ಸ್ಮರಣ್ ರವಿಚಂದ್ರನ್ 48 ಎಸೆತಗಳಲ್ಲಿ 5 ಸಿಕ್ಸರ್, 6 ಬೌಂಡರಿ ಒಳಗೊಂಡ 84 ರನ್ ಗಳಿಸಿ ತಂಡದ ಸ್ಪರ್ಧಾತ್ಮಕ ಮೊತ್ತಕ್ಕೆ ಕಾರಣರಾದರು. ಉಳಿದಂತೆ ಲವ್ನಿತ್ ಸಿಸೋಡಿಯಾ 15, ಪ್ರಜ್ವಲ್ ಪವನ್ 23, ಫೈಜಾನ್ 13, ಪೃಥ್ವಿರಾಜ್ ಶೇಖಾವತ್ 14 ರನ್ ಗಳಿಸಿದರಾದರೂ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗಲಿಲ್ಲ ಹುಬ್ಬಳ್ಳಿ ಪರ ಯಶ್‌ರಾಜ್ ಪುಂಜಾ 2, ಸಂಜಯ್ ಕುಮಾರ್, ಕರಿಯಪ್ಪ ಹಾಗೂ ಶ್ರೀಶಾ ಆಚಾರ್ ತಲಾ ಒಂದೊಂದು ವಿಕೆಟ್ ಪಡೆದರು.

ಡ್ರ್ಯಾಗನ್ಸ್‌ಗೆ ರೋಚಕ ಜಯ



ಮೈಸೂರು, ಆ.22 (ವಿವಿಹೆಚ್)– ಲೋಚನ್ ಗೌಡ ಅವರ ಅರ್ಧಶತಕದ ನೆರವಿನಿಂದ ಶಿವಮೊಗ್ಗ ಲಯನ್ಸ್ ವಿರುದ್ಧ ಮಂಗಳೂರು ಡ್ರ್ಯಾಗನ್ಸ್ 5 ರನ್‌ಗಳ ರೋಚಕ ಜಯ ದಾಖಲಿಸಿದೆ.

ಇದರೊಂದಿಗೆ ಮಂಗಳೂರು ಆಡಿರುವ 8 ಪಂದ್ಯಗಳ ಪೈಕಿ 5 ರಲ್ಲಿ ಜಯ, 2ರಲ್ಲಿ ಸೋಲು, 1 ಪಂದ್ಯ ಡ್ರಾ ದೊಂದಿಗೆ 11 ಅಂಕ ಗಳಿಸಿ ಅಂಕಪಟ್ಟಿಯಲ್ಲಿ ಅಗ್ರ ಸ್ಥಾನಕ್ಕೇರಿದರೇ, ಶಿವಮೊಗ್ಗ ಆಡಿರುವ 8 ಪಂದ್ಯಗಳ ಪೈಕಿ 7 ಸೋಲು, 1 ಡ್ರಾ ದೊಂದಿಗೆ 1 ಅಂಕ ಗಳಿಸಿ ಕೊನೆ ಸ್ಥಾನದಲ್ಲಿ ಮುಂದುವರೆದಿದೆ.

ಗಂಗೋತ್ರಿಯ ಗ್ಲೇಡ್ಸ್ ಮೈದಾನದಲ್ಲಿ ಶುಕ್ರವಾರ ಸಂಜೆ ನಡೆದ ಮತ್ತೊಂದು ಪಂದ್ಯದಲ್ಲಿ 201 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಶಿವಮೊಗ್ಗ ಪರ ತುಷಾರ್ ಸಿಂಗ್ 48 ಎಸೆತಗಳಲ್ಲಿ 7 ಸಿಕ್ಸರ್, 6 ಬೌಂಡರಿ ಒಳಗೊಂಡ 89 ರನ್, ನಿಹಾಲ್ ಉಲ್ಲಾಳ್ 13, ಅನಿಶ್ವರ್ ಗೌತಮ್ 35, ಹಾರ್ದಿಕ್ ರಾಜ್ 32 ರನ್ ಗಳಿಸಿದ್ದು ಹೊರತುಪಡಿಸಿ ಬೇರೆಯವರಿಂದ ನಿರೀಕ್ಷಿತ ಪ್ರದರ್ಶನ ಮೂಡಿ ಬರಲಿಲ್ಲ. ಅಂತಿಮವಾಗಿ ಲಯನ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 195 ರನ್ ಗಳಿಸುವ ಮೂಲಕ ಟೂರ್ನಿಯಲ್ಲಿ 7ನೇ ಸೋಲು ಅನುಭವಿಸಿತು. ಡ್ರ್ಯಾಗನ್ಸ್ ಪರ ಕ್ರಾಂತಿ ಕುಮಾರ್ ಹಾಗೂ ಸಚಿನ್ ಶಿಂಧೆ 2, ಶ್ರೇಯಸ್ ಗೋಪಾಲ್, ಅಭಿಲಾಷ್ ಶೆಟ್ಟಿ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಮಂಗಳೂರು ಡ್ರ್ಯಾಗನ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 200ರನ್ ಗಳಿಸಿತು. ತಂಡದ ಪರ ಲೋಚನ್ ಗೌಡ 32 ಎಸೆತಗಳಲ್ಲಿ 5 ಸಿಕ್ಸರ್, 4 ಬೌಂಡರಿ ಒಳಗೊಂಡ 63, ಶರತ್ ಬಿ.ಆರ್. 28, ಅನೀಶ್ 31, ಮ್ಯಾಕ್ನಿಲ್ 33, ಎಸ್.ಶಿವರಾಜ್ 28 ರನ್ ಗಳಿಸಿದರು. ಶಿವಮೊಗ್ಗ ಪರ ವಿದ್ವತ್ ಕಾವೇರಪ್ಪ, ಎಂ.ಬಿ.ದರ್ಶನ್ ತಲಾ 2, ಅರವಿಂದ್ 1 ವಿಕೆಟ್ ಕಿತ್ತು ಗಮನ ಸೆಳೆದರು. ಲೋಚನ್ ಗೌಡ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಇಂದಿನ ಪಂದ್ಯ

ಪಂದ್ಯ–25: ಹುಬ್ಬಳ್ಳಿ ಟೈಗರ್ಸ್ vs ಮೈಸೂರು ವಾರಿಯರ್ಸ್ (ಮಧ್ಯಾಹ್ನ 3.15)

ಪಂದ್ಯ–26: ಬೆಂಗಳೂರು vs ಬ್ಲಾಸ್ಟರ್ಸ್ ಗುಲ್ಬರ್ಗಾ ಮಿಸ್ಟಿಕ್ಸ್ (ಸಂಜೆ 7.15)

ಇತ್ತೀಚೆಗೆ ಹೆಚ್ಚಾಗಿ ಅಪ್ರಾಪ್ತರು ಅಪಘಾತದಲ್ಲಿ ಬಲಿಯಾಗುತ್ತಿದ್ದಾರೆ

ಯುನಿಸೆಫ್ ಪ್ರತಿನಿಧಿ ಡಾ. ಶ್ರೀಧರ್ ಪ್ರಹ್ಲಾದ್ ರೇವಂಕಿ ಆತಂಕ

ಮೈಸೂರು, ಆ.22(ವಿವಿಹೆಚ್)– ದೇಶದಲ್ಲಿ 9 ರಿಂದ 19 ವರ್ಷದ ಒಳಗಿನವರ ಸಾವಿಗೆ ಅಪಘಾತವೇ ಪ್ರಮುಖ ಕಾರಣವಾಗಿದೆ. ಕಳೆದ ಹತ್ತು ವರ್ಷದಲ್ಲಿ ಈ ಸಾವಿನ ಪ್ರಮಾಣ ದ್ವಿಗುಣಗೊಂಡಿದೆ. ಅದರಲ್ಲೂ 14–17 ನೇ ವಯಸ್ಸಿನವರು ಅಪಘಾತದಲ್ಲಿ ಹೆಚ್ಚು ಮೃತಪಡುತ್ತಿದ್ದಾರೆ. ಅಪ್ರಾಪ್ತರಿಂದ ವಾಹನ ಚಾಲನೆ, ಸಂಚಾರ ನಿಯಮಗಳ ಉಲ್ಲಂಘನೆ ಹೆಚ್ಚಾಗಿದೆ ಎಂದು ಯುನಿಸೆಫ್ ಪ್ರತಿನಿಧಿ ಡಾ. ಶ್ರೀಧರ್ ಪ್ರಹ್ಲಾದ್ ರೇವಂಕಿ ಹೇಳಿದರು.



ಡಾ. ಶ್ರೀಧರ್

ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಶುಕ್ರವಾರ ಮೈಸೂರು ವಿ.ವಿ. ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗವು ಯುನಿಸೆಫ್ ಸಹಭಾಗಿತ್ವದಲ್ಲಿ ಶುಕ್ರವಾರ ಮೈಸೂರು ವಿಭಾಗದ ಪತ್ರಕರ್ತರಿಗಾಗಿ ಆಯೋಜಿಸಿದ್ದ ಹದಿಹರೆಯದವರ ಆರೋಗ್ಯ, ಪೌಷ್ಟಿಕತೆ: ಸಾಂಕ್ರಾಮಿಕವಲ್ಲದ ಕಾಯಿಲೆ ಮತ್ತು ರಸ್ತೆ ಸುರಕ್ಷತೆ ಕುರಿತ ಎರಡು ದಿನಗಳ ಕಾರ್ಯಾಗಾರದಲ್ಲಿ ಅವರು ರಸ್ತೆ ಸುರಕ್ಷತೆ ಕುರಿತು ಉಪನ್ಯಾಸ ನೀಡಿದರು.

ದೇಶದಲ್ಲಿ ಪ್ರತಿ ವರ್ಷ ಸರಾಸರಿ 16 ಸಾವಿರ ಮಕ್ಕಳು ಅಪಘಾತಗಳಿಂದ ಮೃತಪಡುತ್ತಿದ್ದು, 5 ಲಕ್ಷ ಮಂದಿ ಗಾಯ ಗೊಳ್ಳುತ್ತಿದ್ದಾರೆ. ಸಂಚಾರ ನಿಯಮಗಳ ಬಗೆಗಿನ ನಿರ್ಲಕ್ಷ್ಯವೇ ಇದಕ್ಕೆ ಪ್ರಮುಖ ಕಾರಣ. ರಾಜ್ಯದಲ್ಲಿನ ಬಹುತೇಕ ಆಸ್ಪತ್ರೆಗಳಲ್ಲಿ ಗಾಯಾಳುಗಳ ಉಪಚಾರಕ್ಕೆ ಮಕ್ಕಳ ತಜ್ಞರು ಲಭ್ಯರಿಲ್ಲ ಕೇವಲ ಶೇ 20ರಷ್ಟು ದೊಡ್ಡ ಸರ್ಕಾರಿ ಆಸ್ಪತ್ರೆಗಳು ಮಾತ್ರ ಮಕ್ಕಳ ತಜ್ಞರನ್ನು ಹೊಂದಿವೆ ಎಂದು ವಿವರಿಸಿದರು.

ಮಕ್ಕಳ ಅಪಘಾತ ಹಾಗೂ ಸಾವಿನಲ್ಲಿ ಶೇ 55ರಷ್ಟು ಪ್ರಕರಣಗಳು ಹೆದ್ದಾರಿಗಳಲ್ಲಿ ಹಾಗೂ ಶೇ 30ರಷ್ಟು ಪ್ರಕರಣಗಳು ಪ್ರಮುಖ ಜಂಕ್ಷನ್‌ಗಳಲ್ಲಿ ಸಂಭವಿಸುತ್ತಿವೆ ಎಂದರು.

ಅಪಘಾತದಿಂದ ಮಕ್ಕಳ ಸಾವಿನ ಸಂಖ್ಯೆಯಲ್ಲಿ ಉತ್ತರ ಪ್ರದೇಶ ಮೊದಲು ಹಾಗೂ ಬಿಹಾರ ಎರಡನೇ ಸ್ಥಾನದಲ್ಲಿದ್ದು, ಕರ್ನಾಟಕ ಏಳನೇ ಸ್ಥಾನದಲ್ಲಿದೆ. ಮೃತಪಡುವ ಮಕ್ಕಳಲ್ಲಿ ಶೇ 94ರಷ್ಟು ಮಂದಿ ಹೆಲ್ಮೆಟ್ ಇಲ್ಲವೇ ಸೀಟ್ ಬೆಲ್ಟ್ ಧರಿಸಿರುವುದಿಲ್ಲ ಎಂದರು.

ವರದಿಗಾರಿಕೆ ಸಂದರ್ಭ ಅನುಸರಿಸಬೇಕಾದ ನಿಯಮಗಳ ಕುರಿತು ಕಾರ್ಯಕ್ರಮದ ಸಂಯೋಜಕಿ ಪ್ರೊ. ಎಂ.ಎಸ್. ಸಪ್ನಾ ಮಾತನಾಡಿದರು. ಸಮಾರೋಪ ಕಾರ್ಯಕ್ರಮದಲ್ಲಿ ಯುನಿಸೆಫ್‌ನ ಪ್ರತಿನಿಧಿ ಪ್ರೊಸುನ್ ಸೇನ್ ಹಾಗೂ ಮೈಸೂರು ವಿ.ವಿ. ಪ್ರಾಧ್ಯಾಪಕಿ ಜ್ಯೋತಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿದರು.

ಆನ್‌ಲೈನ್ ಗೇಮಿಂಗ್ ಬ್ಯಾನ್ : ಕೇಂದ್ರ ಸರ್ಕಾರದ ನಿರ್ಣಯಕ್ಕೆ ಶ್ಲಾಘನೆ

ಮೈಸೂರು, ಆ. 22– ಆನ್‌ಲೈನ್ ಗೇಮ್ಸ್‌ಗಳಿಂದ ಅದೆಷ್ಟೋ ಕುಟುಂಬಗಳು ಸರ್ವನಾಶವಾಗಿವೆ. ವಿದ್ಯಾರ್ಥಿಗಳೂ ಆನ್‌ಲೈನ್ ಗೀಳಿಗೆ ಬಿದ್ದು ಆರ್ಥಿಕವಾಗಿ ಮಾತ್ರವಲ್ಲ ವಿದ್ಯಾಭ್ಯಾಸದಲ್ಲಿ ಕೂಡ ತೀವ್ರ ಹಾನಿಗೊಳಗಾಗಿದ್ದಾರೆ. ಈ ದಿಸೆಯಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಆನ್‌ಲೈನ್ ಗೇಮಿಂಗ್ ಬ್ಯಾನ್ ಮಾಡಲು ಕಳೆದ ನಾಲ್ಕು ವರ್ಷಗಳಿಂದ ಸತತವಾಗಿ ಕೇಂದ್ರ ಸರ್ಕಾರಕ್ಕೆ ಆಗ್ರಹಿಸುತ್ತಾ ಬಂದಿತ್ತು. ಅಲ್ಲದೆ ಗ್ರಾಹಕ ಪಂಚಾಯತ್ ಕರ್ನಾಟಕದಲ್ಲೂ ಶಾಲಾ ಕಾಲೇಜುಗಳಲ್ಲಿ ಆನ್‌ಲೈನ್ ಗೇಮಿಂಗ್‌ನಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಕೂಡ ಹಮ್ಮಿಕೊಂಡಿತ್ತು.

ಈಗ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಆನ್ಲೈನ್ ಗೇಮಿಂಗ್ ಬ್ಯಾನ್ ಮಾಡಿದ್ದು ದಿಟ್ಟ ನಿರ್ಧಾರ ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಜಿಲ್ಲಾ ಅಧ್ಯಕ್ಷ ಸಿ.ಎಸ್. ಚಂದ್ರಶೇಖರ್ ಶ್ಲಾಘಿಸಿದ್ದಾರೆ. ಈ ರೀತಿಯ ಅವಶ್ಯಕತೆಗಳನ್ನು ಸಮಾಜದಲ್ಲಿ ಬದಲಾವಣೆಗಳನ್ನು ತರಲು ಸಾಧ್ಯ ಇದು ನಿರಂತರವಾಗಿ ಸಾಗಲು ಸಮಾಜದ ಜನತೆಯೂ ಗ್ರಾಹಕ ಪಂಚಾಯತಿ ನೊಂದಿಗೆ ಜೋಡಿಸಿಕೊಳ್ಳುವುದು ಅವಶ್ಯಕ. ನಮ್ಮ ಗ್ರಾಹಕ ಚಳುವಳಿಗೆ ಈ ಮೂಲಕ ಜನತೆಯಲ್ಲಿ ಕೋರುವುದೇನೆಂದರೆ ಗ್ರಾಹಕ ಪಂಚಾಯತ್ ನ ಸದಸ್ಯರಾಗಿ ಸಮಾಜದಲ್ಲಿ ಸೂಕ್ತ ಗ್ರಾಹಕ ಹಿತ ನಿರ್ಣಯಗಳಲ್ಲಿ ಸಹಭಾಗಿಗಳಾಗಿ ಎಂದು ತಿಳಿಸಿದ್ದಾರೆ.

ಮೈಸೂರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ ಹಿನ್ನೆಲೆ

ರಸ್ತೆಗಳಲ್ಲಿ ಗುಂಡಿ ಮುಚ್ಚುವ ಕಾಮಗಾರಿ ಪರಿಶೀಲಿಸಿದ ಪಾಲಿಕೆ ಆಯುಕ್ತರು



ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅಧಿಕಾರಿಗಳೊಂದಿಗೆ ರಿಂಗ್ ರಸ್ತೆಯನ್ನು ಪರಿಶೀಲಿಸಿದರು.

ಮೈಸೂರು,ಆ.22(ಎಂಟಿವೈ)– ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೈಸೂರಿಗೆ ಆಗಮಿಸುವ ಹಿನ್ನಲೆಯಲ್ಲಿ ಶುಕ್ರವಾರ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರು ಅಧಿಕಾರಿಗಳೊಂದಿಗೆ ವಿವಿಧ ರಸ್ತೆಯಲ್ಲಿ ಪರಿಶೀಲನೆ ನಡೆಸಿ, ಗುಂಡಿ ಮುಚ್ಚುವ ಹಾಗೂ ರಸ್ತೆ ವಿಭಜಕದಲ್ಲಿ ಬೆಳೆದಿರುವ ಗಿಡ–ಗಂಟಿಗಳ ತೆರವು ಕಾರ್ಯವನ್ನು ಪರಿಶೀಲಿಸಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವಿವಿಧ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸೆ.1 ಮತ್ತು 2ರಂದು ಮೈಸೂರು ಪ್ರವಾಸ ಕೈಗೊಂಡಿರುವುದರಿಂದ ಶಿಷ್ಟಾಚಾರದ ಅನ್ವಯ ರಾಷ್ಟ್ರಪತಿಗಳು ಮೈಸೂರಲ್ಲಿ ಸಂಚರಿಸಲಿರುವ ರಸ್ತೆಯುದ್ದಕ್ಕೂ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಪರಿಶೀಲನೆ ನಡೆಸಿದರು.

ಮೈಸೂರಲ್ಲಿ ರಾಷ್ಟ್ರಪತಿಗಳು ವಾಸ್ತವ್ಯ ಹೂಡಲಿರುವ ರಾಡಿಸನ್ ಬ್ಲೂ ಹೋಟೆಲ್‌ನಿಂದ ಲಲಿತಮಹಲ್ ರಸ್ತೆ, ನರಸೀಪುರ ರಿಂಗ್‌ರಸ್ತೆ ಜಂಕ್ಷನ್‌ವರೆಗೆ ಪರಿಶೀಲನೆ ನಡೆಸಿ, ರಸ್ತೆ ಬದಿಯಲ್ಲಿ ಸ್ವಚ್ಛತಾ ಕಾರ್ಯ ನಡೆಸುವಂತೆ ಸೂಚನೆ ನೀಡಿದರು. ಬಳಿಕ ರಿಂಗ್ ರಸ್ತೆಯಲ್ಲಿ ನಂಜನಗೂಡು ರಿಂಗ್ ರಸ್ತೆ ಜಂಕ್ಷನ್‌ವರೆಗೆ ಪರಿಶೀಲಿಸಿ, ನಂಜನಗೂಡು ಮುಖ್ಯ ರಸ್ತೆಯಲ್ಲಿ ಸಾಗಿ ಮಂಡಕಳ್ಳಿ ವಿಮಾನ ನಿಲ್ದಾಣದವರೆಗೂ ಪರಿಶೀಲಿಸಿದರು. ನಂತರ ಮತ್ತೆ ರಿಂಗ್ ರಸ್ತೆಯಲ್ಲಿ ಬೋಗಾದಿ ರಸ್ತೆ ಜಂಕ್ಷನ್‌ವರೆಗೆ ಪರಿಶೀಲಿಸಿದರು.

ಪರಿಶೀಲನೆ ವೇಳೆ ರಸ್ತೆಯಲ್ಲಿರುವ ಸಣ್ಣ ಗುಂಡಿಯನ್ನೂ ಬಿಡದೆ ಮುಚ್ಚುವಂತೆ ಸೂಚನೆ ನೀಡಲಾಗಿದೆ. ಅಲ್ಲದೆ, ರಾಷ್ಟ್ರಪತಿಗಳು ಸಂಚರಿಸುವ ರಸ್ತೆಯಲ್ಲಿರುವ ರಸ್ತೆ ಡುಬ್ಬ ತೆರವಿಗೆ ಹಾಗೂ ರಸ್ತೆ ವಿಭಜಕದಲ್ಲಿ ಬೆಳೆದಿರುವ ಅನುಪಯುಕ್ತ ಗಿಡಗಳು, ರಸ್ತೆ ತಿರುವಿನಲ್ಲಿ ಬೆಳೆದಿರುವ ಪೊದೆಯನ್ನು ತೆರವು ಮಾಡಲು ಸೂಚಿಸಲಾಗಿದೆ.

ಅರಮನೆ, ಚಾಮುಂಡಿಬೆಟ್ಟದ ಭೇಟಿಗೂ ಇಂಗಿತ: ರಾಷ್ಟ್ರಪತಿಯಾದ ಬಳಿಕ ಎರಡನೇ ಬಾರಿಗೆ ಮೈಸೂರಿಗೆ ಬರುತ್ತಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೈಸೂರು ಅರಮನೆ ಹಾಗೂ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ. ಇದುವರೆಗೂ ಅವರ ಪ್ರವಾಸ ಪಟ್ಟಿಯಲ್ಲಿ ಅರಮನೆ ಮತ್ತು ಚಾಮುಂಡಿಬೆಟ್ಟ ಭೇಟಿ ಸಂಬಂಧ ಅಧಿಕೃತ ಮಾಹಿತಿ ಇಲ್ಲದೇ ಇದ್ದರೂ, ಅಧಿಕಾರಿಗಳು ಬೆಟ್ಟದ ರಸ್ತೆ ಮತ್ತು ಅರಮನೆ ಸುತ್ತಲಿನ ರಸ್ತೆಯನ್ನು ಪರಿಶೀಲನೆ ನಡೆಸಿದ್ದಾರೆ. ನಾಳೆ(ಆ.23) ಅಧಿಕಾರಿಗಳು ಚಾಮುಂಡಿಬೆಟ್ಟಕ್ಕೆ ತೆರಳಿ ಪರಿಶೀಲನೆ ನಡೆಸಲಿದ್ದಾರೆ.

ಸರ್ಕಾರದ ಹೊಸ ಯೋಜನೆಗಳನ್ನು ಸಮಗ್ರವಾಗಿ ಅನುಷ್ಠಾನಗೊಳಿಸಲು

ಮಾಸ್ಟರ್ ತರಬೇತಿ ಪಡೆದ ಅಧಿಕಾರಿಗಳು ಮುಂದಾಗಬೇಕು

ಕರ್ನಾಟಕ ರಾಜ್ಯ ಬುಡಕಟ್ಟು ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್ ಸಲಹೆ



ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಆದಿ ಕರ್ಮಯೋಗಿ ತರಬೇತಿ ಶಿಬಿರದ ಶಿಬಿರಾರ್ಥಿಗಳಿಗೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್ ಪ್ರಮಾಣ ಪತ್ರ ವಿತರಿಸಿದರು.

ಮೈಸೂರು,ಆ.22(ಎಂಟಿವೈ)– ಸರ್ಕಾರ ಜಾರಿಗೊಳಿಸುವ ಹೊಸ ಯೋಜನೆಗಳನ್ನು ಸಮಗ್ರವಾಗಿ ಅನುಷ್ಠಾನಗೊಳಿಸಿ, ಫಲಾನುಭವಿಗಳಿಗೆ ಅದರ ಸೌಲಭ್ಯ ತಲುಪಿಸಲು ಮಾಸ್ಟರ್ ತರಬೇತಿ ಪಡೆದ ಅಧಿಕಾರಿಗಳು ಮುಂದಾಗಬೇಕು ಎಂದು ಕರ್ನಾಟಕ ರಾಜ್ಯ ಬುಡಕಟ್ಟು ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್ ಸಲಹೆ ನೀಡಿದ್ದಾರೆ.

ಮೈಸೂರಿನ ಬೋಗಾದಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಭಾಂಗಣದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಗ್ರಾಮೀಣ ಅಭಿವೃದ್ಧಿ ಇಲಾಖೆ, ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ, ಶಿಕ್ಷಣ ಇಲಾಖೆ ಆರೋಗ್ಯ ಮತ್ತು ಕುಟುಂಬಕಲ್ಯಾಣ ಇಲಾಖೆಯ ತಾಲೂಕು ಮಟ್ಟದ ಮಾಸ್ಟರ್ ತರಬೇತುದಾರರಿಗೆ ಹಮ್ಮಿಕೊಂಡಿದ್ದ 3 ದಿನಗಳ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಯಾವುದೇ ಹೊಸ ಯೋಜನೆ ಬಂದರೂ ಅದರ ಅನುಷ್ಠಾನದ ಸಂಬಂಧ ತರಬೇತಿ ಪಡೆದಿರುವ ವಿವಿಧ ಇಲಾಖೆಯ ಅಧಿಕಾರಿಗಳು ಯೋಜನೆಯ ಯಶಸ್ವಿಗೆ ಶ್ರಮಿಸುವುದು ಹಾಗೂ ಸ್ಪಂದನಾಶೀಲ ಆಡಳಿತ ನಡೆಸಬೇಕು. ಆದ್ದರಿಂದ ನಿಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇದ್ದು, ಮುಂದೆ ಗ್ರಾಮ ಪಂಚಾಯಿತಿಗಳಿಗೆ ಹೋಗಿ ಕೆಲಸ ಮಾಡಬೇಕಾಗುತ್ತದೆ. 'ಆದಿ ಕರ್ಮಯೋಗಿ ಅಭಿಯಾನ್' ಒಂದು ನಿರಂತರ ಅಭಿಯಾನವಾಗಿದ್ದು 3 ದಿನಗಳ ಕಾಲ ನಡೆದ ಈ ಕಾರ್ಯಾಗಾರ ಯಶಸ್ವಿಯಾಗಿದೆ ಎಂದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಎಂ.ಕೆ. ಮಲ್ಲೇಶ್ ಮಾತನಾಡಿ, 'ಧರ್ತಿ ಆಭಾ ಜನಜಾತೀಯ ಉತ್ಕರ್ಷ ಗ್ರಾಮ ಅಭಿಯಾನ್' ಕಾರ್ಯಕ್ರಮದಡಿ ವಿವಿಧ ಇಲಾಖೆಗಳ ಮೂಲಕ ಗ್ರಾಮಮಟ್ಟದ ತಳಹಂತಕ್ಕೆ ಸರ್ಕಾರದ ಸೇವೆಯನ್ನು ಒದಗಿಸುವ ನಿಟ್ಟಿನಲ್ಲಿ ವಿಕಸಿತ ಭಾರತ ನಿರ್ಮಾಣ ಮಾಡುವ ಗುರಿಯನ್ನು ಆದಿಕರ್ಮಯೋಗಿ ಹೊಂದಿದ್ದು, ಪರಸ್ಪರ ಹೊಂದಾಣಿಕೆಯಿಂದ ಸೌಹಾರ್ದಯುತವಾಗಿ ಎಲ್ಲರೂ ಸಾರ್ವಜನಿಕರ ಕೆಲಸ ಮಾಡೋಣ. ಈ ಕಾರ್ಯಾಗಾರದಿಂದ ನಾವೆಲ್ಲರೂ ಒತ್ತಡಗಳಿಂದ ಮುಕ್ತರಾಗಿದ್ದೇವೆ. ಈ ಕಾರ್ಯಾಗಾರ ಯಶಸ್ವಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಕಲ್ಯಾಣಾಧಿಕಾರಿಗಳಾದ ಅರುಣ್‌ಪ್ರಭು, ಜಿ.ಆರ್. ಮಹೇಶ್, ಕೋಮಲ, ಪದ್ಮಾವತಿ ಚಿಲ್ಲಾಳ್, ಅಕ್ಕಮಹಾದೇವಿ, ಚಂದ್ರಶೇಖರ್, ರಘುನಾಥ್, ಅಭಿಷೇಕ್, ಮಹೇಂದ್ರ, ಸೋಮಯ್ಯ, ಲೆಕ್ಕಾಧಿಕಾರಿ ಬಿ.ಆರ್. ಭವ್ಯಾ ಉಪಸ್ಥಿತರಿದ್ದರು.

ನಿಮಿಷಾಂಬ ದೇವಾಲಯಕ್ಕೆ ಲೋಕಾಯುಕ್ತ ನ್ಯಾಯಮೂರ್ತಿ ಭೇಟಿ



ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಕುಟುಂಬದ ಹೆಸರಿನಲ್ಲಿ ನಿಮಿಷಾಂಬ ಅರ್ಚಕರು ಅರ್ಚನೆ ಮಾಡಿದರು.

ಶ್ರೀರಂಗಪಟ್ಟಣ, ಆ.22– ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಕುಟುಂಬ ಸಮೇತರಾಗಿ ಪಟ್ಟಣದ ನಿಮಿಷಾಂಬ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ದೇವಸ್ಥಾನಕ್ಕೆ ಆಗಮಿಸಿದ ಅವರನ್ನು ಆಡಳಿತ ಮಂಡಳಿ ಹಾಗೂ ಜಿಲ್ಲಾಡಳಿತ ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಳ್ಳಲಾಯಿತು. ಮೊದಲು ಗಣಪತಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಮಾಡಿಸಿದ ನಂತರ ಲಕ್ಷ್ಮಿನಾರಾಯಣ ಸ್ವಾಮಿ ದೇವಸ್ಥಾನಕ್ಕೆ ಕೈ ಮುಗಿದು ನಂತರ ನಿಮಿಷಾಂಬ ದೇವಿಯ ದರ್ಶನವನ್ನು ಪಡೆದು ಕುಟುಂಬ ಸಮೇತ ಕುಂಕುಮಾರ್ಚನೆ ಮಾಡಿಸಿದರು. ಕಾವೇರಿ ನದಿ ದಡಕ್ಕೆ ಹೋಗಿ ಭಕ್ತರನ್ನು ಮಾತನಾಡಿಸಿ ದೇವಸ್ಥಾನದ ಅಭಿವೃದ್ಧಿ ಬಗ್ಗೆ ಅಧಿಕಾರಿಗಳ ಜೊತೆ ಹಾಗೂ ದೇವಸ್ಥಾನದ ಆಡಳಿತ ಮಂಡಳಿ ಜೊತೆ ಕೆಲ ಕಾಲ ಚರ್ಚಿಸಿದರು. ಬೆಳಗ್ಗೆ 5.30ರ ಸಮಯದಲ್ಲಿ ದೇವಿಗೆ ಮಾಡಿದ ಪಂಚಾಮೃತ ಸೇವೆಯನ್ನು ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಅವರ ಹೆಸರಿನಲ್ಲೇ ಮಾಡಲಾಗಿತ್ತು ಎಂದು ದೇವಸ್ಥಾನದ ಮುಖ್ಯ ಅರ್ಚಕ ಸೂರ್ಯನಾರಾಯಣ ಭಟ್ ಮೈಸೂರು ಮಿತ್ರನಿಗೆ ತಿಳಿಸಿದರು. ಜಿಲ್ಲಾಧಿಕಾರಿ ಕುಮಾರ್, ಎಸ್ಪಿ ಬಾಲದಂಡಿ, ಜಿ.ಪಂ ಇಓ ನಂದಿನಿ ಹಾಗೂ ಸಿಓ ಸಿ.ಜಿ. ಕೃಷ್ಣ, ಡಿವೈಎಸ್‌ಪಿ ಶಾಂತಮಲ್ಲಪ್ಪ ಸೇರಿದಂತೆ ಇತರರು ಇದ್ದರು.

ಮುತ್ತತ್ತಿ ಅರಣ್ಯ ವ್ಯಾಪ್ತಿಯಲ್ಲಿ ಚಿರತೆ ಕಳೇಬರ ಪತ್ತೆ



ಹಲಗೂರು: ಸುಮಾರು ಒಂದೂವರೆ ವರ್ಷದ ಹೆಣ್ಣು ಚಿರತೆ ಕಳೇಬರ ಮುತ್ತತ್ತಿ ಅರಣ್ಯ ವ್ಯಾಪ್ತಿಯ ಕಾವೇರಿ ವನ್ಯಜೀವಿ ಪ್ರದೇಶದ ಹುಣಸೇಮರ ಹಳ್ಳದ ಬಳಿ ಪತ್ತೆಯಾಗಿದೆ.

ಹಿರಿಯ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದಾಗ ಚಿರತೆಗಳ ಪರಸ್ಪರ ಕಾದಾಟದಿಂದ ಇದು ಸಾವಿಗೀಡಾಗಿದೆ ಎಂಬುದು ದೃಢಪಟ್ಟಿದೆ ಎಂದು ಆರ್‌ಎಫ್‌ಓ ಪ್ರಮೋದ್ ಕುಮಾರ್ ದೇವ್ ಹೇಳಿದರು.

ಅರಣ್ಯ ವೈದ್ಯಾಧಿಕಾರಿಗಳಾದ ಪ್ರವೀಣ್ ಮತ್ತು ಡೇವಿಡ್ ಕುಮಾರ್ ಮರಣೋತ್ತರ ಪರೀಕ್ಷೆ ನಡೆಸಿ, ಚಿರತೆ ಕಳೇಬರವನ್ನು ನಿಯಮದಂತೆ ಸುಟ್ಟರು. ಚಾ.ನಗರದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ.ಹೀರಾಲಾಲ್, ಕಾವೇರಿ ವನ್ಯಜೀವಿ ವಿಭಾಗ ಕೊಳ್ಳೇಗಾಲದ ಡಿಎಫ್‌ಓ ಜಿ.ಶೈ.ರಾಜು, ಕನಕಪುರ ಎಸಿಎಫ್ ನಾಗೇಂದ್ರ ಪ್ರಸಾದ್, ಎನ್‌ಟಿಸಿಎ ನಾಮನಿರ್ದೇಶಿತ ಮಲ್ಲೇಶಪ್ಪ, ಹೊಳೆಮತ್ತಿ ನೇಚರ್ ಕನ್ಸರ್ವೇಷನ್ ಫೌಂಡೇಶನ್‌ನ ಡೇವಿಡ್ ಕುಮಾರ್, ವನೋದಯ ವರ್ಲ್ಡ್ ಲೈಫ್ ಟ್ರಸ್ಟ್‌ನ ಮಹೇಶ್ ಕುಮಾರ್ ಇದ್ದರು.

ಅಂಬೇಡ್ಕರ್ ಬಗ್ಗೆ ಟೀಕಿಸಿದ ವೇದಮೂರ್ತಿ ಗಡಿಪಾರಿಗೆ ಆಗ್ರಹಿಸಿ

ದಲಿತಪರ ಸಂಘಟನೆಗಳಿಂದ ಠಾಣೆಗೆ ಮುತ್ತಿಗೆ

ಕೆ.ಆರ್.ಪೇಟೆ, ಆ.22– ಸಾಮಾಜಿಕ ಜಾಲತಾಣದಲ್ಲಿ ಅಂಬೇಡ್ಕರ್ ಅವರನ್ನು ಟೀಕೆ ಮಾಡಿ ವೀಡಿಯೊ ಹಾಕಿರುವ ದೊಡ್ಡಯಾಚೇನಹಳ್ಳಿ ಗ್ರಾಮದ ವೇದಮೂರ್ತಿ ಎಂಬಾತನನ್ನು ಬಂಧಿಸಿ, ರಾಜ್ಯದಿಂದ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿ ತಾಲೂಕು ದಲಿತ ಪರ ಸಂಘಟನೆಗಳ ಕಾರ್ಯಕರ್ತರು ಗ್ರಾಮಾಂತರ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.



ತಾಲೂಕು ದಲಿತ ಪರ ಸಂಘಟನೆಗಳ ಕಾರ್ಯಕರ್ತರು ಗ್ರಾಮಾಂತರ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ತಾಲೂಕಿನ ದೊಡ್ಡಯಾಚೇನಹಳ್ಳಿ ಗ್ರಾಮದ ವೇದಮೂರ್ತಿ 20ದಿನಗಳಿಂದ ಪದೇ ಪದೆ ಡಾ ಬಿ.ಆರ್.ಅಂಬೇಡ್ಕರ್ ಹಾಗೂ ದಲಿತರ ಮತ್ತು ಸಂವಿಧಾನದ ವಿರುದ್ಧ ಅವಹೇಳನಕಾರಿಯಾಗಿ ಟೀಕೆ ಮಾಡಿ ಹಲವು ವೀಡಿಯೊಗಳನ್ನು ಫೇಸ್‌ಬುಕ್ ಸೇರಿದಂತೆ ಹಲವು ಸಾಮಾಜಿಕ ಜಾಲತಾಣಗಳಲ್ಲಿ ಹಾಕಿರುತ್ತಾನೆ. ಈ ಬಗ್ಗೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಇದರಿಂದಾಗಿ ಆತ ತನ್ನ ಚಾಳಿಯನ್ನು ಮುಂದುವರೆಸಿದ್ದಾನೆ. ಈ ಹಿನ್ನೆಲೆಯಲ್ಲಿ ಪ್ರತಿಭಟನೆ ನಡೆಸಲಾಗಿದೆ ಎಂದು ಕಿಡಿಕಾರಿದರು. ದಲಿತ ವಿರೋಧಿ ವೇದಮೂರ್ತಿ ಎಂಬ ಕಿಡಿಗೇಡಿಯನ್ನು ಬಂಧಿಸುವ ತನಕ ಪೊಲೀಸ್ ಠಾಣೆಯಿಂದ ಹೊರ ಹೋಗುವುದಿಲ್ಲ ಎಂದು ದಲಿತ ಪರ ಸಂಘಟನೆಗಳು ಪಟ್ಟು ಹಿಡಿದು ಠಾಣೆ ಎದುರು ಕುಳಿತರು. ಪ್ರತಿಭಟನೆಯ ವಿಚಾರ ತಿಳಿದು ನಾಗಮಂಗಲ ಡಿ.ವೈ.ಎಸ್.ಪಿ ದೇವರಾಜು ಅವರು ಸ್ಥಳಕ್ಕೆ ಭೇಟಿ ನೀಡಿ ಒಂದೆರಡು ದಿನಗಳಲ್ಲಿ ಆರೋಪಿ ವೇದಮೂರ್ತಿಯನ್ನು ಬಂಧಿಸುವ ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ವಾಪಸ್ ಪಡೆದುಕೊಂಡರು.

ಪುರಸಭಾ ಸದಸ್ಯರಾದ ಡಿ.ಪ್ರೇಮಕುಮಾರ್, ಬಿ.ಜಿ. ಗಿರೀಶ್, ಹಿರಿಯ ದಲಿತ ಮುಖಂಡರಾದ ಬಸ್ತಿರಂಗಪ್ಪ, ವಿಶ್ರಾಂತ ಪ್ರಾಂಶುಪಾಲ ರಾಜಯ್ಯ, ಸಿಂಧುಘಟ್ಟ ಸೋಮಸುಂದರ್, ಛಲವಾದಿ ಮಹಾಸಭಾ ಅಧ್ಯಕ್ಷ ಊಚನಹಳ್ಳಿ ನಟರಾಜ್, ಮಾಂಬಳ್ಳಿ ಜಯರಾಂ, ಮುದುಗೆರೆ ಮಹೇಂದ್ರ, ನಾಗರಾಜು, ಲಕ್ಷ್ಮಿಪುರ ರಂಗಸ್ವಾಮಿ, ಕತ್ತರಘಟ್ಟ ರಾಜೇಶ್, ಎನ್.ಜೆ.ಮಂಜು, ಚೌಡೇನಹಳ್ಳಿ ದೇವರಾಜು, ಕೃಷ್ಣಾಪುರ ಗಿರೀಶ್, ತೆಂಡೇಕೆರೆ ನಿಂಗಯ್ಯ, ಕಳ್ಳನಕೆರೆ ಶಂಕರ್, ಹರಿಹರಪುರ ನರಸಿಂಹ, ಪವಿಕುಮಾರ್, ಜೆಡಿಎಸ್ ಗಂಗಾಧರ್, ಬಂಡಿಹೊಳೆ ಕೃಷ್ಣಮೂರ್ತಿ, ಐಕನಹಳ್ಳಿ ಗಾಯಕ ಜಗದೀಶ್, ವಿವೇಕ್, ತೆಂಗಿನಘಟ್ಟ ಮಹೇಶ್, ಕ್ಯಾಂಟೀನ್ ರಮೇಶ್, ಬಸವನಹಳ್ಳಿ ರಾಜು, ಐಪನಹಳ್ಳಿ ರವೀಶ್, ದೊಡ್ಡಹಾರನಹಳ್ಳಿ ಯೋಗೇಶ್, ಬೋಳಮಾರನಹಳ್ಳಿ ಕುಮಾರ್, ದಲಿತ ಪರ ಸಂಘಟನೆಯ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಆ.30, ಜೆಡಿಎಸ್ ಸದಸ್ಯತ್ವ ನೋಂದಣಿ

ಪಾಂಡವಪುರ, ಆ.22– ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಆ.30ರಂದು ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಸದಸ್ಯತ್ವ ನೋಂದಣಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹೇಳಿದ್ದಾರೆ.



ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸುದ್ದಿಗೋಷ್ಠಿ ನಡೆಸಿದರು.

ರಾಜ್ಯಾದ್ಯಂತ ಈಗಾಗಲೆ ಜನರೊಂದಿಗೆ ಜೆಡಿಎಸ್ ಸದಸ್ಯತ್ವ ನೋಂದಣಿ ಅಭಿಯಾನ ಕಾರ್ಯಕ್ರಮವನ್ನು ನಿಖಿಲ್ ಕುಮಾರಸ್ವಾಮಿ ನಡೆಸಿದ್ದು, ಜಿಲ್ಲೆಯ ಮಂಡ್ಯ, ಮದ್ದೂರು, ನಾಗಮಂಗಲ, ಮಳವಳ್ಳಿ ತಾಲೂಕಿನಲ್ಲಿ ಯಶಸ್ವಿಯಾಗಿ ಕಾರ್ಯಕ್ರಮ ನಡೆಸಲಾಗಿದೆ. ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಬಾಕಿ ಇದ್ದ ಕಾರಣ ಆ.30ರಂದು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆಯೆಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಟ್ಟಣದ ಐದು ದೀಪ ವೃತ್ತದಿಂದ ನಿಖಿಲ್ ಕುಮಾರಸ್ವಾಮಿ ಅವರನ್ನು ತೆರೆದ ವಾಹನದಲ್ಲಿ ಮೆರವಣಿಗೆಯಲ್ಲಿ ಕರೆದೊಯ್ಯಲಾಗುವುದು ಬಳಿಕ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಪಕ್ಷದ ಜಿಲ್ಲಾ ಹಾಗೂ ರಾಜ್ಯ ಮಟ್ಟದ ನಾಯಕರು, ಮುಖಂಡರು ಭಾಗವಹಿಸಲಿದ್ದಾರೆ ಎಂದರು.

ಪುತ್ಥಳಿ ಅನಾವರಣ: ಎಚ್.ಡಿ. ದೇವೇಗೌಡ, ಮಾಜಿ ಶಾಸಕ ಜಿ.ಬಿ.ಶಿವಕುಮಾರ್ ಅವರ ನಿಕಟವರ್ತಿಯಾಗಿದ್ದ ಗೊರವಾಲೆ ಗ್ರಾಮದ ಪಟೇಲ್ ಸಿದ್ದೇಗೌಡರ ಪುತ್ಥಳಿಯನ್ನು ಆ. 31ರಂದು ನಿಖಿಲ್‌ಕುಮಾರಸ್ವಾಮಿ ಅನಾವರಣಗೊಳಿಸುವರು. ಆದ್ದರಿಂದ ಎರಡು ಕಾರ್ಯಕ್ರಮಕ್ಕೂ ಕ್ಷೇತ್ರದ ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಧರ್ಮಸ್ಥಳ ಯಾತ್ರೆ : ಹಿಂದೂಗಳ ಭಾವೈಕ್ಯತೆಯ ಸಂಕೇತವಾದ ಧರ್ಮಸ್ಥಳ ಕ್ಷೇತ್ರದ ಬಗ್ಗೆ ಅಪಪ್ರಚಾರ ಮಾಡಲು ಮುಂದಾಗಿರುವುದರ ವಿರುದ್ಧ ಮಂಡ್ಯ ಹಾಗೂ ಮೈಸೂರು ಜಿಲ್ಲೆಯ ಭಕ್ತರು ಕಾರುಗಳ ಮೂಲಕ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಯಾತ್ರೆ ಹೊರಡಲಾಗುತ್ತಿದೆ. ಜಿಲ್ಲೆಯ ಭಕ್ತರು ಆ.25ರ ಸೋಮವಾರ ಬೆಳಿಗ್ಗೆ 4.30ಕ್ಕೆ ಕೆಆರ್‌ಎಸ್ ಮುಂಭಾಗ ಸೇರ ಬೇಕು ಮೈಸೂರು ಜಿಲ್ಲೆಯ ಭಕ್ತರು ಇಲವಾಲ ಬಳಿ ಬಂದು ಸೇರಲಿದ್ದು ಒಟ್ಟಿಗೆ ಧರ್ಮಸ್ಥಳಕ್ಕೆ ತೆರಳಿ ಧರ್ಮಾಧಿ ಮಾಡಲಾಗುವುದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸ ಬೇಕು ಎಂದು ಮನವಿ ಮಾಡಿದರು.

ಜೆಡಿಎಸ್ ಪಕ್ಷದ ಅಧ್ಯಕ್ಷ ಎಸ್.ಎ. ಮಲ್ಲೇಶ್, ಜಿಪಂ ಮಾಜಿ ಸದಸ್ಯ ಎಚ್. ಮಂಜುನಾಥ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಗುರುಸ್ವಾಮಿ, ತಾಪಂ ಮಾಜಿ ಸದಸ್ಯ ವಿ.ಎಸ್.ನಿಂಗೇಗೌಡ, ಪುರಸಭೆ ಅಧ್ಯಕ್ಷೆ ಜ್ಯೋತಿಲಕ್ಷ್ಮಿ, ಸದಸ್ಯರಾದ ಆರ್. ಸೋಮಶೇಖರ್, ಗಿರೀಶ್, ಶಿವಕುಮಾರ್, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಚಲುವೇಗೌಡ, ಬೊಮ್ಮರಾಜು, ರಾಮಕೃಷ್ಣೇಗೌಡ, ಶಿಂಭಬೋಗನಹಳ್ಳಿನಾಗಣ್ಣ, ಟೌನ್‌ಚಂದ್ರು, ರಾಮಕೃಷ್ಣೆಗೌಡ, ಮೊದಲಾದವರು ಇದ್ದರು.

ನಾಳೆ ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

ಮಂಡ್ಯ: ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಆ.24ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಬೆಳಗ್ಗೆ 9 ಗಂಟೆಗೆ ಮದ್ದೂರು ತಾಲೂಕಿನ ಕೊಪ್ಪ ಹೋಬಳಿಯ ಮೂಡ್ಯ ಗ್ರಾಮದಲ್ಲಿ ಮೂಡ್ಯದಿಂದ ಹಳೆಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಯ ಗುದ್ದಲಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. 9.30ಕ್ಕೆ ಸಂತೆ ಮೈದಾನದಲ್ಲಿ ಸಂತೆ ಮೈದಾನದಿಂದ ಕೊಪ್ಪ ಮುಖ್ಯ ರಸ್ತೆವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯ ಗುದ್ದಲಿ ಪೂಜೆ ಕಾರ್ಯಕ್ರಮ ನೆರವೇರಿಸುವರು. 9.45 ಗಂಟೆಗೆ ಕೊಪ್ಪ ಮುಖ್ಯ ರಸ್ತೆಯಲ್ಲಿ ಕೊಪ್ಪ ಮುಖ್ಯ ರಸ್ತೆಯಿಂದ ನಂಬಿನಾಯಕನಹಳ್ಳಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯ ಗುದ್ದಲಿ ಪೂಜೆ ಮಾಡುವರು.

ಬೆಳಿಗ್ಗೆ 10.15ಕ್ಕೆ ಗಟ್ಟಹಳ್ಳಿ ಮುಖ್ಯ ರಸ್ತೆಯಲ್ಲಿ ಗಟ್ಟಹಳ್ಳಿ ಗ್ರಾಮ ಪರಿಮಿತಿಯಲ್ಲಿ ಓ.ಸಿ.ರಸ್ತೆ ಕಾಮಗಾರಿಯ ಗುದ್ದಲಿ ಪೂಜೆ ಕಾರ್ಯಕ್ರಮ ನೆರವೇರಿಸಿ,10.30ಕ್ಕೆ ಕೌಡ್ಲೆ ಗ್ರಾ. ಪಂ. ಕಟ್ಟಡದ ಗುದ್ದಲಿ ಪೂಜೆಯಲ್ಲಿ ಭಾಗವಹಿಸಿ, 11ಕ್ಕೆ ನಾಗಮಂಗಲ ತಾಲೂಕಿನ ದೇವಲಾಪುರ ಹೋಬಳಿಯ ಕಸಲಗೆರೆ ಗ್ರಾಮದ ಸ್ಥಳೀಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು.

ಮಧ್ಯಾಹ್ನ 12 ಗಂಟೆಗೆ ಮಂಡ್ಯದ ಗುರು ಭವನದಲ್ಲಿ ಮೈಸೂರು ವಿಭಾಗ ಮಟ್ಟದ ಶಿಕ್ಷಕ ಪ್ರತಿನಿಧಿಗಳ ಸಮಾವೇಶ, 12.30ಕ್ಕೆ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು. ಮಧ್ಯಾಹ್ನ 3ಗಂಟೆಗೆ ಅಂಬೇಡ್ಕರ್ ಭವನದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿನ "ಬೆಲ್ಲದಾರತಿ ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ರಾತ್ರಿ 7.30ಕ್ಕೆ ಬೆಂಗಳೂರು ತಲುಪಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಯಶೋಧಮ್ಮ ನಿಧನ

ಕೆ.ಆರ್.ಪೇಟೆ, ಆ.22– ತಾಲೂಕಿನ



ಯಗಚಗುಪ್ಪೆ ಗ್ರಾಮದ ವೀರಶೈವ ಲಿಂಗಾಯಿತ ಸಮಾಜದ ಹಿರಿಯ ಮುಖಂಡರು, ಗ್ರಾ. ಪಂ. ಸದಸ್ಯ ಪುಟ್ಟಸ್ವಾಮಪ್ಪ ಅವರ ಧರ್ಮಪತ್ನಿ ಯಶೋಧಮ್ಮ(56) ಅವರು ಶುಕ್ರವಾರ ಬೆಳಿಗ್ಗೆ ನಿಧನ ಹೊಂದಿದ್ದಾರೆ.

ಮೃತರು ಪತಿ ಪುಟ್ಟಸ್ವಾಮಪ್ಪ, ಪುತ್ರರಾದ ಸಾಫ್ಟ್‌ವೇರ್ ಇಂಜಿನಿಯರ್ ವೈ.ಪಿ. ರಂಜಿತ್‌ಕುಮಾರ್, ಪ್ರಥಮ ದರ್ಜೆ ಗುತ್ತಿಗೆದಾರ ವೈ.ಪಿ.ನಂದೀಶ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮಧ್ಯಾಹ್ನ ಸ್ವಗ್ರಾಮದಲ್ಲಿ ನಡೆಯಿತು.

ಒಂದನೇ ಪುಟದಿಂದ

ಗಂಟೆಯಲ್ಲಿ ಸುಜಾತ ಭಟ್ ಯೂಟರ್ನ್

ನನ್ನನ್ನು ಪ್ರಚೋದಿಸಿದರು. ಗಿರೀಶ್ ಮಟ್ಟಣ್ಣವರ್, ಮಹೇಶ್ ಶೆಟ್ಟಿ ತಿಮರೋಡಿ ಹಾಗೂ ಇನ್ನಿಬ್ಬರ ಹೆಸರು ಹೇಳುವಂತೆ ಒತ್ತಾಯಿಸಿದರು. ನನ್ನನ್ನು ಸಮಸ್ಯೆಗಳಿಂದ ಬಚಾವ್ ಮಾಡುವುದಾಗಿ ಆಮಿಷವೊಡ್ಡಿದರು. ಕಾರಿನಲ್ಲಿ ಕೂರಿಸಿ ಕೊಂಡು ಬಲವಂತವಾಗಿ ನನ್ನಿಂದ ಅನನ್ಯ ಭಟ್ ನಾಪತ್ತೆ ಪ್ರಕರಣ ಕಟ್ಟುಕತೆ ಎಂದು ಹೇಳಿಸಿದ್ದಾರೆ. ಕಾರಿನಿಂದ ಇಳಿಯಲು ಬಿಟ್ಟಿಲ್ಲ ಎಂದರು.

ವಕೀಲರೊಬ್ಬರು ತಮಗೆ ಪರಿಚಯಸ್ಥರು ಎಂದು ಹೇಳಿ ಯು–ಟ್ಯೂಬ್‌ನವರ ಜೊತೆ ನನ್ನನ್ನು ಕಳುಹಿಸಿಕೊಟ್ಟಿದ್ದರು. ಆದರೆ ಅವರು ನನ್ನಿಂದ ಬಲವಂತವಾಗಿ ಹೇಳಿಕೆ ಪಡೆದಿದ್ದಾರೆ ಎಂದು ಆರೋಪಿಸಿದರು.

ಗಿರೀಶ್ ಮಟ್ಟಣ್ಣವರ್ ಆಗಲೀ, ಯಾರೇ ಆಗಲೀ ನನ್ನಿಂದ ಅನನ್ಯ ಭಟ್ ನಾಪತ್ತೆ ಕತೆ ಹೇಳಿಸಿಲ್ಲ. ಅನನ್ಯ ಭಟ್ ನನ್ನ ಮಗಳು ಎಂಬುದು ನಿಜ. ಸ್ವತಃ ನಾನಾಗಿಯೇ ಮಗಳು ನಾಪತ್ತೆಯಾಗಿರುವ ವಿಚಾರವಾಗಿ ಮಾತನಾಡಿದ್ದೇನೆ. ಅನನ್ಯ ಭಟ್ ನನ್ನ ಮಗಳು ಎಂಬುದನ್ನು ಎಸ್‌ಐಟಿ ಮುಂದೆ ಸಾಬೀತುಪಡಿಸುತ್ತೇನೆ. ಅಲ್ಲಿಯವರೆಗೂ ಯಾರೂ ನನಗೆ ತೊಂದರೆ ಕೊಡಬೇಡಿ ಎಂದು ಮಾಧ್ಯಮಗಳ ಮುಂದೆ ಸುಜಾತ ಭಟ್ ಹೇಳಿದ್ದಾರೆ.

ಅನನ್ಯ ಭಟ್ ನಾಪತ್ತೆ ಕಟ್ಟುಕತೆ: ಇದಕ್ಕೂ ಮುನ್ನ 'ಇನ್‌ಸೈಟ್ ರಶ್' ಯು–ಟ್ಯೂಬ್‌ನಲ್ಲಿ ಸುಜಾತ ಭಟ್ ಸಂದರ್ಶನ ಪ್ರಸಾರವಾಗಿತ್ತು.

ಆ ಸಂದರ್ಶನದಲ್ಲಿ ಸುಜಾತ ಭಟ್, ಅನನ್ಯಾ ಭಟ್ ಅನ್ನೋ ಮಗಳು ನನಗೆ ಇರುವುದೇ ಒಂದು ಕಟ್ಟುಕತೆ. ಗಿರೀಶ್ ಮಟ್ಟಣ್ಣವರ್, ಜಯಂತ್ ಹೇಳಿದ ಹಾಗೇ ನಾನು ಹೇಳಿದೆ. ಆಸ್ತಿ ವಿಚಾರವಾಗಿ ಈ ಕತೆ ಹೇಳಿಕೊಟ್ಟಿದ್ದರು. ಹೀಗಾಗಿ ಈ ಕತೆ ಹೇಳಿದೆ. ನನಗೆ ದುಡ್ಡಿಗಾಗಿ ಯಾವುದೇ ಬೇಡಿಕೆ ಇಟ್ಟಿಲ್ಲ. ನನಗೂ ಯಾರೂ ಆಫರ್ ಮಾಡಿಲ್ಲ. ಆದರೆ ನನ್ನ ತಾತನ ಆಸ್ತಿಯನ್ನು ಧರ್ಮಸ್ಥಳಕ್ಕೆ ದಾನವಾಗಿ ಹೇಗೆ ಕೊಟ್ಟರು ಅನ್ನೋದು ನನ್ನ ಪ್ರಶ್ನೆ. ಅದು ನನಗೂ ಸಿಗಬೇಕಿತ್ತು. ಆದರೆ ನನಗೆ ಪಾಲು ಸಿಗಲಿಲ್ಲ ಎಂದು ಸುಜಾತ್ ಭಟ್ ನೋವು ತೋಡಿಕೊಂಡಿದ್ದರು.

ಮಗಳ ಫೋಟೋ ಫೇಕ್ ಎಂದ ಸುಜಾತಾ ಭಟ್: ಮಗಳು ಫೋಟೋ ಬಿಡುಗಡೆ ಮಾಡಿದ್ದು ಸುಳ್ಳು, ಅದು ಖಂಡಿತ ಸುಳ್ಳು ಫೋಟೋ ಎಂದು ಸುಜಾತಾ ಭಟ್ ಹೇಳಿದ್ದರು. ಇದೇ ವೇಳೆ ತಾನು ಧರ್ಮಸ್ಥಳದ ಜನರ ನಂಬಿಕೆ, ಜನರ ಭಾವನೆ ಜೊತೆ ಆಟವಾಡಿಲ್ಲ. ಆದರೆ ನನ್ನನ್ನು ಜನರ ಭಾವನೆ ಜೊತೆ ಆಟವಾಡುವಂತೆ ಕೆಲವರು ಮಾಡಿದರು.

ಅಲ್ಲದೆ ರಿಪಬ್ಲಿಕನ್ ಸುದ್ದಿವಾಹಿನಿಗೂ ಸಂದರ್ಶನ ನೀಡಿದ್ದ ಸುಜಾತ ಭಟ್, ಅನನ್ಯ ಭಟ್ ನನ್ನ ಮಗಳಲ್ಲ. ಫೋಟೋ ಕೂಡ ವಾಸಂತಿಯದೇ ಹೊರತು, ಅನನ್ಯ ಭಟ್‌ದು ಅಲ್ಲ. ಆದರೆ ಅರವಿಂದ್–ವಿಮಲ ದಂಪತಿಯ ಪುತ್ರಿ ಅನನ್ಯ ಭಟ್. ಆಕೆಯನ್ನು ನನ್ನ ಕಣ್ಣೆದುರೇ ಧರ್ಮಸ್ಥಳದಲ್ಲಿ ಎಳೆದುಕೊಂಡು ಹೋದರು. ಆ ಹುಡುಗಿಗೆ ಆಗಿರುವ ಅನ್ಯಾಯಕ್ಕೆ ನಾನು ಪ್ರತ್ಯಕ್ಷ ಸಾಕ್ಷಿ ಆನಂತರ ಅರವಿಂದ್–ವಿಮಲ ಅವರ ಸುರತ್ಕಲ್ ಮನೆಯನ್ನು ಸಂಪೂರ್ಣವಾಗಿ ಸುಟ್ಟು ಹಾಕಿದರು. ಕೊನೆಗೆ ವಿಮಲ ಪೆಟ್ರೋಲ್ ಸುರಿದುಕೊಂಡು ಸತ್ತುಹೋದರು ಎಂಬ ವಿಚಾರ ನನಗೆ ಗೊತ್ತಾಯಿತು. ಅರವಿಂದ್ ಮತ್ತು ವಿಮಲ ದಂಪತಿ ಹಾಗೂ ಅವರ ಮಗಳು ಅನನ್ಯ ಭಟ್‌ಗೆ ನ್ಯಾಯ ಸಿಗಬೇಕೆಂದು ನಾನು ಕಟ್ಟುಕತೆ ಕಟ್ಟಿದ್ದೇನೆ ಎಂದು ಸುಜಾತ ಭಟ್ ಹೇಳಿದ್ದರು.

ಧರ್ಮಸ್ಥಳದಲ್ಲಿ ಶವ ಹೂತ ಪ್ರಕರಣದಲ್ಲಿ ಸುಳ್ಳು ಹೇಳಿಕೆ ನೀಡಿದ್ದ ವಕೀಲನ ವಿರುದ್ಧ ಎಫ್‌ಐಆರ್

ಮಂಗಳೂರು, ಆ.22– ಧರ್ಮಸ್ಥಳದಲ್ಲಿ ಶವಗಳನ್ನು ಹೂತಿಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತನಿಖೆ ವಿಚಾರವಾಗಿ ಸುಳ್ಳು ಹೇಳಿಕೆ ನೀಡಿದ್ದ ವಕೀಲ ಮಂಜುನಾಥ್ ವಿರುದ್ಧ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಧರ್ಮಸ್ಥಳ ನಿವಾಸಿ ರಘುರಾಮ ಶೆಟ್ಟಿ ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಾಗಿದೆ. ಧರ್ಮಸ್ಥಳದಲ್ಲಿ ಯಥೇಚ್ಛವಾಗಿ ಹೆಣ ಹೂತಿದ್ದಾಗಿ ವಕೀಲ ಮಂಜುನಾಥ್ ಜುಲೈ 30 ರಂದು ಮಾಧ್ಯಮ ಪ್ರಕಟಣೆ ಹೊರಡಿಸಿದ್ದರು.

ವಕೀಲ ಮಂಜುನಾಥ್ ಹೇಳಿದ್ದೇನು: ಪಾಯಿಂಟ್ ನಂಬರ್ 1ರಲ್ಲಿ 2 ಹೆಣ, ಪಾಯಿಂಟ್ ನಂ 2, 3ರಲ್ಲಿ ತಲಾ 2 ಹೆಣ, ಪಾಯಿಂಟ್ ನಂಬರ್ 4 ಮತ್ತು 5ರಲ್ಲಿ ತಲಾ 6 ಹೆಣ, ಪಾಯಿಂಟ್ ನಂಬರ್ 6, 7ರಲ್ಲಿ ತಲಾ 8 ಹೆಣ, ಪಾಯಿಂಟ್ ನಂಬರ್ 9ರಲ್ಲಿ 6–7 ಹೆಣ, ಪಾಯಿಂಟ್ ನಂಬರ್ 10ರಲ್ಲಿ 3, 11ರಲ್ಲಿ 9 ಹೆಣ, ಪಾಯಿಂಟ್ ನಂಬರ್ 12ರಲ್ಲಿ 4–5 ಹೆಣ ಪಾಯಿಂಟ್ ನಂ 13ರಲ್ಲಿ ಯಥೇಚ್ಛವಾಗಿ ಹೆಣ ಹೂತಿದ್ದಾಗಿ ವಕೀಲ ಮಂಜುನಾಥ್ ಮಾಧ್ಯಮ ಪ್ರಕಟಣೆ ಹೊರಡಿಸಿದ್ದರು. ಈ ಸಂಬಂಧ ರಘುರಾಮ ಶೆಟ್ಟಿ ಅವರು ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ದೂರು ಆಧರಿಸಿ, ಬಿಎನ್‌ಎಸ್ ಕಾಯ್ದೆ 353(1)ಬಿ, 353(2)ರ ಅಡಿ ಎಫ್‌ಐಆರ್ ದಾಖಲಾಗಿದೆ.

ಬಾನು ಮುಷ್ತಾಕ್ ದಸರಾ ಉದ್ಘಾಟನೆ

ದಸರಾ ಮಹೋತ್ಸವ ಮುಕ್ತಾಯಗೊಳ್ಳಲಿದೆ.

ಏರ್ ಶೋ: ರಕ್ಷಣಾ ಇಲಾಖೆಯಿಂದ ಈ ಬಾರಿಯೂ ವೈಮಾನಿಕ ಪ್ರದರ್ಶನ (ಏರ್ ಶೋ) ಇರಲಿದ್ದು, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವಂತೆ ಆಹ್ವಾನ ನೀಡಿರುವುದಾಗಿ ತಿಳಿಸಿದರು.

ಸೋನಿಯಾ ಗಾಂಧಿ ಪ್ರಸ್ತಾಪ ಇಲ್ಲ: ಕಾಂಗ್ರೆಸ್ ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ ಈ ಬಾರಿಯ ದಸರಾ ಮಹೋತ್ಸವವನ್ನು ಉದ್ಘಾಟಿಸುವ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಕಾರ್ಯಾಲಯ ಪತ್ರಿಕಾ ಹೇಳಿಕೆ ನೀಡಿ, ಸೋನಿಯಾ ಗಾಂಧಿ ಅವರಿಂದ ದಸರಾ ಉದ್ಘಾಟನೆಗೆ ಮನವಿ ಮಾಡಲಾಗಿದೆ ಎಂಬುದು ಸರಿಯಲ್ಲ. ಕೆಲವು ಮಾಧ್ಯಮಗಳಲ್ಲಿ ಬಂದಿರುವ ವರದಿ ಸತ್ಯಕ್ಕೆ ದೂರವಾದುದು, ಆ ರೀತಿಯ ಉದ್ದೇಶವಾಗಲೀ, ಪ್ರಸ್ತಾವನೆಯಾಗಲೀ ಸರ್ಕಾರದ ಮುಂದಿಲ್ಲ ಎಂದು ಸ್ಪಷ್ಟಪಡಿಸಿದೆ.

ರಾಹುಲ್ ಪಾದಯಾತ್ರೆಯಲ್ಲಿ ಭಾಗಿಯಾಗುವೆ: ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತಗಳ್ಳತನ ವಿರೋಧಿಸಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬಿಹಾರದಲ್ಲಿ 16 ದಿನಗಳ ಪಾದಯಾತ್ರೆ ಕೈಗೊಂಡಿದ್ದಾರೆ. ಈ ತಿಂಗಳ 29 ರಂದು ಆ ಪಾದಯಾತ್ರೆಯಲ್ಲಿ ನಾನೂ ಪಾಲ್ಗೊಳ್ಳಲಿದ್ದೇನೆ ಎಂದು ತಿಳಿಸಿದರು. 30 ದಿನಗಳ ಜೈಲು ಶಿಕ್ಷೆ ಅನುಭವಿಸಿದ ಪ್ರಧಾನಮಂತ್ರಿ, ಮುಖ್ಯಮಂತ್ರಿಗಳನ್ನು ವಜಾ ಮಾಡುವ ಬಗ್ಗೆ ಲೋಕಸಭೆಯಲ್ಲಿ ಮಸೂದೆ ಮಂಡನೆಯಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ ಅವರು, ಮಸೂದೆಗೆ ಇನ್ನು ಅನುಮೋದನೆ ದೊರೆಕಿಲ್ಲ. ಮಸೂದೆ ಪರಿಶೀಲನೆಗಾಗಿ ಸದನ ಸಮಿತಿಗೆ ಒಪ್ಪಿಸಲಾಗಿದೆ ಎಂದು ಹೇಳಿದರು.

ಬಾನು ಮುಷ್ತಾಕ್ ಮೇರು ವ್ಯಕ್ತಿತ್ವದ ಸಾಹಿತಿ

ಈ ಬಾರಿಯ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಉದ್ಘಾಟಿಸುತ್ತಿರುವ ಕರುನಾಡಿನ ಹಿರಿಯ ಲೇಖಕಿ ಎಸ್.ಕೆ.ಬಾನು ಮುಷ್ತಾಕ್ ಸಣ್ಣ ಕಥಾ ಸಂಕಲನ "ಹಾರ್ಟ್ ಲ್ಯಾಂಪ್" (ಎದೆಯ ಹಣತೆ) ಕೃತಿಗೆ 2025ನೇ ಸಾಲಿನ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ದೀಪಾ ಭಸ್ತಿ ಅವರು ಎದೆಯ ಹಣತೆ ಕನ್ನಡ ಪುಸ್ತಕವನ್ನು ಇಂಗ್ಲಿಷ್‌ಗೆ ಅನುವಾದಿಸಿ ಅದಕ್ಕೆ 'ಹಾರ್ಟ್ ಲ್ಯಾಂಪ್' ಹೆಸರಿಟ್ಟಿದ್ದರು. ಇತ್ತೀಚೆಗೆ ಲಂಡನ್‌ನಲ್ಲಿ ನಡೆದ ಸಮಾರಂಭದಲ್ಲಿ ಬಾನು ಮುಷ್ತಾಕ್ ಅವರಿಗೆ ಬೂಕರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೂಲತಃ ಹಾಸನದವರಾದ ಬಾನು ಮುಷ್ತಾಕ್ ಅವರು 1948, ಏಪ್ರಿಲ್ 3 ರಂದು ಮುಸ್ಲಿಂ ಸಮುದಾಯದಲ್ಲಿ ಜನಿಸಿದರು. 8 ವರ್ಷವಿದ್ದಾಗ ಶಿವಮೊಗ್ಗದ ಕನ್ನಡ ಭಾಷೆಯ ಮಿಷನರಿ ಶಾಲೆಗೆ ದಾಖಲಾದರು. ಮಾತೃ ಭಾಷೆ ಉರ್ದುವಾದರೂ ಬಾನು ಮುಷ್ತಾಕ್ ಅವರಿಗೆ ಕನ್ನಡ ಭಾಷೆಯ ಮೇಲೆ ಹಿಡಿತವಿದೆ. ಈ ಹಿನ್ನೆಲೆ ಬಹಳಷ್ಟು ಲೇಖನಗಳನ್ನು ಬರೆದಿದ್ದು, ಹಿಂದಿ, ಉರ್ದು, ಇಂಗ್ಲಿಷ್ ಸೇರಿದಂತೆ ಹಲವು ಭಾಷೆಗೆ ಅನುವಾದವಾಗಿದೆ.

ಬಾನು ಮುಷ್ತಾಕ್ ಅವರು ಮೂಲಭೂತವಾದ ಹಾಗೂ ಸಾಮಾಜಿಕ ಅನ್ಯಾಯದ ವಿರುದ್ಧ 1980 ರಿಂದ ಹೋರಾಟ ಮಾಡುತ್ತಾ ಬಂದಿದ್ದಾರೆ. ಮುಸ್ಲಿಂ ಮಹಿಳೆಯರ ಮಸೀದಿಗಳ ಪ್ರವೇಶ ಹಕ್ಕಿನ ಪ್ರತಿಪಾದನೆಗಾಗಿ 2000ನೇ ಇಸವಿಯಲ್ಲಿ ಬಾನು ಮುಷ್ತಾಕ್ ಅವರಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಯಿತು. ಪ್ರಾಣ ಬೆದರಿಕೆಗಳು ಬಂದವು. ಆದರೆ ಬಾನು ಮುಷ್ತಾಕ್ ಇದಕ್ಕೆಲ್ಲಾ ಹೆದರದೆ, ಮೂಲಭೂತವಾದದ ವಿರುದ್ಧ ಈ ತನಕ ಹೋರಾಟ ನಡೆಸುತ್ತಾ ಬಂದಿದ್ದಾರೆ. ಸಾಹಿತಿ, ಹೋರಾಟಗಾರ್ತಿಯೂ ಆಗಿರುವ ಬಾನು ಮುಷ್ತಾಕ್ ಅವರು ಈ ಬಾರಿಯ ದಸರಾ ಉದ್ಘಾಟನೆ ಮಾಡಲಿದ್ದು, ಆ ವೇಳೆ ಅವರ ಸಂದೇಶ ಬಹಳ ನಿರೀಕ್ಷೆ ಮೂಡಿಸಿದೆ.

ಪರಾರಿಯಾಗಲೆತ್ನಿಸಿದವನಿಗೆ ಗುಂಡೇಟು

ಅಲ್ಲದೆ ಇದನ್ನು ಕಂಡ ಜ್ಯುವೆಲ್ಲರಿ ಪಕ್ಕದ ಹೋಟೆಲ್ ಮಾಲೀಕ ಮಾದಪ್ಪ ಕತ್ತು ಹಿಸುಕಿ ಕೊಂದಿದ್ದರು.

ಈ ಆರೋಪಿಗಳ ಬಂಧನಕ್ಕೆ ಮಂಡ್ಯ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ನಾಲ್ಕು ತಂಡಗಳನ್ನು ರಚಿಸಿದ್ದರು. ಈ ಪೈಕಿ ಹಲಗೂರು ಪೊಲೀಸ್ ಠಾಣೆಯ ಪಿಎಸ್‌ಐ ಶ್ರೀಧರ್ ಮತ್ತು ನೇತೃತ್ವದ ತಂಡ ಆರೋಪಿಗಳ ಹೆಡೆಮುರಿಕಟ್ಟುವಲ್ಲಿ ಯಶಸ್ವಿಯಾಗಿದೆ

ತಾಲೂಕಿನ ಭೀಮನಹಳ್ಳಿ ಗ್ರಾಮದಲ್ಲಿ ಸಿಪಿಐ ನೇತೃತ್ವದ ತಂಡ ನಿನ್ನೆ ರಾತ್ರಿ 8.50ರ ಸಮಯದಲ್ಲಿ ಪ್ರಕರಣದ ಪ್ರಮುಖ ಆರೋಪಿ ಕಿರಣ್ ಎಂಬಾತನನ್ನು ಬಂಧಿಸಲು ತೆರಳಿದಾಗ ತಪ್ಪಿಸಿಕೊಳ್ಳಲು ಯತ್ನಿಸಿ, ಪೊಲೀಸ್ ಪೇದೆಯ ಮೇಲೆ ಹಲ್ಲೆಗೆ ಮುಂದಾದಾಗ ಸಿಪಿಐ ಶ್ರೀಧರ್ ಶರಣಾಗುವಂತೆ ಹೇಳಿದ್ದಾರೆ. ಆತಕಿವಿಗೊಡದಿದ್ದಾಗ ಆಗ ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಅದನ್ನು ಲೆಕ್ಕಿಸದಿದ್ದಾಗ ಅನಿವಾರ್ಯವಾಗಿ ಆತನ ಕಾಲಿಗೆ ಗುಂಡಿಕ್ಕಿದ್ದಾರೆ ಎಂದು ಎಸ್‌ಪಿ ವಿವರಿಸಿದರು.

ದಿಢೀರ್ ಹಣ ಗಳಿಸುವ ಉದ್ದೇಶದಿಂದ ಈ ಎಲ್ಲಾ ದುರುಳರು ಒಟ್ಟಾಗಿ, ಈ ಕೃತ್ಯ ಎಸಗಿದ್ದಾರೆ. ಗ್ಯಾಸ್ ಕಟರ್‌ನ್ನು ಮೈಸೂರಿನಲ್ಲಿ ಖರೀದಿಸಿದ್ದ ರೆನ್ನಲಾಗಿದ್ದು, ಕೃತ್ಯಕ್ಕೆ ಬಳಸಿದ್ದ ಸಲಕರಣೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಮತ್ತಷ್ಟು ಸಲಕರಣೆಗಳನ್ನು ಇನ್ನಷ್ಟೇ ವಶಪಡಿಸಿಕೊಳ್ಳಬೇಕಿದೆ ಎಂದು ತಿಳಿಸಿದರು.

ನಿವೇಶನಗಳ ಹರಾಜು ದಾಖಲೆ

ಪ್ರಕಟಣೆ ನೀಡಿದ್ದು, ಹರಾಜಿನಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಲಾಗಿದೆ. ಒಟ್ಟು 200 ನಿವೇಶನಗಳಲ್ಲಿ ಈಗಾಗಲೇ 75 ನಿವೇಶನಗಳು ಹರಾಜಾಗಿದ್ದು, ಇದರ ಮೌಲ್ಯ 100 ಕೋಟಿಗಳಾಗಿದೆ. ಇನ್ನು 125 ನಿವೇಶನಗಳು ಹರಾಜಿಗೆ ಬಾಕಿ ಇದ್ದು, ಇದರಲ್ಲಿ ಸಿಂಗಲ್ ಬಿಡ್ ಆಗುವ 50 ನಿವೇಶನಗಳನ್ನು ಕಳೆದರೆ ಇನ್ನು 75 ನಿವೇಶನಗಳ ಹರಾಜು ನಡೆಯಲಿದೆ ಎಂದು ಎಂಡಿಎ ಆಯುಕ್ತ ರಕ್ಷಿತ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಕೋಟಿ; 20x30 - 2 ಕೋಟಿ !

ಖರೀದಿ ಮಾಡಿದ್ದಾರೆ. ಸಿಲಿಕಾನ್ ಸಿಟಿ ಬೆಂಗಳೂರಿನ ಐಷರಾಮಿ ಬಡಾವಣೆಗಳಾದ ಡಾಲರ್ಸ್ ಕಾಲನಿ ಹಾಗೂ ಇಂದಿರಾ ನಗರದಲ್ಲಿ ಚದರಡಿಗೆ 25 ರಿಂದ 30 ಸಾವಿರ ರೂಪಾಯಿ ಮಾರುಕಟ್ಟೆ ಬೆಲೆ ಇದೆ. ಆದರೆ ಮೈಸೂರು, ಬೆಂಗಳೂರನ್ನು ಮೀರಿಸಿದ್ದು, ಚದರಡಿಗೆ 33 ಸಾವಿರದಂತೆ ಹರಾಜಾಗಿದೆ. ಮೈಸೂರಿನಲ್ಲಿರುವ ನಿವೇಶನಗಳಿಗೆ ಅಷ್ಟಾಗಿ ಬೆಲೆ ಇಲ್ಲ ಎಂದು ಬಹಳಷ್ಟು ಮಂದಿ ತಪ್ಪು ಲೆಕ್ಕಾಚಾರ ಹಾಕಿದ್ದರು. ಆದರೆ ಈಗ ದಾಖಲೆ ಪ್ರಮಾಣದಲ್ಲಿ ನಿವೇಶನವನ್ನು ಹರಾಜಿನಲ್ಲಿ ಖರೀದಿ ಮಾಡಿರುವುದು ಎಲ್ಲರನ್ನು ಹುಬ್ಬೇರಿಸುವಂತೆ ಮಾಡಿದೆ. ಈ ಮೂಲಕ ಮೈಸೂರಿನ ರಿಯಲ್ ಎಸ್ಟೇಟ್‌ನಲ್ಲಿ ಧನಾತ್ಮಕ ವಹಿವಾಟು ನಡೆಯುತ್ತಿರುವುದು ಖಾತರಿಯಾಗಿದೆ. ಮುಡಾ ಹಗರಣದ ನಂತರ ನಿವೇಶನಗಳ ಖರೀದಿಗೆ ಜನರು ಉತ್ಸುಕತೆ ತೋರುತ್ತಿಲ್ಲ ಎಂಬ ಅಪವಾದವಿತ್ತು. ಆದರೆ ಈಗ ದಾಖಲೆ ಪ್ರಮಾಣದಲ್ಲಿ ನಿವೇಶನ ಖರೀದಿ ಆಗಿರುವುದು ಅಚ್ಚರಿ ಮೂಡಿಸಿದೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್!

ನಾನು ಪರೋಕ್ಷವಾಗಿ ಇಲ್ಲವೇ, ಪ್ರತ್ಯಕ್ಷವಾಗಿ ಆಗಲೀ ಬಿಜೆಪಿ ಜೊತೆ ಕೈಜೋಡಿಸುವ ಪ್ರಮೇಯವೇ ಇಲ್ಲ. ಜನತಾದಳ–ಬಿಜೆಪಿ ಕುರಿತು ಸಂಶೋಧನೆ ಮಾಡುತ್ತಿರುತ್ತೇನೆ. ಹಾಗೆಯೇ ಆರ್‌ಎಸ್‌ಎಸ್ ಬಗ್ಗೆಯೂ ತಿಳಿದುಕೊಂಡಿದ್ದೇನೆ.

ಆರ್‌ಎಸ್‌ಎಸ್ ಪ್ರತಿ ತಾಲೂಕು, ಜಿಲ್ಲೆ ಸೇರಿದಂತೆ ಎಲ್ಲಾ ಕಡೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದೆ. ಸಾಕಷ್ಟು ಹಣ ಹೂಡಿಕೆ ಮಾಡುತ್ತಿದೆ. ಮಕ್ಕಳನ್ನು ತಲುಪುವ ಕೆಲಸ ಮಾಡುತ್ತಿದೆ. ಅದರೊಂದಿಗೆ ರಾಜಕೀಯ ಭಿನ್ನಾಭಿಪ್ರಾಯ ಹೊಂದಿರಬಹುದು. ಎದುರಾಳಿಗಳಲ್ಲಿ ಯಾರು ಸ್ನೇಹಿತರು, ಯಾರು ಶತ್ರುಗಳು ಎನ್ನುವುದನ್ನು ತಿಳಿಯಬೇಕು. ಅದಕ್ಕಾಗಿ ಆರ್‌ಎಸ್‌ಎಸ್ ಇತಿಹಾಸ ತಿಳಿದುಕೊಂಡಿದ್ದೇನೆ.

ಕೆಲವು ಸಂಸ್ಥೆಗಳಲ್ಲಿ ಒಳ್ಳೆಯ ಗುಣಗಳಿರುತ್ತವೆ. ಅವುಗಳನ್ನೂ ಗಮನಿಸಬೇಕು. ನೇರ, ದಿಟ್ಟವಾಗಿ ಮಾತನಾಡುವುದು ನಮ್ಮ ಗುಣ, ಬೇರೆಯವರ ಗುಣಗಳನ್ನೂ ಗಮನಿಸಬೇಕು. ಅದನ್ನು ಮಾಡಿದ್ದೇವೆ ಎಂದರು.

ಡಿಕೆಶಿ ಮಹಾನ್ ಕಲಾವಿದ



ಬೆಂಗಳೂರು, ಆ.22– ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನಸಭೆಯಲ್ಲಿ 'ಆರ್‌ಎಸ್‌ಎಸ್' ಗೀತೆ ಹಾಡಿರುವುದು ವ್ಯಾಪಕ ಚರ್ಚೆ ಹಾಗೂ ಅಚ್ಚರಿಗೆ ಕಾರಣವಾಗಿದೆ.

ವಿಧಾನಸಭೆ ಕಲಾಪದ ವೇಳೆ ನಿನ್ನೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ 11 ಜನರ ಸಾವಿಗೆ ಕಾರಣವಾದ ಕಾಲ್ತುಳಿತದ ಕುರಿತು ನಡೆದ ಚರ್ಚೆಯ ಸಂದರ್ಭದಲ್ಲಿ 'ನಮಸ್ತೆ ಸದಾ ವತ್ಸಲೇ ಮಾತೃಭೂಮಿ' ಎಂಬ ಆರ್‌ಎಸ್‌ಎಸ್ ಗೀತೆಯ ಮೊದಲ ಕೆಲವು ಸಾಲುಗಳನ್ನು ಡಿ.ಕೆ.ಶಿವಕುಮಾರ್ ಹಾಡಿರುವುದು ಕಾಂಗ್ರೆಸ್ ಹಾಗೂ ಪ್ರತಿಪಕ್ಷ ಬಿಜೆಪಿ ನಾಯಕರಲ್ಲಿ ಕುತೂಹಲಕ್ಕೆ ಕಾರಣವಾಗಿದೆ. ಈ ಕುರಿತು ಸುದ್ದಿಸಂಸ್ಥೆ ಜೊತೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಡಿ.ಕೆ.ಶಿವಕುಮಾರ್ 'ಮಹಾನ್ ಕಲಾವಿದ'. ವಿಧಾನಸಭೆಯ ಒಳಗಡೆ ಹಾಗೂ ಹೊರಗಡೆ ಮಾತನಾಡುವುದರಲ್ಲಿ ಅವರು ಎಕ್ಸ್‌ಪರ್ಟ್. ಅವರಿಂದ ನಾವು ಪಾಠ ಕಲಿಯಬೇಕಾದ ಅಗತ್ಯವಿದೆ. ಇಂದು ಆರ್‌ಎಸ್‌ಎಸ್ ಗೀತೆ ಹಾಡಿದ್ದಾರೆ. ಆದರೆ ಅವರನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು ಎಂದು ಹೇಳಿದ್ದಾರೆ.

ತುಂಬಾ ಖುಷಿಯಾಗಿದೆ...

ನೋಡಿದ್ದೆ. ನಂತರದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿರಲಿಲ್ಲ. ಈಗ ಇಂತಹ ಪಾರಂಪರಿಕ ದಸರಾ ಉತ್ಸವಕ್ಕೆ ಚಾಲನೆ ನೀಡುವ ಸುಸಂದರ್ಭ ಒದಗಿ ಬಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ದಶಕದಲ್ಲಿ ಮೂವರು: ನಾಲ್ಕು ಶತಮಾನದ ಇತಿಹಾಸ ಹೊಂದಿರುವ ಮೈಸೂರು ದಸರಾ ಮಹೋತ್ಸವವನ್ನು ಸ್ವಾತಂತ್ರ್ಯದ ನಂತರ ಹಲವು ಗಣ್ಯರು ಉದ್ಘಾಟಿಸಿದ್ದಾರೆ. ಆದರೆ ಕಳೆದ ಏಳೆಂಟು ವರ್ಷಗಳಲ್ಲಿ ಮೂವರು ಮಹಿಳಾ ಸಾಧಕಿಯರಿಗೆ ಈ ಅವಕಾಶ ದಕ್ಕಿರುವುದು ವಿಶೇಷ. 2018ರಲ್ಲಿ ಇನ್ಫೋಸಿಸ್ ಫೌಂಡೇಷನ್‌ನ ಡಾ.ಸುಧಾಮೂರ್ತಿಯವರು ಹಾಗೂ 2022ರಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದಸರಾ ಉದ್ಘಾಟಿಸಿದ್ದರು. ಈ ಬಾರಿ ಸಾಹಿತಿ ಬಾನು ಮುಷ್ತಾಕ್ ಅವರಿಗೆ ದಸರಾಗೆ ಚಾಲನೆ ನೀಡುವ ಅವಕಾಶ ದೊರೆತಿದೆ.

ಮಾತು ನಂಬಿ ಮೋಸ ಹೋಗಿದ್ದೇವೆ

ಮಾಡಿದ್ದಾರೆ ಎಂದರೆ ಮತ್ತೆ ಕೆಲವರು ಅವರ ಮಾತು ನಂಬಿ ಹೋರಾಟಕ್ಕೆ ಮುಂದಾಗಿದ್ದರು. ಇದೇ ವಿಚಾರವಾಗಿ ಮಾತನಾಡಿರುವ ಸಾಮಾಜಿಕ ಹೋರಾಟಗಾರ ಜಯಂತ್, ಸುಜಾತ ಭಟ್ ಅವರ ಮಾತು ಕೇಳಿ ಸತ್ಯವೆಂದು ನಂಬಿ ನಾವು ಮೋಸ ಹೋಗಿದ್ದೇವೆ ಎಂದು ಹೇಳಿದ್ದಾರೆ. ಸುಜಾತ ಭಟ್ ಅವರ ಮಾತುಗಳನ್ನು ನಾನು ಮತ್ತು ಮಹೇಶ್ ಶೆಟ್ಟಿ ತಿಮರೋಡಿ ಸತ್ಯವೆಂದು ನಂಬಿದ್ದೆವು. ಪಾಪ ವಯಸ್ಸಾದ ಮಹಿಳೆ ಎಂದು ನಾವು ಸಹಾಯಕ್ಕೆ ಮುಂದಾದೆವು. ಆದರೆ ಮಗಳ ವಿಷಯದಲ್ಲಿ ದಾಖಲೆಗಳನ್ನು ತಂದುಕೊಡಿ ಅಂದಾಗ ಅವರು ಉಡುಪಿ ಮತ್ತು ಎಲ್ಲೆಲ್ಲೋ ಸುತ್ತಿದರೇ ಹೊರತು ದಾಖಲೆ ಕೊಡಲಿಲ್ಲ ಎಂದು ಜಯಂತ್ ಹೇಳಿದರು.

ಹೈಕೋರ್ಟ್, ಸೆಷನ್ ಕೋರ್ಟ್‌ಗೆ ಹುಸಿ ಬಾಂಬ್ ಬೆದರಿಕೆ

ಬೆಂಗಳೂರು, ಆ.22– ಹೈಕೋರ್ಟ್ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಶುಕ್ರವಾರ ಇ–ಮೇಲ್ ಮೂಲಕ ಬಂದಿದ್ದ ಬಾಂಬ್ ಬೆದರಿಕೆಯ ಸಂದೇಶವು ಕೆಲಕಾಲ ಆತಂಕ ಸೃಷ್ಟಿಸಿತ್ತು. ಶುಕ್ರವಾರ ಬೆಳಗ್ಗೆ 11 ಗಂಟೆ ಸುಮಾರಿಗೆ ಮೈಸೂರು ಬ್ಯಾಂಕ್ ವೃತ್ತದಲ್ಲಿ ಇರುವ ಸಿಟಿ ಸಿವಿಲ್ ಕೋರ್ಟ್‌ನ ಇ–ಮೇಲ್ ವಿಳಾಸಕ್ಕೆ ಬಾಂಬ್ ಬೆದರಿಕೆ ಸಂದೇಶ ಬಂದಿತು. ಕೋರ್ಟ್ ಆವರಣದಲ್ಲಿ ಬಾಂಬ್ ಇಡಲಾಗಿದ್ದು, ಕೆಲವೇ ಕ್ಷಣಗಳಲ್ಲಿ ಅದು ಸ್ಫೋಟಗೊಳ್ಳಲಿದೆ ಎಂದು ಕಿಡಿಗೇಡಿಗಳು ಸಂದೇಶ ಕಳುಹಿಸಿದ್ದರು. ಪರಿಶೀಲನೆ ನಂತರ ಇದೊಂದು ಹುಸಿಬಾಂಬ್ ಬೆದರಿಕೆ ಎಂಬುದು ಖಚಿತವಾಗಿದೆ.

ಮೈಸೂರು ಮಿತ್ರ

ಪರಿಸರ ಸ್ನೇಹಿ ಗೌರಿ-ಗಣೇಶನ ವಿಸರ್ಜನೆಗೆ

ಮೈಸೂರು ಪಾಲಿಕೆಯಿಂದ ನೀರಿನ ಟ್ಯಾಂಕರ್‌ಗಳ ವ್ಯವಸ್ಥೆ



ಮೈಸೂರು, ಆ.22(ಎಂಕೆ)- ಪರಿಸರ ಸ್ನೇಹಿ ಗೌರಿ-ಗಣೇಶ ಮೂರ್ತಿಗಳನ್ನು ಪರಿಸರಕ್ಕೆ ಹಾನಿ ಉಂಟಾಗದ ರೀತಿಯಲ್ಲಿ ವಿಸರ್ಜಿಸಲು ಮೈಸೂರು ನಗರಪಾಲಿಕೆ ಕ್ರಮ ಕೈಗೊಂಡಿದ್ದು, ಆ.27, 28 ಮತ್ತು 31 ರಂದು ನೀರಿನ ಟ್ಯಾಂಕರ್‌ಗಳ ವ್ಯವಸ್ಥೆ ಕಲ್ಪಿಸಲಿದೆ.

ಗೌರಿ-ಗಣೇಶ ಮೂರ್ತಿಗಳ ವಿಸರ್ಜನೆಯಿಂದ ಜಲಮೂಲಗಳ ಮೇಲುಂಟಾಗುವ ಮಾಲಿನ್ಯ ಹಾಗೂ ಜನಜಂಗುಳಿಯನ್ನು ತಗ್ಗಿಸಲು ನಗರ ಪಾಲಿಕೆ 9 ವಲಯ ಕಚೇರಿಗಳ ವ್ಯಾಪ್ತಿಯ ಪ್ರಮುಖ ಬೀದಿ ಹಾಗೂ ವೃತ್ತಗಳಲ್ಲಿ ವಿಗ್ರಹ ವಿಸರ್ಜನೆಗೆ ಅವಕಾಶ ಮಾಡಿಕೊಡಲಾಗಿದೆ. ಸಾರ್ವಜನಿಕರ ಸಂಪರ್ಕಕ್ಕಾಗಿ ಪರಿಸರ ಅಭಿಯಂತರರು ಹಾಗೂ ಆರೋಗ್ಯ ಪರಿವೀಕ್ಷಕರನ್ನು ನಿಯೋಜಿಸಲಾಗಿದೆ.

ಗೌರಿ-ಗಣೇಶ ಮೂರ್ತಿಗಳ ವಿಸರ್ಜನೆ ಸ್ಥಳ ಮತ್ತು ನಿಯೋಜಿತ ಸಿಬ್ಬಂದಿ ವಿವರ: 101 ಗಣಪತಿ ದೇವಸ್ಥಾನದ ಬಳಿ ವಿಸರ್ಜನೆಗೆ ಆರೋಗ್ಯ ಪರಿವೀಕ್ಷಕ ಹೆಚ್.ಎಂ.ಶಿವಪ್ರಸಾದ್ (9964254808) ಸಂಪರ್ಕಿಸಬಹುದಾಗಿದೆ. ಹಾಗೆಯೇ ಭೂತಾಳೆ ಮೈದಾನದಲ್ಲಿ ಆರೋಗ್ಯ ಪರಿವೀಕ್ಷಕಿ ಸಿ.ಶೋಭಾ (8792988437), ಬಲ್ಲಾಳ್ ವೃತ್ತದಲ್ಲಿ ಆರೋಗ್ಯ ಪರಿವೀಕ್ಷಕ ಜಿ.ಆರ್.ಶಶಿಕುಮಾರ್ (9008145906), ವಿವೇಕಾನಂದ ವೃತ್ತದಲ್ಲಿ ಆರೋಗ್ಯ ಪರಿವೀಕ್ಷಕಿ ಶೀಲಾ (9632900538), ಅನಿಕೇತನ ರಸ್ತೆ, ಜ್ಞಾನಗಂಗಾ ಶಾಲೆ ಬಳಿ ಆರೋಗ್ಯ ಪರಿವೀಕ್ಷಕ ಎಂ.ಕೆ.ಸೋಮಶೇಖರ್ (9844432551), ವಲಯ ಕಚೇರಿ-3 ಶಾರದಾದೇವಿನಗರದಲ್ಲಿ ಆರೋಗ್ಯ ಪರಿವೀಕ್ಷಕ ಪ್ರವೀಣ್ ಕುಮಾರ್ (9964874982), ಮಾತೃಮಂಡಳಿ ವೃತ್ತದಲ್ಲಿ ಆರೋಗ್ಯ ಪರಿವೀಕ್ಷಕ ಪ್ರಕಾಶ್ (9986420857/8123826396), ಸಂಗಮ ವೃತ್ತ ಎಂಜಿ ಕೊಪ್ಪಲು ಆರೋಗ್ಯ ಪರಿವೀಕ್ಷಕ ಟಿ.ಡಿ.ಹರೀಶ್‌ಕುಮಾರ್ (7676070098), ಬಸವನಗುಡಿ ವೃತ್ತದಲ್ಲಿ ಆರೋಗ್ಯ ಪರಿವೀಕ್ಷಕಿ ಬಿ.ಎ.ಸುಗುಣ(7259817305), ಅಭಿಷೇಕ್ ವೃತ್ತದಲ್ಲಿ ಆರೋಗ್ಯ ಪರಿವೀಕ್ಷಕಿ ಎನ್.ಎಂ.ಗೀತಾ(9880154561), ಪುಲಿಕೇಶಿ ರಸ್ತೆ, ಬಿಬಿ ಕೇರಿಯಲ್ಲಿ ಆರೋಗ್ಯ ಪರಿವೀಕ್ಷಕ ಮಂಜುಕುಮಾರ್(9164143489), ವಲಯ ಕಚೇರಿ-6 ಆರೋಗ್ಯ ಪರಿವೀಕ್ಷಕ ಬಸವರಾಜು(8722646408), ಎಫ್‌ಟಿಎಸ್ ವೃತ್ತ ಆರೋಗ್ಯ ಪರಿವೀಕ್ಷಕಿ ನಮ್ರತಾ(9741593580), ಮಾರುತಿ ವೃತ್ತದಲ್ಲಿ ಆರೋಗ್ಯ ಪರಿವೀಕ್ಷಕಿ ರಾಜೇಶ್ವರಿ ಬಾಯಿ (7760954056), ಗಣೇಶ್‌ನಗರ, ಉದಯಗಿರಿಯಲ್ಲಿ ಆರೋಗ್ಯ ಪರಿವೀಕ್ಷಕ ಕಾರ್ತಿಕ್ (9900410697), ಟೆರೆಷಿಯನ್ ಕಾಲೇಜು ವೃತ್ತದಲ್ಲಿ ಆರೋಗ್ಯ ಪರಿವೀಕ್ಷಕಿ ಶ್ರುತಿ ಹಾಗೂ ತ್ರಿವೇಣಿ ವೃತ್ತದಲ್ಲಿ ಗೌರಿ-ಗಣೇಶ ವಿಸರ್ಜನೆಗೆ ಆರೋಗ್ಯ ಪರಿವೀಕ್ಷಕಿ ಸಹನಾ(9900145407) ಅವರನ್ನು ಸಂಪರ್ಕಿಸಲು ಕೋರಲಾಗಿದೆ.

ಮೈಕ್ರೋ ಫೈನಾನ್ಸ್ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡವರ ಕುಟುಂಬಕ್ಕೆ 5 ಲಕ್ಷ ಪರಿಹಾರ

ಪರಿಷತ್‌ನಲ್ಲಿ ಸಿ.ಎನ್ ಮಂಜೇಗೌಡರ ಪ್ರಶ್ನೆಗೆ ಸಿಎಂ ಸಿದ್ದರಾಮಯ್ಯ ಉತ್ತರ

ಬೆಂಗಳೂರು, ಆ.22- ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್‌ಗಳ ಹಾವಳಿಯಿಂದ ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿಗಳ ಕುಟುಂಬಕ್ಕೆ 5 ಲಕ್ಷ ರೂ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನ ಪರಿಷತ್‌ನಲ್ಲಿ ಘೋಷಿಸಿದರು.



ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ರಾಜ್ಯದಲ್ಲಿ ಕರ್ನಾಟಕ ಕಿರುಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ಕಾಯ್ದೆ-2025 ಜಾರಿಗೆ ಬಂದಿದ್ದರೂ ಸಹ ಫೈನಾನ್ಸ್ ಕಂಪನಿಗಳ ಕಿರುಕುಳ ಮುಂದುವರೆದಿದೆ ಎಂದು ಹೇಳಿದರಲ್ಲದೇ, ಕಳೆದ ಮೂರು ವರ್ಷದಲ್ಲಿ ಫೈನಾನ್ಸ್ ಕಂಪನಿಗಳ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳಿಗೆ ಸರ್ಕಾರ ನೀಡಿದ ಪರಿಹಾರವೇನು? ಎಂದು ಪ್ರಶ್ನಿಸಿದರು.

ಅವರಿಗೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಆತ್ಮಹತ್ಯೆ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವುದೇ ನಮ್ಮ ಉದ್ದೇಶವಾಗಿದ್ದು ಈ ಬಗ್ಗೆ ಹಣಕಾಸು ಇಲಾಖೆ ಹಾಗೂ ಮುಖ್ಯ ಕಾರ್ಯದರ್ಶಿಯೊಂದಿಗೆ ಮಾತುಕತೆ ನಡೆಸಿ ನಿರ್ಧಾರ ಕೈಗೊಳ್ಳಲಾಗಿದೆ. ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಜನರು ಮೈಕ್ರೋ ಫೈನಾನ್ಸಿಯರ್ ಕಿರುಕುಳಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಈ ಬಗ್ಗೆ ಪರಿಶೀಲಿಸಿ 2024ರಲ್ಲಿ ಸುಗ್ರೀವಾಜ್ಞೆ ತಂದು ಕರ್ನಾಟಕ ಕಿರು ಸಾಲ ಹಾಗು ಸಣ್ಣ ಸಾಲ ಕಾಯ್ದೆ ಜಾರಿ ಮಾಡಿದ ಬಳಿಕ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ. ಸದಸ್ಯರ ಕೋರಿಕೆಯಂತೆ ಆತ್ಮಹತ್ಯೆಗೆ ಶರಣಾಗಿರುವ ರೈತರ ಕುಟುಂಬಕ್ಕೆ ನೀಡುತ್ತಿರುವಂತೆ ಮೈಕ್ರೋ ಫೈನಾನ್ಸ್‌ಗಳ ಹಾವಳಿಯಿಂದ ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿಗಳ ಕುಟುಂಬಕ್ಕೆ 5 ಲಕ್ಷ ರೂ ಪರಿಹಾರ ನೀಡಲಾಗುವುದು ಎಂದು ತಿಳಿಸಿದರು.

ಇಂದು ಪರಕಾಲ ಮಠದಲ್ಲಿ ಸಂಗೀತ ಕಛೇರಿ

ಮೈಸೂರು, ಆ.22- ಮೈಸೂರಿನ ದೇವರಾಜ ಮೊಹಲ್ಲಾ ಕೃಷ್ಣವಿಲಾಸ ರಸ್ತೆಯ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠದಲ್ಲಿ ಚಾತುರ್ಮಾಸ್ಯ ಅಂಗವಾಗಿ ಶನಿವಾರ(ಆ.23) ಸಂಜೆ 6ಕ್ಕೆ ವಿದುಷಿ ದೀಪ್ತಿ ಮೋಹನ್ ತಂಡದಿಂದ ಸಂಗೀತ ಕಛೇರಿ ಏರ್ಪಡಿಸಲಾಗಿದೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

ಇಂದು, ನಾಳೆ 'ಪರಮೇಶಿ ಪ್ರೇಮ ಪ್ರಸಂಗ' ನಾಟಕ ಪ್ರದರ್ಶನ

ಮೈಸೂರು,ಆ.22(ಎಂಟಿವೈ)- ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಆ.23 ಮತ್ತು ಆ.24ರಂದು ಸಂಜೆ 6.30ಕ್ಕೆ 'ಪರಮೇಶಿ ಪ್ರೇಮ ಪ್ರಸಂಗ' ಹಾಸ್ಯ ನಾಟಕ ಪ್ರದರ್ಶನ ನಡೆಯಲಿದೆ ಎಂದು ನಿರ್ದೇಶಕ ರವಿ ಪ್ರಸಾದ್ ತಿಳಿಸಿದ್ದಾರೆ.



ರಂಗವಲ್ಲಿ ಮೈಸೂರು ಸಂಸ್ಥೆ ಮೈಸೂರಿನ ರಂಗಾಸಕ್ತರಿಗಾಗಿ ಎರಡು ದಿನ 'ಪರಮೇಶಿ ಪ್ರೇಮ ಪ್ರಸಂಗ' ಹಾಸ್ಯ ನಾಟಕವನ್ನು ಪ್ರದರ್ಶನ ಆಯೋಜಿಸಲಾಗಿದೆ. ಈ ಹಾಸ್ಯ ನಾಟಕ ಹೆಸರಾಂತ ರಂಗ ನಿರ್ದೇಶಕ ಶ್ರೀನಿವಾಸ ಪ್ರಭು ಅವರು ರಚಿಸಿದ್ದಾರೆ. ರವಿಪ್ರಸಾದ್ ನಿರ್ದೇಶಿಸಿರುವ ಈ ನಾಟಕಕ್ಕೆ ಹೆಸರಾಂತ ವಿನ್ಯಾಸಕಾರ ಹೆಚ್.ಕೆ.ದ್ವಾರಕನಾಥ್ ರಂಗವಿನ್ಯಾಸ ಮಾಡಿದ್ದಾರೆ. ಬೆಳಕಿನ ವಿನ್ಯಾಸ - ಮಧು ನೀನಾಸಂ, ಸಂಗೀತ ನಿರ್ವಹಣೆ ಮಂಜು ಮಂಗಲ, ಪ್ರಸಾದನ ಸರಿತಾ ಸಿ.ವಿ. ಹಾಗೂ ಹರಿಪ್ರಸಾದ್ ವಸ್ತ್ರ ವಿನ್ಯಾಸ ಮಾಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ 9964656482 ಸಂಪರ್ಕಿಸಬಹುದು.

ಧರ್ಮಸ್ಥಳದ ವಿರುದ್ಧ ಎಡಪಂಥೀಯರ ಷಡ್ಯಂತ್ರ ಆರೋಪ

ಮೈಸೂರಿನ ಹಲವೆಡೆ ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ





ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಮೈಸೂರಿನ ಗಾಂಧಿ ವೃತ್ತದ ಮಹಾತ್ಮಗಾಂಧಿ ಪ್ರತಿಮೆ ಮುಂದೆ ಶುಕ್ರವಾರ ಪ್ರತಿಭಟನೆ ನಡೆಸಿದರು (ಎಡಚಿತ್ರ). ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸುವವರನ್ನು ಕೂಡಲೇ ಬಂಧಿಸುವಂತೆ ಆಗ್ರಹಿಸಿ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಕುವೆಂಪುನಗರದ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಹೋರಾಟ (ಬಲಚಿತ್ರ) ನಡೆಸಿದರು.

ಮೈಸೂರು, ಆ.22(ಬಿಎಲ್‌ಯು)- ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ ಎಂದು ಆರೋಪಿಸಿ ಬಿಜೆಪಿ ಕಾರ್ಯಕರ್ತರು ಮೈಸೂರಿನ ಗಾಂಧಿ ವೃತ್ತ ಸೇರಿದಂತೆ ಹಲವೆಡೆ ಇಂದು ಪ್ರತಿಭಟನೆ ನಡೆಸಿದರು.

ರಾಷ್ಟ್ರಪಿತ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ಶ್ರೀ ಕ್ಷೇತ್ರದ ವಿರುದ್ಧ ಎಡಪಂಥೀಯರ ಹುನ್ನಾರ, ಮಾಡುವೆವು ಷಡ್ಯಂತ್ರದ ಸಂಹಾರ, ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡುವವರ ಬಂಧನ ಯಾವಾಗ, ಎಡಪಂಥೀಯರ ಷಡ್ಯಂತ್ರ ಬಯಲು ಮಾಡುವೆವು, ಧರ್ಮಕ್ಕೆ ಜಯವಾಗಲಿ, ದುಷ್ಟರ ಸಂಹಾರವಾಗಲಿ, ಷಡ್ಯಂತ್ರದ ಹಿಂದೆ ತಮಿಳುನಾಡು ಸಂಸದ ಸಸಿಕಾಂತ್ ಸೆಂಥಿಲ್ ಇದ್ದಾರೆ ಎಂಬ ಘೋಷಣಾ ಫಲಕಗಳನ್ನು ಹಿಡಿದು ಧರ್ಮಸ್ಥಳ ವಿರೋಧಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ನಗರ ಬಿಜೆಪಿ ಅಧ್ಯಕ್ಷ ನಾಗೇಂದ್ರ, ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರ ಯಶಸ್ವಿಯಾಗಲು ನಾವು ಬಿಡುವುದಿಲ್ಲ. ರಾಜ್ಯದಾದ್ಯಂತ ಹೋರಾಟ ಮಾಡುವ ಮೂಲಕ ಹಿಂದೂ ವಿರೋಧಿಗಳಿಗೆ ತಕ್ಕ ಪಾಠ ಕಲಿಸುತ್ತೇವೆ ಎಂದು ಎಚ್ಚರಿಸಿದರು.

ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ಮಾಜಿ ಕಾರ್ಪೊರೇಟರ್ ಪ್ರಶಾಂತ್ ಗೌಡ, ಮುಖಂಡರಾದ ಸುಬ್ಬಯ್ಯ, ರಂಗಸ್ವಾಮಿ, ಸತೀಶ್ ರವೀಂದ್ರ, ವೇದಾವತಿ, ಪ್ರೇಮಿಳಾ ಭರತ್, ಚಿಕ್ಕ ವೆಂಕಟಪ್ಪ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೆ.ಆರ್.ಕ್ಷೇತ್ರ ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ- ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಅಪಪ್ರಚಾರ ವಿರೋಧಿಸಿ ನಗರದ ಕೆ.ಆರ್.ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಕುವೆಂಪುನಗರ ಕಾಂಪ್ಲೆಕ್ಸ್ ಬಳಿ ಇಂದು ಪ್ರತಿಭಟನೆ ನಡೆಸಿದರು.



ಹಿಂದೂಗಳನ್ನು ಕೆಣಕಿದರೆ ತೀವ್ರ ರೀತಿಯ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ರಾಮಕೃಷ್ಣನಗರದ ವೃತ್ತದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು, ಧರ್ಮಸ್ಥಳದ ವಿರುದ್ಧ ಅಪಪ್ರಚಾರದಲ್ಲಿ ತೊಡಗಿರುವವರನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದರು.

ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಕೆ.ಆರ್.ಕ್ಷೇತ್ರದ ಅಧ್ಯಕ್ಷ ಗೋಪಾಲರಾಜೇ ಅರಸ್, ಮಾಜಿ ಮೇಯರ್ ಶಿವಕುಮಾರ್, ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಹರೀಶ್, ಮುಖಂಡರಾದ ಜಯರಾಂ, ಜೈಶಂಕರ್, ಕೇಬಲ್ ಮಹೇಶ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಹಾಜರಿದ್ದರು.

ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ: ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸಲಾಗಿದೆ ಎಂದು ಆಪಾದಿಸಿ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ರಾಮಕೃಷ್ಣನಗರದ ವೃತ್ತದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ಹಿಂದೂಗಳ ಕೆಣಕಿದರೆ ಸಮರ, ಎಡಪಂಥೀಯರೇ ಎಚ್ಚರ, ಧರ್ಮಕ್ಕೆ ಜಯವಾಗಲಿ, ದುಷ್ಟರ ಸಂಹಾರವಾಗಲಿ, ಎಡಪಂಥೀಯರ ಷಡ್ಯಂತ್ರ ಬಯಲಿಗೆಳೆಯೋಣ, ಧರ್ಮಸ್ಥಳ ರಕ್ಷಿಸೋಣ, ಷಡ್ಯಂತ್ರಕ್ಕೆ ಸೋಲು ಗ್ಯಾರಂಟಿ, ಧರ್ಮದ ಹೋರಾಟಕ್ಕೆ ಗೆಲುವು ಶತಸಿದ್ಧ ಎಂಬ ಘೋಷಣಾ ಫಲಕಗಳನ್ನು ಹಿಡಿದು ರಾಜ್ಯ ಸರ್ಕಾರ ಹಾಗೂ ಎಡಪಂಥೀಯರ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗಿದರು.

ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಗ್ರಾಮಾಂತರ ಮಾಜಿ ಅಧ್ಯಕ್ಷ ಮಹೇಂದ್ರ ಮುಖಂಡರಾದ ಶಿವಕುಮಾರ್, ಸತೀಶ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಎನ್‌ಆರ್ ಠಾಣೆಗೆ ಸಿಸಿ ಕ್ಯಾಮೆರಾ ಕೊಡುಗೆ



ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಡಿ.ರೆಹಾನ್ ಬೇಗ್ ಅವರು ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಇಕ್ಬಾಲ್ ನೇತೃತ್ವದಲ್ಲಿ ಶುಕ್ರವಾರ ಎನ್‌ಆರ್ ಪೊಲೀಸ್ ಠಾಣೆಗೆ 10 ಸಿಸಿ ಟಿವಿ ಕ್ಯಾಮೆರಾಗಳನ್ನು ಎನ್‌ಆರ್ ಎಸಿಪಿ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಎಸಿಪಿ ಅಶ್ವಥ್ ನಾರಾಯಣ ಅವರಿಗೆ ಹಸ್ತಾಂತರ ಮಾಡಿದರು. ಈ ಸಂದರ್ಭದಲ್ಲಿ ಎನ್‌ಆರ್ ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ್ ತಳವಾರ್, ಎಎಸ್‌ಐ ಅನಿಲ್ ಕೆ.ಶಂಕ್‌ಪಾಲ್, ಕೆಪಿಸಿಸಿ ಮೈಸೂರು ನಗರದ ಕೋ ಆರ್ಡಿನೇಟರ್ ಶೌಕತ್ ಅಲಿ ಖಾನ್, ಕಾರ್ಮಿಕ ವಿಭಾಗದ ಅಧ್ಯಕ್ಷ ಮೊಹಮ್ಮದ್ ಶಿಫ್ಟನ್, ಮಝರ್, ಕಾಂಗ್ರೆಸ್ ಮುಖಂಡರಾದ ಪದ್ಮನಾಭ ಗುಂಡ, ಉಮೇಶ್ ಇದ್ದರು.

ಇಎಂಆರ್‌ಸಿ ನಿರ್ದೇಶಕರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ಆ.22- ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಬಹುಮಾಧ್ಯಮ ಕೇಂದ್ರ(ಇಎಂಆರ್‌ಸಿ)ದ ನಿರ್ದೇಶಕರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಇಂದಿನಿಂದಲೇ ಅರ್ಜಿ ಸಲ್ಲಿಕೆ ಆರಂಭವಾಗಿದ್ದು ಸೆಪ್ಟೆಂಬರ್ 11ರವರೆಗೆ ಕಾಲಾವಕಾಶ ನೀಡಲಾಗಿದೆ. ಮಾಹಿತಿ ಮತ್ತು ಅರ್ಜಿಯ ನಮೂನೆ ಪಡೆಯಲು ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uni-mysore.ac.in ಅನ್ನು ಸಂಪರ್ಕಿಸಬಹುದು ಎಂದು ವಿವಿಯ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈಲ್ವೆ ಇಲಾಖೆ ಹುದ್ದೆಗಳಿಗೆ ಸಂಬಂಧಿಸಿದಂತೆ ಕೆನೆಪದರದ ವಿನಾಯಿತಿ ಪಡೆಯಲು ತೊಡಕು

ಮೈಸೂರು, ಆ.22(ಜಿಎ)-ರೈಲ್ವೆ ಇಲಾಖೆಗೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಹುದ್ದೆಗಳಿಗೆ ಅರ್ಜಿ ಸಲ್ಲಿಸುವಾಗ ರಾಜ್ಯದಲ್ಲಿನ ಕೆಲವೊಂದು ಲೋಪಗಳಿಂದಾಗಿ ಕೆನೆಪದರದಿಂದ ವಿನಾಯಿತಿ ಪಡೆಯಲು ಸಾಧ್ಯವಾಗದೇ ಹುದ್ದೆಗಳು ಲಭಿಸುತ್ತಿಲ್ಲ. ಹೀಗಾಗಿ ರಾಜ್ಯದ ಮುಖ್ಯ ಕಾರ್ಯದರ್ಶಿ ಇತ್ತ ಗಮನ ಹರಿಸಿ ಲೋಪ ಸರಿಪಡಿಸಬೇಕೆಂದು ಅಖಿಲ ಭಾರತ ಹಿಂದುಳಿದ ವರ್ಗಗಳ ರೈಲ್ವೆ ನೌಕರರ ಸಂಘದ ನೈರುತ್ಯ ವಿಭಾಗದ ಪ್ರಧಾನ ಕಾರ್ಯದರ್ಶಿ ವೈ. ಗೋವರ್ಧನ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವರ್ಗದವರು ಅರ್ಜಿ ಸಲ್ಲಿಸುವ ವೇಳೆ ಪೋಷಕರ ವೇತನ, ಕೃಷಿ ಆದಾಯ ಪರಿಗಣಿಸಬಾರದು, ಇತರೆ ರಾಜ್ಯಗಳಲ್ಲಿ ಈ ಸೌಲಭ್ಯ ಇದೆ. ಆದರೆ ಕರ್ನಾಟಕದಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ವೇಳೆ ಈ ಆಯ್ಕೆ ಇಲ್ಲ. ಇದರಿಂದಾಗಿ ರಾಜ್ಯದವರು ರೈಲ್ವೆ ಇಲಾಖೆಯ ಉನ್ನತ ಹುದ್ದೆಗಳಿಗೆ ನೇಮಕವಾಗಲು ಸಾಧ್ಯವಾಗದೆ ಕೇವಲ ಹೊರ ರಾಜ್ಯದವರೇ ಎಲ್ಲೆಡೆ ಕಾಣುತ್ತಿದ್ದಾರೆ. ಇದೇ ಸಮಸ್ಯೆ ನೀಟ್, ಸಿಇಟಿ, ಯುಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆ ವೇಳೆಯೂ ಎದುರಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಈ ಮೂಲಕ ಅದು ಸರ್ಕಾರಕ್ಕೆ ತಲುಪಲಿದೆ. ಇದರೊಡನೆಯೇ ರಾಜ್ಯ ಮುಖ್ಯ ಕಾರ್ಯದರ್ಶಿಗಳು ಸಹಾ ಇತ್ತ ಗಮನಹರಿಸಿ, ಆನ್‌ಲೈನ್ ಅರ್ಜಿ ಸಲ್ಲಿಕೆ ವೇಳೆ ಈ ಆಯ್ಕೆ ಬರುವಂತೆ ನೋಡಿಕೊಳ್ಳಬೇಕು ಎಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಕೆ.ಮುರುಗನ್, ಸಲೀಮ್ ಮಲಿಕ್, ಶಿವಶಂಕರ್, ಧ್ರುವಕುಮಾರ್, ಸಂತೋಷ್ ಉಪಸ್ಥಿತರಿದ್ದರು.

ಚಿತ್ರಕಲೆ ಸತ್ಯ, ಪರಿಪೂರ್ಣತೆ ಹುಡುಕುವ ದೃಶ್ಯ ಮಾಧ್ಯಮ

- ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಅಭಿಮತ
- ಪ್ರದರ್ಶಕ ಕಲೆ ಮತ್ತು ದೃಶ್ಯ ಕಲೆಗಳ ಅನುಸಂಧಾನ ಕುರಿತ ವಿಚಾರ ಸಂಕಿರಣ

ಮೈಸೂರು, ಆ.22(ಎಂಕೆ)- ಪ್ರಕೃತಿಯಂತೆ ಚಲನಶೀಲತೆ ಹೊಂದಿರುವ ಚಿತ್ರಕಲೆಯು ನೋಡುಗರಲ್ಲಿ ವಿಭಿನ್ನ ಚಿಂತನೆಗಳನ್ನು ಹುಟ್ಟುಹಾಕುವ ಮೂಲಕ ಸತ್ಯ ಮತ್ತು ಪೂರ್ಣತೆಯ ಹುಡುಕಾಟ ನಡೆಸುವ ದೃಶ್ಯ ಮಾಧ್ಯಮವಾಗಿದೆ ಎಂದು ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಅಭಿಪ್ರಾಯಿಸಿದರು.

ಮೈಸೂರಿನ ಶ್ರೀ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಸಭಾಂಗಣದಲ್ಲಿ ಶ್ರೀ ಗುಬ್ಬಿ ವೀರಣ್ಣ ಪೀಠ, ಮೈಸೂರು ವಿವಿ ಲಲಿತಕಲಾ(ಕಾವಾ) ಕಾಲೇಜು ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ 'ಪ್ರದರ್ಶಕ ಕಲೆ ಮತ್ತು ದೃಶ್ಯ ಕಲೆಗಳ ಅನುಸಂಧಾನ' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ನೃತ್ಯ, ಸಂಗೀತ, ಚಿತ್ರ, ವಾಸ್ತುಶಿಲ್ಪಗಳು ಸಮಷ್ಟಿ ಕಲೆಗಳಾಗಿದ್ದು, ಚಿತ್ರಕಲೆಯಲ್ಲಿ ಶ್ರವ್ಯವೂ ಸೇರಬೇಕಿತ್ತು ಎಂದರು.

ಚಿತ್ರಕಲೆ ಎಂದರೆ ಕಲ್ಪಿಸಿ ದೃಶ್ಯವನ್ನು ಸೃಷ್ಟಿಸುವುದಾಗಿದೆ. ಒಂದು ಚಿತ್ರಕ್ಕೆ ಒಂದೇ ರೀತಿಯ ಅಭಿಪ್ರಾಯ ವ್ಯಕ್ತವಾದರೆ, ಆ ಚಿತ್ರ ಚೆನ್ನಾಗಿಲ್ಲ ಎಂದರ್ಥ. ಚಿತ್ರಕಲೆ ನೋಡಿದ ಒಬ್ಬೊಬ್ಬರಲ್ಲಿ ವಿಭಿನ್ನ ಭಾವನೆಗಳು, ಅಭಿಪ್ರಾಯಗಳನ್ನು ಹುಟ್ಟುಹಾಕುವಂತಿರಬೇಕು. ಅದರಲ್ಲೂ ಭಾರತ ದೇಶದ ಕಲೆಗಳನ್ನು ಆರಾಧನೆ ಮಾಡಲಿದ್ದು ಈಜಿಪ್ಟ್ ಮತ್ತು ಗ್ರೀಕ್ ಕಲೆಗಿಂತ ಭಿನ್ನವಾಗಿದೆ ಎಂದರು.



ಮೈಸೂರಿನ ಕಾವಾ ಕಾಲೇಜಿನಲ್ಲಿ ಆಯೋಜಿಸಿದ್ದ 'ಪ್ರದರ್ಶಕ ಕಲೆ ಮತ್ತು ದೃಶ್ಯ ಕಲೆಗಳ ಅನುಸಂಧಾನ' ಕುರಿತ ವಿಚಾರ ಸಂಕಿರಣವನ್ನು ಅಗೋಚರ ಚಿತ್ರಕ್ಕೆ ಬಣ್ಣ ಬಳಿಯುವ ಮೂಲಕ ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಉದ್ಘಾಟಿಸಿದರು

ಚಿತ್ರಕಲೆಯಿಂದಲೇ ರಾಮಾಯಣ-ಮಹಾಭಾರತದಲ್ಲಿ ಬರುವ ಪಾತ್ರಗಳು ಹೀಗೆಯೇ ಇವೆ ಎಂಬುದನ್ನು ತಿಳಿಯಲು ಸಾಧ್ಯವಾಗಿದ್ದು. ರಾಮನ ಪರಮ ಭಕ್ತನಾದ ಹನುಮಂತನನ್ನು ಬೇರ್ಪಡಿಸಿ, ಒಂಟಿಯಾಗಿ ಚಿತ್ರಿಸಲಾಗುತ್ತಿದೆ. ಈ ಮೂಲಕ ಕಲೆಗಳನ್ನು ನೋಡುವ ದೃಷ್ಟಿಕೋನದಲ್ಲಿ ರಾಜಕಾರಣವೂ ಅಡಗಿದೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಚಿತ್ರಕಲೆಯಲ್ಲಿನ ವಿನ್ಯಾಸಗಳು ಬದಲಾದಂತೆ ಒಂದೊಂದು ಅಭಿಪ್ರಾಯಗಳು ವ್ಯಕ್ತವಾಗಲಿವೆ ಎಂದು ತಿಳಿಸಿದರು.

ಪ್ರಕೃತಿಯಂತೆ ಚಲನಶೀಲತೆ ಹೊಂದಿರುವ ಚಿತ್ರಕಲೆಯಲ್ಲಿ ಬದಲಾಗುವ ಒಂದೊಂದು ಗೆರೆಗಳು ವಿಶಿಷ್ಟತೆ ಸೃಷ್ಟಿಸಲಿವೆ. ಅಲ್ಲದೆ ಚಿತ್ರಕಲೆಗೆ ಶಿಕ್ಷಣ ಮತ್ತು ಅಕ್ಷರದ ಜ್ಞಾನಕ್ಕಿಂತ ಆಸಕ್ತಿ ಮುಖ್ಯವಾಗುತ್ತದೆ. ಯಾವ ಚಿತ್ರಕಲೆಗೆ ಮಾನ್ಯತೆ ಬರುತ್ತೋ ಅದು ರಾಜಕೀಯ ಶಕ್ತಿಯಾಗಲಿದೆ. ಅನೈತಿಕತೆಯಿಂದ ಬೆತ್ತಲಾಗುತ್ತಿರುವ ಜಗತ್ತಿನಲ್ಲಿ ಚಿತ್ರಕಲೆ ಸತ್ಯ ಮತ್ತು ಪರಿಪೂರ್ಣತೆಯ ಹುಡುಕಾಟ ನಡೆಸುವ ಮಾಧ್ಯಮವಾಗಿದೆ ಎಂದು ತಿಳಿಸಿದರು.

ವಿಷಯ ಮಂಡನೆ: ನಂತರ ನಟ ಅರುಣ್ ಸಾಗರ್, 'ರಂಗ ವಿನ್ಯಾಸದಲ್ಲಿ ದೃಶ್ಯಕಲೆಯ ಮಹತ್ವ' ಕುರಿತು ವಿಷಯ ಮಂಡಿಸಿದರೆ, ರಂಗಕರ್ಮಿಗಳಾದ ಕೆ.ಆರ್.ನಂದಿನಿ ಮತ್ತು ಪ್ರಸಾದ್ ಕುಂದೂರು ಪ್ರತಿಕ್ರಿಯೆ ನೀಡಿದರು. ಹಾಗೆಯೇ 'ಪ್ರದರ್ಶಕ ಕಲೆಗಳಲ್ಲಿ ದೃಶ್ಯ ಕಲೆಯ ಪರಿಣಾಮ' ಕುರಿತು ಎಸ್ ವ್ಯಾಸ ವಿಶ್ವವಿದ್ಯಾನಿಲಯದ ಯೋಗ ಮತ್ತು ಮಾನವಿಕ ಶಾಸ್ತ್ರ ವಿಭಾಗದ ಡೀನ್ ವಿದುಷಿ ಡಾ.ಕರುಣಾ ವಿಜಯೇಂದ್ರ ವಿಷಯ ಮಂಡಿಸಿದರೆ, ವಿದುಷಿ ಸಿ.ಎಮ್.ಅನಿತ ಮತ್ತು ರಂಗ ನಿರ್ದೇಶಕ ದಿಗ್ವಿಜಯ ಹೆಗ್ಗೋಡು ಪ್ರತಿಕ್ರಿಯೆ ನೀಡಿದರು.

ವಿದುಷಿ ಡಾ.ತುಳಸಿ ರಾಮಚಂದ್ರ, ಮೈಸೂರು ವಿವಿ ಕುಲಸಚಿವ(ಮೌಲ್ಯಮಾಪನ) ಪ್ರೊ.ನಾಗರಾಜ್, ಕಾವಾ ಕಾಲೇಜು ಡೀನ್ ಎ.ದೇವರಾಜು, ಪ್ರಾಂಶುಪಾಲರಾದ ಅನಿಟ ಬ್ರ್ಯಾಗ್ಸ್, ಆಡಳಿತಾಧಿಕಾರಿ ನಿರ್ಮಲಾ ಮಠಪತಿ, ಶೈಕ್ಷಣಿಕ ಸಂಯೋಜಕ ಎ.ಪಿ.ಚಂದ್ರಶೇಖರ್, ರಂಗ ತಜ್ಞ ಅರಸೀಕೆರೆ ಯೋಗಾನಂದ, ಕಾವಾ ಕಾಲೇಜು ಚಿತ್ರಕಲಾ ವಿಭಾಗದ ಮುಖ್ಯಸ್ಥ ಕೆರವಿಮೂರ್ತಿ ಮತ್ತಿತರರಿದ್ದರು.

ದೇಶ - ವಿದೇಶ

ಶ್ರೀ ಕಾಳಹಸ್ತಿಯಲ್ಲಿ 55 ವರ್ಷ ಹಳೆಯ ಭೂ ವಿವಾದ ಕೊನೆಗೂ ಇತ್ಯರ್ಥ

ತಿರುಪತಿ: ಶ್ರೀ ಕಾಳಹಸ್ತಿ ಮಂಡಲದ ಸಿಂಹಾಚಲ ಕಂಡ್ರಿಗ ಗ್ರಾಮದಲ್ಲಿ 55 ವರ್ಷಗಳಷ್ಟು ಹಳೆಯದಾದ ಭೂ ವಿವಾದವನ್ನು ಬುಧವಾರ ತಿರುಪತಿ ಜಿಲ್ಲಾಧಿಕಾರಿ ಎಸ್.ವೆಂಕಟೇಶ್ವರ್ ಅವರ ಮಧ್ಯಸ್ಥಿಕೆಯಲ್ಲಿ ಬಗೆಹರಿಸಲಾಯಿತು.

1998 ರಲ್ಲಿ 98 ಪರಿಶಿಷ್ಟ ಜಾತಿ ಕುಟುಂಬಗಳಿಗೆ ಡಿಕೆಟಿ ಪಟ್ಟಾಗಳಾಗಿ ನೀಡಲಾಗಿದ್ದ 130 ಎಕರೆ ಭೂಮಿ ವಿವಾದದಲ್ಲಿ ಸಿಲುಕಿತ್ತು. ನಂತರ ಅರಣ್ಯ ಇಲಾಖೆಯು ಈ ಭೂಮಿ ಮೀಸಲು ಅರಣ್ಯದ ಭಾಗವೆಂದು ಹೇಳಿಕೊಂಡು ಪಟ್ಟಾಗಳನ್ನು ರದ್ದುಗೊಳಿಸುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿತ್ತು. ಹೈಕೋರ್ಟ್ ಸಹ ಪಟ್ಟಾ ರದ್ದತಿಗೆ ಆದೇಶಿಸಿದ್ದರೂ, ದಶಕಗಳಿಂದ ಯಾವುದೇ ಕ್ರಮ ಕೈಗೊಂಡಿರಲಿಲ್ಲ.

ಶ್ರೀ ಕಾಳಹಸ್ತಿ ಶಾಸಕ ಬೊಜ್ಜಲ ಸುಧೀರ್ ರೆಡ್ಡಿ ಮೂಲಕ ಗ್ರಾಮಸ್ಥರಿಂದ ಬಂದ ಮನವಿಯ ನಂತರ, ಜಿಲ್ಲಾಧಿಕಾರಿ ಗ್ರಾಮಕ್ಕೆ ಭೇಟಿ ನೀಡಿ, ರೈತರೊಂದಿಗೆ ಸಂವಾದ ನಡೆಸಿ, ಈ ಭೂಮಿ ಮೀಸಲು ಅರಣ್ಯ ವ್ಯಾಪ್ತಿಯಲ್ಲಿದೆ ಎಂದು ದೃಢಪಡಿಸಿ, ಪಟ್ಟಾಗಳನ್ನು ರದ್ದುಗೊಳಿಸಲು ನಿರ್ಧರಿಸಲಾಯಿತು. ಆದರೆ ಪರಿಹಾರವಾಗಿ, ಹೊಸ ಸರ್ಕಾರಿ ಭೂಮಿ ಗುರುತಿಸಿ 90 ಬಾಧಿತ ಕುಟುಂಬಗಳಿಗೆ 90 ದಿನಗಳಲ್ಲಿ ಬೇರೆ ಭೂಮಿ ಹಂಚಿಕೆ ಮಾಡುವ ಭರವಸೆ ನೀಡಲಾಯಿತು. ದೀರ್ಘ ಕಾಲದಿಂದ ಬಾಕಿ ಉಳಿದಿದ್ದ ಸಮಸ್ಯೆ ಕೊನೆಗೂ ಬಗೆಹರಿದಿದ್ದು ಕುಟುಂಬಗಳು, ಅರಣ್ಯ ಇಲಾಖೆಗೆ ರಿಲೀಫ್ ಸಿಕ್ಕಿದೆ ಎಂದಿದ್ದಾರೆ.

ವಿಧವೆ ಕೊಂದು, ಶವವನ್ನು 7 ತುಂಡುಗಳಾಗಿ ಕತ್ತರಿಸಿ ಚೀಲದಲ್ಲಿ ತುಂಬಿ ಎಸೆದ ಪ್ರಿಯಕರ

ಉತ್ತರ ಪ್ರದೇಶ: ಉತ್ತರ ಪ್ರದೇಶದ ಝಾನ್ಸಿಯಲ್ಲಿ ಮದುವೆ ಮಾಡಿಕೊಳ್ಳುವಂತೆ ಒತ್ತಾಯಿಸುತ್ತಿದ್ದ ಮಹಿಳೆಯನ್ನು ಮಾಜಿ ಪ್ರಧಾನ್ ಕೊಂದು ಶವವನ್ನು ಏಳು ತುಂಡುಗಳಾಗಿ ಕತ್ತರಿಸಿ ಚೀಲದಲ್ಲಿ ತುಂಬಿ ಎಸೆದಿದ್ದಾನೆ.



ಆ.13ರಂದು ತೋಡಿ ಫತೇಪುರ್ ಪ್ರದೇಶದ ಕಿಶೋರ್‌ಪುರ್ ಗ್ರಾಮದಲ್ಲಿರುವ ತನ್ನ ಜಮೀನಿಗೆ ರೈತನೊಬ್ಬ ಹೋಗಿದ್ದ. ಕೆಟ್ಟ ವಾಸನೆ ಬಂದ ನಂತರ, ಹತ್ತಿರದ ಕೆರೆಯೊಳಗೆ ನೋಡಿದಾಗ ಅದರಲ್ಲಿ ಎರಡು ಚೀಲಗಳು ಕಂಡಿವೆ. ಚೀಲಗಳಲ್ಲಿ ಮಹಿಳೆಯ ದೇಹದ ತುಂಡುಗಳಿದ್ದವು. ಎರಡೂ ಕೈಗಳು, ಎರಡೂ ಕಾಲುಗಳು ಮತ್ತು ಮಹಿಳೆಯ ತಲೆ ಕಾಣೆಯಾಗಿತ್ತು.

ಕೊಲೆಯಾದ ಮಹಿಳೆಯನ್ನು ಟಿಕಮ್‌ಗಢ ನಿವಾಸಿ ರಚನಾ ಯಾದವ್ ಎಂದು ಗುರುತಿಸಲಾಯಿತು. ಈಕೆ ಮತ್ತು ಸಂಜಯ್ ಪಟೇಲ್ ನಡುವೆ ಸಂಬಂಧ ಬೆಳೆಯಿತು. ಮಹಿಳೆ ಮಾಜಿ ಪ್ರಧಾನ್ ಸಂಜಯ್ ಪಟೇಲ್ ಮೇಲೆ ಮದುವೆಗೆ ಒತ್ತಡ ಹೇರಲು ಪ್ರಾರಂಭಿಸಿದಳು. ಇದರಿಂದ ಆತ ರಚನಾಳನ್ನು ಕೊಲೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಣ ದುರುಪಯೋಗ: ಶ್ರೀಲಂಕಾ ಮಾಜಿ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಬಂಧನ

ಕೊಲಂಬೊ: ಸರ್ಕಾರದ ಹಣ ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ಶ್ರೀಲಂಕಾ ಮಾಜಿ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಅವರನ್ನು ಶುಕ್ರವಾರ ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.



ವಿಕ್ರಮಸಿಂಘೆ ಅವರು ದೇಶದ ಮುಖ್ಯಸ್ಥರಾಗಿದ್ದಾಗ ಬ್ರಿಟಿಷ್ ವಿಶ್ವವಿದ್ಯಾಲಯದಲ್ಲಿ ತಮ್ಮ ಪತ್ನಿಯ ಸಮಾರಂಭದಲ್ಲಿ ಭಾಗವಹಿಸಲು ಸೆಪ್ಟೆಂಬರ್ 2023ರಲ್ಲಿ ಲಂಡನ್‌ಗೆ ಭೇಟಿ ನೀಡಿದ್ದಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ ನಂತರ ಅವರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಕ್ರಮಸಿಂಘೆ ಅವರನ್ನು ಅಪರಾಧ ತನಿಖಾ ಇಲಾಖೆ(ಸಿಐಡಿ) ಪ್ರಧಾನ ಕಚೇರಿಯಲ್ಲಿ ಬಂಧಿಸಲಾಗಿದ್ದು, ಸರ್ಕಾರಿ ಹಣ ದುರುಪಯೋಗದ ತನಿಖೆಗೆ ಸಂಬಂಧಿಸಿದಂತೆ ಹೇಳಿಕೆ ದಾಖಲಿಸಲು ಅವರನ್ನು ಇಲ್ಲಿಗೆ ಕರೆಸಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

ವಿಕ್ರಮಸಿಂಘೆ ಅವರು ಅಧಿಕೃತ ಕಾರ್ಯಕ್ರಮದ ನಂತರ ಅಮೆರಿಕದಿಂದ ಹಿಂತಿರುಗುತ್ತಿದ್ದರು ಮತ್ತು ಅವರ ಪತ್ನಿಯ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಸರ್ಕಾರದ ವೆಚ್ಚದಲ್ಲಿ ಯುಕೆಗೆ ಭೇಟಿ ನೀಡಿದ್ದಾರೆ ಎಂದು ಆರೋಪಿಸಲಾಗಿದೆ.

ಕೊಲಂಬಿಯಾದಲ್ಲಿ ಕಾರ್ ಬಾಂಬ್, ಹೆಲಿಕಾಪ್ಟರ್ ದಾಳಿ: 12 ಪೊಲೀಸರು ಸೇರಿ 17 ಮಂದಿ ಸಾವು

ಬೊಗೋಟಾ: ಕೊಲಂಬಿಯಾದಲ್ಲಿ ಕಳೆದ ರಾತ್ರಿ ಪೊಲೀಸ್ ಹೆಲಿಕಾಪ್ಟರ್ ಮೇಲೆ ನಡೆದ ಕಾರ್ ಬಾಂಬ್ ಮತ್ತು ಪ್ರತ್ಯೇಕ ದಾಳಿಯಲ್ಲಿ ಕನಿಷ್ಠ 17 ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೊಲಂಬಿಯಾ ಅಧ್ಯಕ್ಷ ಗುಸ್ತಾವೊ ಪೆಟ್ರೋ ಈ ಎರಡೂ ದಾಳಿಗಳಿಗೆ ಕೊಲಂಬಿಯಾದ ಕ್ರಾಂತಿಕಾರಿ ಸಶಸ್ತ್ರ ಪಡೆಗಳು ಎಂದು ಕರೆಯಲ್ಪಡುವ ನಿಷ್ಕ್ರಿಯ ಕೊಲಂಬಿಯಾದ ಕ್ರಾಂತಿಕಾರಿ ಸಶಸ್ತ್ರ ಪಡೆಗಳ ಭಿನ್ನಮತೀಯರು ಕಾರಣ ಎಂದು ಆರೋಪಿಸಿದ್ದಾರೆ.



ಕೊಕೇನ್‌ಗೆ ಕಚ್ಚಾ ವಸ್ತುವಾದ ಕೋಕಾ ಎಲೆ ಬೆಳೆಗಳನ್ನು ನಿರ್ಮೂಲನೆ ಮಾಡಲು ಉತ್ತರ ಕೊಲಂಬಿಯಾದ ಆಂಟಿಯೋಕ್ವಿಯಾದ ಪ್ರದೇಶಕ್ಕೆ ಸಿಬ್ಬಂದಿಯನ್ನು ಸಾಗಿಸುತ್ತಿದ್ದ ಅಧಿಕಾರಿಗಳ ಪ್ರಕಾರ ಹೆಲಿಕಾಪ್ಟರ್ ಮೇಲಿನ ದಾಳಿಯಲ್ಲಿ ಕನಿಷ್ಠ 12 ಪೊಲೀಸ್ ಅಧಿಕಾರಿಗಳು ಹುತಾತ್ಮರಾಗಿದ್ದಾರೆ. ಪೆಟ್ರೋ ಆರಂಭದಲ್ಲಿ ಎಂಟು ಅಧಿಕಾರಿಗಳು ಮೃತಪಟ್ಟಿದ್ದಾರೆ ಎಂದು ವರದಿ ಮಾಡಿದ್ದರು, ಆದರೆ ಆಂಟಿಯೋಕ್ವಿಯಾ ಗವರ್ನರ್ ಆಂಡ್ರೆಸ್ ಜೂಲಿಯನ್ ನಂತರ ಇತರ ನಾಲ್ವರು ಅಧಿಕಾರಿಗಳು ಮೃತಪಟ್ಟಿದ್ದಾರೆ ಮತ್ತು ಮೂವರು ಗಾಯಗೊಂಡಿದ್ದಾರೆ ಎಂದು ಹೇಳಿದರು.

ಭಾರತೀಯ ಅಂತರಿಕ್ಷ ನಿಲ್ದಾಣದ ಮಾದರಿ ಅನಾವರಣ ಮಾಡಿದ ಇಸ್ರೊ

ನವದೆಹಲಿ: ರಾಷ್ಟ್ರೀಯ ಬಾಹ್ಯಾಕಾಶ ದಿನದ ಆಚರಣೆಯಲ್ಲಿ ಇಸ್ರೊ 'ಭಾರತೀಯ ಅಂತರಿಕ್ಷ ನಿಲ್ದಾಣ (ಬಿಎಎಸ್)ದ ಮಾದರಿಯನ್ನು ಶುಕ್ರವಾರ ಅನಾವರಣಗೊಳಿಸಿತು. 2028ರ ವೇಳೆಗೆ ಅಂತರಿಕ್ಷದಲ್ಲಿ ತನ್ನದೇ ನಿಲ್ದಾಣ ಹೊಂದುವ ಯೋಜನೆ ಭಾರತದ್ದು.



ಪ್ರಸ್ತುತ ಎರಡು ಅಂತರರಾಷ್ಟ್ರೀಯ ಪ್ರಯೋಗಾಲಯಗಳಿವೆ. ಅವುಗಳೆಂದರೆ ಇಸ್ರೊ ಸೇರಿ ಐದು ಬಾಹ್ಯಾಕಾಶ ಸಂಸ್ಥೆಗಳು ನಿರ್ಮಿಸಿರುವ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಮತ್ತು ಚೀನಾದ ಟಿಯಾಂಗಾಂಗ್ ಬಾಹ್ಯಾಕಾಶ ನಿಲ್ದಾಣ.

2035ರ ವೇಳೆ ಐದು ಮಾಡ್ಯೂಲ್‌ಗಳ ಭಾರತೀಯ ಅಂತರಿಕ್ಷ ನಿಲ್ದಾಣ ಹೊಂದುವ ಗುರಿಯನ್ನು ಇಟ್ಟುಕೊಂಡಿದೆ. ಬಿಎಎಸ್01 ಮಾಡ್ಯೂಲ್ 10 ಟನ್ ತೂಕ ಇರುವ ನಿರೀಕ್ಷೆ ಇದೆ. ಬಾಹ್ಯಾಕಾಶ, ಜೀವವಿಜ್ಞಾನ, ವೈದ್ಯಕೀಯ, ಅಂತರಗ್ರಹ ಪರಿಶೋಧನೆ ಸೇರಿದಂತೆ ವಿವಿಧ ದೃಷ್ಟಿಕೋನದಲ್ಲಿ ಅಧ್ಯಯನ ನಡೆಸಲು ಈ ವೇದಿಕೆ ನೆರವಾಗಲಿದೆ. ಅಲ್ಲದೆ, ಮಾನವನ ಆರೋಗ್ಯದ ಮೇಲೆ ಸೂಕ್ಷ್ಮ ಗುರುತ್ವದ ಪ್ರಭಾವ ಮತ್ತು ಬಾಹ್ಯಾಕಾಶದಲ್ಲಿ ಮಾನವ ಹೆಚ್ಚು ಕಾಲ ಇರಲು ಅಗತ್ಯವಾದ ತಂತ್ರಜ್ಞಾನದ ಪರೀಕ್ಷೆ ನಡೆಸಲು ಈ ನಿಲ್ದಾಣ ಅವಕಾಶ ಒದಗಿಸಲಿದೆ ಎನ್ನಲಾಗಿದೆ.

ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಖಂಡಿಸಿ ಬಿಜೆಪಿ ಪ್ರತಿಭಟನೆ

ಸರ್ಕಾರದ ವಿರುದ್ಧ ಘೋಷಣೆ, ಅಪಪ್ರಚಾರದ ವಿರುದ್ಧ ಆಕ್ರೋಶ

ಮಡಿಕೇರಿ,ಆ.22–ಹಿಂದೂಗಳ ಧಾರ್ಮಿಕ ಶ್ರದ್ಧಾ ಕೇಂದ್ರವಾದ ಶ್ರೀ ಧರ್ಮಸ್ಥಳ ಕ್ಷೇತ್ರದ ಮೇಲೆ ನಿರಂತರವಾಗಿ ನಡೆಸುತ್ತಿರುವ ಅಪಪ್ರಚಾರದ ಹಿಂದಿನ ಷಡ್ಯಂತ್ರದ ಕುರಿತು ರಾಜ್ಯ ಸರ್ಕಾರ ಮೊದಲು ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸುವಂತೆ ಆಗ್ರಹಿಸಿ ಕೊಡಗು ಜಿಲ್ಲಾ ಬಿಜೆಪಿಯಿಂದ ನಗರದ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಯಿತು.

ಕೊಡಗು ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ, ಮಾಜಿ ಎಂಎಲ್‌ಸಿ ಎಂ.ಪಿ. ಸುನಿಲ್ ಸುಬ್ರಮಣಿ ಅವರ ನೇತೃತ್ವದಲ್ಲಿ ಪಕ್ಷದ ಪ್ರಮುಖರು, ಕಾರ್ಯಕರ್ತರು ಜಿಲ್ಲಾಡಳಿತ ಭವನದ ಮುಂಭಾಗ ಸಮಾವೇಶಗೊಂಡು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಶ್ರೀ ಧರ್ಮಸ್ಥಳ ಕ್ಷೇತ್ರದ ವಿರುದ್ಧ ನಡೆಯುತ್ತಿರುವ ಅಪಪ್ರಚಾರಗಳನ್ನು ಖಂಡಿಸಿದರು. ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿ, ಸತ್ಯ ಮತ್ತು ಧರ್ಮಕ್ಕೆ ಹೆಸರಾದ ಶ್ರೀ ಮಂಜುನಾಥನ ಸನ್ನಿಧಿ ಶ್ರೀಕ್ಷೇತ್ರ ಧರ್ಮಸ್ಥಳದ ವಿರುದ್ಧ ಕೆಲವು ಧರ್ಮದ್ರೋಹಿಗಳು, ಎಡಪಂಥೀಯರು ಅಪಪ್ರಚಾರ ಮಾಡುವ ಮೂಲಕ ಕ್ಷೇತ್ರಕ್ಕೆ ಅಪಚಾರವೆಸಗುತ್ತಿದ್ದಾರೆ ಎಂದರು.

ಧರ್ಮಸ್ಥಳದಲ್ಲಿ ನೂರಾರು ಹೆಣಗಳನ್ನು ಹೂಳಲಾಗಿದೆ ಎನ್ನುವ ಅನಾಮಿಕ ವ್ಯಕ್ತಿಯ ದೂರನ್ನು ಆಧರಿಸಿ ಗುಂಡಿಗಳನ್ನು ತೋಡಿದರು. ಸೂಕ್ತವಾದ ಯಾವುದೇ ಸಾಕ್ಷ್ಯಾಧಾರಗಳು ದೊರಕಿಲ್ಲ. ದೂರು ನೀಡುವ ಹಂತದಲ್ಲೆ ಅನಾಮಿಕ ವ್ಯಕ್ತಿ ನೀಡಿರುವ ದೂರಿನಲ್ಲಿ ಹುರುಳಿದೆಯೇ ಎನ್ನುವುದನ್ನು ಪರಿಶೀಲಿಸದೆ ಪ್ರಕರಣವನ್ನು ಸರ್ಕಾರ ಎಸ್‌ಐಟಿ ತನಿಖೆಗೆ ಒಪ್ಪಿಸಿದೆ. ಇದೀಗ ಪ್ರಕರಣದ ಹಿಂದೆ ಷಡ್ಯಂತ್ರ ನಡೆದಿದೆ ಎನ್ನುವ ಸರ್ಕಾರ ಮೊದಲು ಷಡ್ಯಂತ್ರಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲಿ ಎಂದು ಆಗ್ರಹಿಸಿದರು. ಅನಾಮಿಕ ವ್ಯಕ್ತಿ ನೀಡಿದ ದೂರಿನ ಆಧಾರದಲ್ಲಿ ನಡೆಯುತ್ತಿರುವ ಎಸ್‌ಐಟಿ ತನಿಖೆಯಿಂದ ಆತನ ಆರೋಪಗಳಿಗೆ ಯಾವುದೇ ಪುರಾವೆಗಳು ದೊರಕಿಲ್ಲ. ಇದೀಗ ಗೃಹ ಸಚಿವರು ಪ್ರಕರಣದಲ್ಲಿ ಷಡ್ಯಂತ್ರ ನಡೆದಿದೆ ಎನ್ನುವ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದ ರವಿ



ಧರ್ಮಸ್ಥಳದ ಷಡ್ಯಂತ್ರ ಕುರಿತು ತನಿಖೆಗೆ ಆಗ್ರಹಿಸಿ ಬಿಜೆಪಿ ಮುಖಂಡರು ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿದರು.

ಕಾಳಪ್ಪ ಇಂದು ಶ್ರೀ ಧರ್ಮಸ್ಥಳಕ್ಕೆ ಸಂಬಂಧಿಸಿದಂತೆ ಅನ್ಯ ಧರ್ಮೀಯ ವ್ಯಕ್ತಿ ಆರೋಪಗಳನ್ನು ಮಾಡಿದ್ದಾನೆ. ಅದೇ ನಾವು ಅನ್ಯಧರ್ಮೀಯರ ವಿರುದ್ಧ ಆರೋಪಗಳನ್ನು ಮಾಡಿದ್ದರೆ ಸರ್ಕಾರ ಒಪ್ಪುತಿತ್ತೆ? ಎಂದು ಪ್ರಶ್ನಿಸಿದರು.

ದೇಶ ದ್ರೋಹಿಗಳು ತಲೆ ಎತ್ತಿದ್ದಾರೆ: ಮಾಜಿ ವಿಧಾನ ಸಭಾಧ್ಯಕ್ಷ ಕೆ.ಜಿ.ಬೋಪಯ್ಯ ಮಾತನಾಡಿ, ಶ್ರೀ ಧರ್ಮಸ್ಥಳ ಕ್ಷೇತ್ರ ಮಾತ್ರವಲ್ಲ ಹಿಂದೂಗಳ ವಿವಿಧ ಧಾರ್ಮಿಕ ಕೇಂದ್ರಗಳನ್ನು ಗುರಿಯಾಗಿಸಿಕೊಂಡು ಅಪಪ್ರಚಾರ ನಡೆಸುವ ಮೂಲಕ ಧಾರ್ಮಿಕ ಭಾವನೆಗಳಿಗೆ ಧಕ್ಕೆಯನ್ನು ಉಂಟುಮಾಡಿ ಹಿಂದೂಗಳನ್ನು ಒಡೆಯುವ ಪ್ರಯತ್ನ ನಡೆಯುತ್ತಿದೆ. ಇಲ್ಲಿಯವರೆಗಿನ ಕಾಂಗ್ರೆಸ್ ಆಡಳಿತಾವಧಿಯಲ್ಲಿ ಎಡಪಂಥೀಯರು, ದೇಶದ್ರೋಹಿಗಳು ತಲೆಎತ್ತುವ ಕಾರ್ಯ ನಡೆಯುತ್ತಿದೆ ಎಂದು ಆರೋಪಿಸಿದರು. ಅನ್ಯಧರ್ಮೀಯ ವ್ಯಕ್ತಿಯೊಬ್ಬ ಯೂಟ್ಯೂಬ್ ಮೂಲಕ ಶ್ರೀ ಕ್ಷೇತ್ರ ಧರ್ಮಸ್ಥಳದ ಬಗ್ಗೆ ಅಪಪ್ರಚಾರ ನಡೆಸಿದ್ದಾನೆ. ಇದೇ ರೀತಿ ಹಿಂದುಗಳು ನಡೆದುಕೊಂಡರೆ ಏನಾದೀತು ಎಂದೂ ಪ್ರಶ್ನಿಸಿದ ಬೋಪಯ್ಯ, ಪ್ರಸ್ತುತ ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿಗಳೊಂದಿಗೆ ಎಫ್‌ಐಆರ್ ಗ್ಯಾರಂಟಿಯೂ ನಮಗೆ ದೊರಕುತ್ತದೆ ಎಂದು ಆಕ್ರೋಷ ವ್ಯಕ್ತಪಡಿಸಿದರು.

ದ್ವಿತೀಯ ದರ್ಜೆಯ ಪ್ರಜೆಗಳು: ಪ್ರಸ್ತುತ ಕಾಂಗ್ರೆಸ್ ಸರ್ಕಾರ ಹಿಂದೂಗಳನ್ನು ದ್ವಿತೀಯ ದರ್ಜೆಯ ಪ್ರಜೆಗಳನ್ನಾಗಿ ನಡೆಸಿಕೊಳ್ಳುತ್ತಿದೆ. ಮುಂಬರುವ ಹಿಂದೂಗಳ ಸಂಭ್ರಮದ ಶ್ರೀ ಗಣೇಶೋತ್ಸವಕ್ಕೆ ಈಗಾಗಲೇ ಹತ್ತು ಹಲವು ನಿಬಂಧನೆಗಳನ್ನು ಹಾಕುವ ಮೂಲಕ ಹಿಂದೂ ಧಾರ್ಮಿಕ ಆಚರಣೆಗಳಿಗೆ ಅಡ್ಡಿ ಉಂಟು ಮಾಡುವ ಪ್ರಯತ್ನಗಳು ನಡೆದಿದೆ. ಉತ್ಸವದ ಆಚರಣೆ ಬೆಳಗ್ಗೆ 6ರಿಂದ ರಾತ್ರಿ 10ರವರೆಗೆ ಮಾತ್ರ ಎನ್ನಲಾಗುತ್ತಿದೆ ಇದು ಯಾವ ನಿಯಮ ಎಂದು ಪ್ರಶ್ನಿಸಿದರಲ್ಲದೇ ವಿಶೇಷ ಸಂದರ್ಭಗಳಲ್ಲಿ ರಾತ್ರಿ 12 ಗಂಟೆಯವರೆಗೂ ಅವಕಾಶವನ್ನು ಕೊಡಲು ಸಾಧ್ಯವಿದೆ ಎಂದು ತಿಳಿಸಿದರು.

ಮಾಜಿ ಎಂಎಲ್‌ಸಿ ಸುನಿಲ್ ಸುಬ್ರಮಣಿ ಮಾತನಾಡಿ, ಶ್ರೀ ಧರ್ಮಸ್ಥಳ ಕ್ಷೇತ್ರದ ಬಗ್ಗೆ ಕೆಲವರು ಮನಸ್ಸಿಗೆ ಬಂದಂತೆ ಆರೋಪಗಳನ್ನು ಮಾಡುತ್ತಿದ್ದಾರೆ. ಅನಾಮಿಕ ವ್ಯಕ್ತಿ ಆರೋಪಗಳನ್ನು ಮಾಡುವ ಹಂತದಲ್ಲೆ ಆತನನ್ನು ಮೊದಲು ಬಂಧಿಸಿ ತನಿಖೆ ನಡೆಸಬೇಕಿತ್ತು. ಇದಕ್ಕೆ ಬದಲಾಗಿ ತನಿಖೆಯನ್ನು ಎಸ್‌ಐಟಿಗೆ ವಹಿಸಲಾಗಿದೆ. ಪೊಲೀಸರಿಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸರ್ಕಾರ ಬಿಡುತ್ತಿಲ್ಲ ಎಂದು ಆರೋಪಿಸಿದರು.

ಪ್ರತಿಭಟನೆಯ ಬಳಿಕ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಳಪ್ಪ ಅವರು ಪಕ್ಷದ ಪ್ರಮುಖರೊಂದಿಗೆ ಅಪರ ಜಿಲ್ಲಾಧಿಕಾರಿ ಐಶ್ವರ್ಯ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ರಾಬಿನ್ ಉತ್ತಪ್ಪ, ಬಿ.ಬಿ.ಭಾರತೀಶ್, ನಗರ ಬಿಜೆಪಿ ಅಧ್ಯಕ್ಷ ಉಮೇಶ್ ಸುಬ್ರಮಣಿ, ಪ್ರಧಾನ ಕಾರ್ಯದರ್ಶಿ ಬಿ.ಕೆ.ಜಗದೀಶ್, ನಗರಸಭಾ ಅಧ್ಯಕ್ಷೆ ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ಪ್ರಮುಖರಾದ ಸಜಿಲ್ ಕೃಷ್ಣನ್, ನಾಗೇಶ್ ಕುಂದಲ್ಪಾಡಿ, ಕನ್ನಂಡ ಸಂಪತ್, ಪಿ.ಎಂ.ರವಿ, ಎಸ್.ಸಿ.ಸತೀಶ್, ಅರುಣ್ ಶೆಟ್ಟಿ, ಸವಿತಾ ರಾಕೇಶ್, ಕುಕ್ಕೆ ಉಮಾ ಪ್ರಭು, ಬೊಳ್ಳಜಿರ ಅಯ್ಯಪ್ಪ, ಅಪ್ಪಣ್ಣ, ಮನು ಮಂಜುನಾಥ್, ನೆಲ್ಲೀರ ಚಲನ್, ಡೀನ್ ಬೋಪಣ್ಣ, ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ಕಾಂಗೀರ ಸತೀಶ್ ಇದ್ದರು.

ಇಂದು ಮೈಸೂರಲ್ಲಿ ಕೊಡವಾಮೆರ ಆರ ಬೇರ ಕಾರ್ಯಕ್ರಮ

ಮಡಿಕೇರಿ: ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಹಾಗೂ ಕೊಡವ ಸಮಾಜ ಮೈಸೂರು ಸಹಯೋಗದಲ್ಲಿ ಆ.23ರಂದು ಬೆಳಗ್ಗೆ 9.30 ಗಂಟೆಯಿಂದ ಮೈಸೂರು ಕೊಡವ ಸಮಾಜದಲ್ಲಿ 'ಕೊಡವಾಮೆರ ಆರ ಬೇರ' ಕಾರ್ಯಕ್ರಮ ನಡೆಯಲಿದೆ. ಅಧ್ಯಕ್ಷತೆಯನ್ನು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ ವಹಿಸಲಿದ್ದಾರೆ. ಮುಖ್ಯಅತಿಥಿಗಳಾಗಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಭಾಗವಹಿಸುವರು.

ಸಂದೇಶ್ ನಿಧನ

ಸುಂಟಿಕೊಪ್ಪ,ಆ.22– ಸುಂಟಿಕೊಪ್ಪ ಶ್ರೀರಾಮ ಸೇವಾ ಸಮಿತಿ ಟ್ರಸ್ಟ್ ಅಧ್ಯಕ್ಷರು ಹಾಗೂ ಕೆಳಗಿನ ಪನ್ಯ ತೋಟದ ಮಾಲೀಕರಾದ ಎಸ್.ಬಿ. ಶಂಕರ್ ಅವರ ಪುತ್ರ ಎಸ್.ಎಸ್. ಸಂದೇಶ್



(58) ಶುಕ್ರವಾರ ಮೈಸೂರಿನಲ್ಲಿ ನಿಧನರಾದರು. ಮೃತರ ಅಂತ್ಯಕ್ರಿಯೆ ಸಂಜೆ ಸ್ವಗ್ರಾಮ ಪನ್ಯದಲ್ಲಿ ನಡೆಯಿತು. ಮೃತರು ಪತ್ನಿ ಹಾಗೂ ಓರ್ವ ಪುತ್ರ ಸಹಿತ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಬೆಟಗೇರಿಯಲ್ಲಿ ಕಾಡಾನೆಗಳ ಹಾವಳಿ



ಬೆಟಗೇರಿ ಗ್ರಾಮದ ಕಾಫಿ ಬೆಳೆಗಾರ ಚೌಂಡಿರ ಕುಮಾರ್ ತೋಟಗಳಿಗೆ ಲಗ್ಗೆ ಇಟ್ಟ ಕಾಡಾನೆಗಳು ಅಪಾರ ಪ್ರಮಾಣದ ಬೆಳೆಗಳನ್ನು ನಾಶ ಪಡಿಸಿರುವುದು.

ನಾಪೋಕ್ಲು: ಸಮೀಪದ ಬೆಟಗೇರಿ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿ ಮಿತಿಮೀರಿದ್ದು ತೋಟಗಳಿಗೆ ಲಗ್ಗೆ ಇಟ್ಟು ಕಾಡಾನೆಗಳ ಹಿಂಡು ಅಪಾರ ಪ್ರಮಾಣದ ಬೆಳೆಗಳನ್ನು ನಾಶಪಡಿಸಿದೆ. ಬೆಟಗೇರಿ ಗ್ರಾಮದ ಕಾಫಿ ಬೆಳೆಗಾರ ಚೌಂಡಿರ ಕುಮಾರ್, ಪಟ್ಟಡ ಗಣಿ ಸೇರಿದಂತೆ ಗ್ರಾಮದ ಹಲವು ಬೆಳೆಗಾರರ ತೋಟಗಳಿಗೆ ದಾಳಿ ನಡೆಸಿರುವ ಕಾಡಾನೆಗಳು ಬಾಳೆ, ಕಾಫಿ, ಅಡಿಕೆ, ತೆಂಗಿನ ಗಿಡಗಳನ್ನು ನಾಶಪಡಿಸಿ ಅಪಾರ ನಷ್ಟ ಉಂಟು ಮಾಡಿದೆ ಸುಮಾರು 1.5 ಲಕ್ಷ ರೂ. ಬಾಳೆ ಹಾಗೂ ಕಾಫಿ ಫಸಲು ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಬೆಟಗೇರಿ ಗ್ರಾಮ ವ್ಯಾಪ್ತಿಯಲ್ಲಿ ನಿರಂತರ ಕಾಡಾನೆ ಹಾವಳಿಯಿಂದ ಜನರು ಭಯಭೀತರಾಗಿದ್ದಾರೆ.

ಕಾರ್ಮಿಕರು ತೋಟಗಳಿಗೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ವಿದ್ಯಾರ್ಥಿಗಳು ಶಾಲೆಗೆ ಬರಲು ಭಯದ ವಾತಾವರಣ ಸೃಷ್ಟಿಯಾಗಿದ್ದು ಕೂಡಲೇ ಕಾಡಾನೆಗಳ ಸಂಬಂಧ ತೋಟಗಳಿಗೆ ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಗ್ರಾಮದ ಬೆಳೆಗಾರರು ಒತ್ತಾಯಿಸಿದರು.

ಇಂದು ಭಾಗಮಂಡಲದಲ್ಲಿ 33ನೇ ವರ್ಷದ ರಾಜ್ಯ ಮಟ್ಟದ ಕೆಸರುಗದ್ದೆ ಕ್ರೀಡಾಕೂಟ

ಮಡಿಕೇರಿ,ಆ.22– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೊಡಗು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಡಗು ಜಿಲ್ಲಾ ಯುವ ಒಕ್ಕೂಟ ಕೊಡಗು ಮಡಿಕೇರಿ, ವಿರಾಜಪೇಟೆ ಹಾಗೂ ಸೋಮವಾರಪೇಟೆ ತಾಲ್ಲೂಕು ಯುವ ಒಕ್ಕೂಟ ಹಾಗೂ ಶ್ರೀ ಕೃಷ್ಣ ಯೂತ್ ಕ್ಲಬ್ ಅಯ್ಯಂಗೇರಿ, ಸಂಯುಕ್ತ ಆಶ್ರಯದಲ್ಲಿ 33 ನೇ ವರ್ಷದ ರಾಜ್ಯ ಮಟ್ಟದ ಕೆಸರುಗದ್ದೆ ಕ್ರೀಡಾಕೂಟ ಕಾರ್ಯಕ್ರಮವು ಆ.23 ರಂದು ಬೆಳಗ್ಗೆ 9 ಗಂಟೆಗೆ ಭಾಗಮಂಡಲದ ಬಳ್ಳಡ್ಕ ಅಪ್ಪಾಜಿ ಮತ್ತು ಅನು ಅವರ ಗದ್ದೆಯಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು, ಶಾಸಕ ಡಾ.ಮಂತರ್‌ಗೌಡ, ವಿಧಾನ ಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ ಎಸ್.ಎಲ್.ಭೋಜೇಗೌಡ, ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ, ಭಾಗಮಂಡಲ ಗ್ರಾ.ಪಂ ಅಧ್ಯಕ್ಷ ಕಾಳನ ರವಿ, ಅಯ್ಯಂಗೇರಿ ಗ್ರಾ.ಪಂ ಅಧ್ಯಕ್ಷರಾದ ಎಚ್.ಜಿ.ಪುಷ್ಪಾ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಮಂದ್ರೀರ ಮೋಹನ್ ದಾಸ್, ಡಿಸಿ ವೆಂಕಟ್ ರಾಜಾ, ಜಿ.ಪಂ ಸಿಇಒ ಆನಂದ ಪ್ರಕಾಶ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಇತರರು ಪಾಲ್ಗೊಳ್ಳಲಿದ್ದಾರೆ. ಸಂಜೆ 6.30 ಗಂಟೆಗೆ ಸಮಾರೋಪ.

ನ್ಯಾ.ನಾಗಮೋಹನ್‌ದಾಸ್‌ರ ಒಳ ಮೀಸಲಾತಿ ವರದಿ ಪರಿಶೀಲನೆಗೆ ಆಗ್ರಹಿಸಿ ಮಡಿಕೇರಿಯಲ್ಲಿ ಪ್ರತಿಭಟನೆ

ಮಡಿಕೇರಿ,ಆ.22– ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರ ಒಳ ಮೀಸಲಾತಿ ವರದಿಯನ್ನು ಜಾರಿ ಮಾಡುವ ಮೊದಲು ರಾಜ್ಯ ಸರ್ಕಾರ ಇದನ್ನು ಪುನರ್ ಪರಿಶೀಲನೆಗೆ ಒಳಪಡಿಸಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ಪರಿಶಿಷ್ಟ(ಬಲಗೈ) ಸಂಬಂಧಿತ ಜಾತಿಗಳ ಒಕ್ಕೂಟದ ಕೊಡಗು ಘಟಕದಿಂದ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಯಿತು.

ಒಕ್ಕೂಟದ ರಾಜ್ಯ ಸಂಘಟನಾ ಸಂಯೋಜಕ ರಾಜಶೇಖರ್, ಜಿಲ್ಲಾ ಸಂಚಾಲಕ ರಾಜಪ್ಪ, ಜಿಲ್ಲಾ ಸಂಘಟನಾ ಸಂಚಾಲಕ ದೇವರಾಜ ಅವರ ನೇತೃತ್ವದಲ್ಲಿ ಸಂಘಟನೆಯ ಪ್ರಮುಖರು ಮತ್ತು ಕಾರ್ಯಕರ್ತರು ಶುಕ್ರವಾರ ನಗರದ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಒಕ್ಕೂಟದ ಜಿಲ್ಲಾ ಸಂಚಾಲಕ ರಾಜಪ್ಪ ಮಾತನಾಡಿ, ರಾಜ್ಯ ಸರ್ಕಾರ ನ್ಯಾಯಮೂರ್ತಿ ನಾಗ ಮೋಹನ ದಾಸ್ ಒಳ ಮೀಸಲಾತಿ ಜಾರಿಗೆ ಮುಂದಾಗುತ್ತಿದೆ ಎಂದು ತಿಳಿಸಿದರು.

ಪರಿಶಿಷ್ಟ ಎಡಗೈ ಜಾತಿ ಬಾಂಧವರು ನಮ್ಮ ಅಣ್ಣ ತಮ್ಮಂದಿರೇ ಆಗಿದ್ದಾರೆ. ಅವರಿಗೆ ಮೀಸಲಾತಿ ಸೌಲಭ್ಯ ನೀಡಬಾರದು ಎನ್ನುವ ಬೇಡಿಕೆ ನಮ್ಮದಲ್ಲ. ಆದರೆ ಸಮಾನ ಮೀಸಲಾತಿಯನ್ನು ಒದಗಿಸಬೇಕು ಎನ್ನುವುದು ನಮ್ಮ ಪ್ರಮುಖ ಆಗ್ರಹವಾಗಿದೆ ಎಂದು ಸ್ಪಷ್ಟಪಡಿಸಿ ದರು. ದಶಕಗಳ ಹಿಂದಿನ 1985ರ ಅಂಕಿ ಅಂಶ ಗಳಂತೆ ರಾಜ್ಯದಲ್ಲಿ ಶೇ.70ರಷ್ಟು ಪರಿಶಿಷ್ಟ ಬಲಗೈ ಸಮಾಜ ಬಾಂಧವರಿದ್ದರು. ಈಗಿನ ಜಾತಿಗಳ ದತ್ತಾಂಶದಂತೆ ಪರಿಶಿಷ್ಟ ಬಲಗೈ ಸಮೂಹದ ಜನಸಂಖ್ಯೆ 37,38,717 ಇದೆ ಎಂದು ರಾಜಪ್ಪ ಅವರು ಪ್ರತಿಪಾದಿಸಿದರು.



ನ್ಯಾ.ನಾಗಮೋಹನ್‌ದಾಸ್ ಅವರ ಒಳ ಮೀಸಲಾತಿ ವರದಿ ಪರಿಶೀಲಿಸಿ ಜಾರಿಗೆ ತರುವಂತೆ ಆಗ್ರಹಿಸಿ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಲಾಯಿತು.

ನ್ಯಾಯಮೂರ್ತಿ ನಾಗಮೋಹನದಾಸ್ ಅವರ ವರದಿಯ ಪುನರ್ ಪರಿಶೀಲನೆಗೆ ಉಪ ಸಮಿತಿಯನ್ನು ರಚಿಸಿ ದತ್ತಾಂಶಗಳನ್ನು ಸಂಗ್ರಹಿಸಿ ಒಳ ಮೀಸಲಾತಿಯನ್ನು ಜಾರಿಗೊಳಿಸುವ ಮೂಲಕ, ಪರಿಶಿಷ್ಟ ಬಲಗೈ ಸಮೂಹಕ್ಕೆ ನ್ಯಾಯ ದೊರಕಿಸಿಕೊಡಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಅವರು ಸ್ಪಷ್ಟಪಡಿಸಿದರು. ಪ್ರತಿಭಟನೆಯ ಬಳಿಕ ಜಿಲ್ಲಾಡಳಿತದ ಮೂಲಕ ಮುಖ್ಯ ಮಂತ್ರಿಗಳಿಗೆ ಒಕ್ಕೂಟದ ಪ್ರಮುಖರು ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಪೊನ್ನಪ್ಪ, ಗೋವಿಂದರಾಜ, ಚನ್ನಕೇಶವ, ರಾಜು, ಡೀಲಕ್ಷ, ದಯಾಕರ, ವೀರಭದ್ರ, ಎಸ್.ಜೆ.ರಾಜಪ್ಪ, ಹೆಬ್ಬುಲುಸೆ ಚಂದ್ರು, ಒಕ್ಕೂಟದ ಸೋಮವಾರಪೇಟೆ ತಾಲೂಕು ಅಧ್ಯಕ್ಷೆ ರೇಖಾ, ಜಿಲ್ಲಾ ಸಂಚಾಲಕಿ ಮಂಜುಳಾ ಪಾಲ್ಗೊಂಡಿದ್ದರು.

ಆ.29, ರಸ್ತೆ ಓಟ, ಹಗ್ಗ–ಜಗ್ಗಾಟ ಸ್ಪರ್ಧೆ

ಚಾ.ನಗರದಲ್ಲಿ ರಸ್ತೆ ಓಟ, ಹಗ್ಗ-ಜಗ್ಗಾಟದ ಪೋಸ್ಟರ್ ಬಿಡುಗಡೆ ಮಾಡಿದ ಜಿಲ್ಲಾಧಿಕಾರಿ ಶಿಲ್ಪಾ ನಾಗ್

ಚಾಮರಾಜನಗರ, ಆ.22– ಹಾಕಿ ಮಾಂತ್ರಿಕ ಮೇಜರ್ ಧ್ಯಾನ್ ಚಂದ್ ರವರ ಜನ್ಮದಿನದ ಅಂಗವಾಗಿ ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಈ ಪ್ರಯುಕ್ತ ನಗರದಲ್ಲಿ ಆಗಸ್ಟ್ 29 ರಂದು ಬೆಳಿಗ್ಗೆ 7 ಗಂಟೆಗೆ 5 ಕಿ.ಮೀ ರಸ್ತೆ ಓಟ (ಮ್ಯಾರಥಾನ್) ಮತ್ತು ಹಗ್ಗ–ಜಗ್ಗಾಟ ಸ್ಪರ್ಧೆಯನ್ನು ಪುರುಷ ಮತ್ತು ಮಹಿಳೆಯರಿಗಾಗಿ ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಜನರು ಭಾಗವಹಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಮನವಿ ಮಾಡಿದರು.



ಓಟ (ಮ್ಯಾರಥಾನ್) ಮತ್ತು ಹಗ್ಗ–ಜಗ್ಗಾಟ ಸ್ಪರ್ಧೆಯ ಪೋಸ್ಟರ್ ಬಿಡುಗಡೆ ಮಾಡಿದ ಜಿಲ್ಲಾಧಿಕಾರಿ ಶಿಲ್ಪಾ ನಾಗ್.

ತಮ್ಮ ಕಚೇರಿ ಸಭಾಂಗಣದಲ್ಲಿಂದು 5 ಕಿ.ಮೀ ರಸ್ತೆ ಓಟ ಹಾಗೂ ಹಗ್ಗ–ಜಗ್ಗಾಟ ಪೋಸ್ಟರ್ ಬಿಡುಗಡೆ ಮಾಡಿ ಅವರು ಮಾತನಾಡಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ನಡೆಯುವ 5 ಕಿ.ಮೀ ಮ್ಯಾರಥಾನ್ ಚಾಮರಾಜೇಶ್ವರ ದೇವಸ್ಥಾನದಿಂದ ಪ್ರಾರಂಭಗೊಂಡು ಪಚ್ಚಪ್ಪ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ, ಡಿಸಿ ಕಚೇರಿ ಎಸ್.ಪಿ. ಕಚೇರಿ ಮುಂಭಾಗ, ರಾಮಸಮುದ್ರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ವಾಪಸ್ಸು ತಿರುಗಿ ಜೋಡಿ ರಸ್ತೆ ಮೂಲಕ ಅಂತಿಮವಾಗಿ ಚಾಮರಾಜೇಶ್ವರ ದೇವಸ್ಥಾನದಲ್ಲಿ ಮುಕ್ತಾಯಗೊಳ್ಳಲಿದೆ ಎಂದರು.

ಸಾರ್ವಜನಿಕರು, ಕ್ರೀಡಾಪಟುಗಳು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಕೈಗಾರಿಕೋದ್ಯಮಿಗಳು, ಸಂಘ–ಸಂಸ್ಥೆಯ ಪದಾಧಿಕಾರಿಗಳು ಸೇರಿದಂತೆ ರಸ್ತೆ ಓಟ ಹಾಗೂ ಹಗ್ಗ–ಜಗ್ಗಾಟ ಸ್ಪರ್ಧೆಯಲ್ಲಿ ಎಲ್ಲರೂ ಪಾಲ್ಗೊಳ್ಳಬಹುದಾಗಿದ್ದು, ವಿಜೇತರಾದವರಿಗೆ ಪ್ರಥಮ ಬಹುಮಾನವಾಗಿ 3 ಸಾವಿರ, ದ್ವಿತೀಯ 2500, ತೃತೀಯ 2 ಸಾವಿರ, ನಾಲ್ಕನೇ ಸ್ಥಾನಕ್ಕೆ 1500, ಐದನೇ ಸ್ಥಾನಕ್ಕೆ 1 ಸಾವಿರ ಹಾಗೂ ಆರನೇ ಸ್ಥಾನಕ್ಕೆ 500 ರೂ.ಗಳ ನಗದು ಬಹುಮಾನ ನೀಡಲಾಗುವುದು ಎಂದು ಅವರು ವಿವರಿಸಿದರು.

ವಿಶೇಷವಾಗಿ ಈ ಬಾರಿ ಹಗ್ಗ–ಜಗ್ಗಾಟ ಸ್ಪರ್ಧೆಯನ್ನು ನಡೆಸಲಾಗುತ್ತಿದ್ದು ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ಬಹುಮಾನ 3 ಸಾವಿರ, ದ್ವಿತೀಯ ಬಹುಮಾನವಾಗಿ 2 ಸಾವಿರ ರೂ.ಗಳ ನಗದು ನೀಡಲಾಗುವುದು. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ರಸ್ತೆ ಓಟ ಹಾಗೂ ಹಗ್ಗ–ಜಗ್ಗಾಟ ಸ್ಪರ್ಧೆಯಲ್ಲಿ ಭಾಗವಹಿಸುವವರು ಆ.27ರೊಳಗೆ https://forms.gle/RJKhEGLEWDzEnoT7 ಲಿಂಕ್‌ನಲ್ಲಿ ನೊಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 9945615695, 9916466659, 9844242672, 8660422976, 7204167458, 8660151257 ಗಳನ್ನು ಸಂಪರ್ಕಿಸಬಹುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ. ಸುರೇಶ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಎಸ್. ಚಿದಂಬರ, ಶಾಲಾ ಮತ್ತು ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ರಾಮಚಂದ್ರರಾಜೇ ಅರಸ್, ಜಿಲ್ಲಾ ಕ್ರೀಡಾಂಗಣ ಅಭಿವೃದ್ಧಿ ಸಮಿತಿ ಸದಸ್ಯರಾದ ಶ್ರೀನಿವಾಸ ಪ್ರಸಾದ್, ಮುಖಂಡರಾದ ಚಾ.ರಂ. ಶ್ರೀನಿವಾಸಗೌಡ, ಕ್ರೀಡಾ ತರಬೇತುದಾರರಾದ ಗಣೇಶ್, ಇತರರು ಇದೇ ವೇಳೆ ಇದ್ದರು.


ಒಳಮೀಸಲಾತಿ ಜಾರಿ: ಸಂಭ್ರಮಾಚರಣೆ

ಒಳ ಮೀಸಲಾತಿ ಹೋರಾಟಗಾರರಾದ ಎಂ.ಶಿವಮೂರ್ತಿ, ಬಸವನಪುರ ರಾಜಶೇಖರ್‌ಗೆ ಸನ್ಮಾನ

ಚಾಮರಾಜನಗರ, ಆ.22– ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿಗೊಳಿಸಿದ ಹಿನ್ನಲೆಯಲ್ಲಿ ನಗರದ 15ನೇ ಬಾಬು ಜಗಜೀವನ ರಾಂ ಬಡಾವಣೆಯಲ್ಲಿ ಡಾ.ಬಾಬು ಜಗಜೀವನ ರಾಂ ಯುವಕರ ಕಲಾ ಸಂಘದ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬುಜಿಗಜೀವನರಾಂ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಾಚರಣೆ ಮಾಡಲಾಯಿತು.

ಪುಷ್ಪಾರ್ಚನೆ ಮಾಡಿದ ಡಾ.ಬಾಬುಜಗಜೀವನರಾಂ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ.ಶಿವಮೂರ್ತಿ ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ಮಾದಿಗ ಸಮುದಾಯ ಸುಮಾರು 30 ವರ್ಷಗಳಿಂದ ಒಳಮೀಸಲಾತಿ ಜಾರಿಗಾಗಿ ಹೋರಾಟ ನಡೆಸಿಕೊಂಡು ಬಂದಿದ್ದು, ಇದರ ಫಲವಾಗಿ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ಚಂದ್ರಚೂಡರ ಏಳು ಸದಸ್ಯರ ಪೀಠವು 2024 ಆ.14 ರಂದು ಒಳ ಮೀಸಲಾತಿ ಜಾರಿ ಮಾಡಿ ಆಯಾಯ ರಾಜ್ಯ ಆದೇಶ ಮಾಡಿತ್ತು. ಹಿಂದಿನ ಆಯೋಗದ ವರದಿಯಲ್ಲಿ ನಿಖರ ದತ್ತಾಂಶಗಳು ಇಲ್ಲದ ಕಾರಣ ಹಿಂದಿನ ಸರ್ಕಾರಗಳು ಇದನ್ನು ಅವೈಜ್ಞಾನಿಕ ಎಂದು ಹೇಳಿ ತಿರಸ್ಕಾರ ಮಾಡಿದ್ದವು. ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ನಿವೃತ್ತ ನ್ಯಾಯಮೂರ್ತಿಗಳಾದ ನಾಗಮೋಹನ್ ದಾಸ್ ಆಯೋಗ ನೇಮಿಸಿತು.

ಈ ಆಯೋಗ ಸುಮಾರು 6. ತಿಂಗಳ ಕಾಲ ಸುದೀರ್ಘ ಸಮೀಕ್ಷೆ ಮಾಡಿ ವೈಜ್ಞಾನಿಕವಾದ ದತ್ತಾಂಶವನ್ನು ಸಂಗ್ರಹಿಸಿ ಆ.4 ರಂದು ಸರ್ಕಾರಕ್ಕೆ ವರದಿ ಸಲ್ಲಿಸಿತು. ಸರ್ಕಾರವು ಸಚಿವ ಸಂಪುಟದಲ್ಲಿ ಪರಿಷ್ಕರಿಸಿ 5 ವಿಭಾಗಗಳಾಗಿದ್ದ



ಒಳ ಮೀಸಲಾತಿ ಜಾರಿ ಸ್ವಾಗತಿಸಿ ಸಂಭ್ರಮಾಚರಣೆ ಮಾಡಲಾಯಿತು.

ವರದಿಯನ್ನು 3 ವರ್ಗಗಳಾಗಿ ವಿಂಗಡಿಸಿ ಎಡಗೈ ಸಮುದಾಯ ಹಾಗೂ ಬಲಗೈ ಸಮುದಾಯಕ್ಕೆ ತಲಾ ಶೇ.6 ರಷ್ಟು ಮೀಸಲಾತಿ ಹಾಗೂ ಇತರೆ ಜಾತಿಗಳಿಗೆ ಶೇ.5ರಷ್ಟು ಮೀಸಲಾತಿ ನೀಡಿರುವುದು ಸ್ವಾಗತಾರ್ಹ. ಸಮುದಾಯದ ಪರವಾಗಿ ಈ ಮೂಲಕ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಸಮುದಾಯದವರು ಒಳ ಮೀಸಲಾತಿಯ ಸವಲತ್ತುಗಳನ್ನು ಪಡೆದು ಆರ್ಥಿಕವಾಗಿ ಸಬಲರಾಗಬೇಕು ಎಂದರು. ಜಿಲ್ಲಾ ಮಾದಿಗ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಬಸವನಪುರ ರಾಜಶೇಖರ್ ಮಾತನಾಡಿ, ಮಾದಿಗ ಸಮುದಾಯ ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸೇರಿದಂತೆ ಎಲ್ಲಾರಂಗದಲ್ಲೂ ವಂಚಿತರಾಗಿದ್ದೇವೆ. ಹಿಂದಿನ ಸರ್ಕಾರದಲ್ಲಿ ಒಳಮೀಸಲಾತಿ ಜಾರಿಯಾಗಬೇಕಿತ್ತು. ನಿಖರ ದತ್ತಾಂಶ ಇಲ್ಲ ಎಂದು ಅನ್ಯಾಯ ಮಾಡಿತು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ವಿಶೇಷ ಕಾಳಜಿ ವಹಿಸಿ ಎರಡು ಸಮುದಾಯಗಳಿಗೆ ತಲಾ ಶೇ.6 ರಷ್ಟು ಒಳಮೀಸಲಾತಿ ನೀಡಿ ಸಾಮಾಜಿಕ ನ್ಯಾಯ ಕಲ್ಪಿಸಿಕೊಟ್ಟಿದ್ದಾರೆ ಇದು ಸಮುದಾಯಕ್ಕೆ ದೊರೆತ ಜಯವಾಗಿದೆ. ಸಮುದಾಯದವರು ಒಳಮೀಸಲಾತಿ ಸವಲತ್ತುಗಳನ್ನು ಪಡೆದುಕೊಂಡುಎಲ್ಲ ಕ್ಷೇತ್ರಗಳಲ್ಲಿ ಮುಂದೆ ಸಾಗಬೇಕು ಎಂದರು.

ಸಂಘದ ಅಧ್ಯಕ್ಷ ಡ್ಯಾನ್ಸ್ ಬಸವರಾಜು, ಉಪಾಧ್ಯಕ್ಷ ರಾಜೇಶ್, ನಿವೃತ್ತ ಅಧಿಕಾರಿ ರೇವಣ್ಣ, ಮಾದಿಗ ಮಹಾಸಭಾ ಜಿಲ್ಲಾಧ್ಯಕ್ಷ ಎಂ.ಶಿವಕುಮಾರ್, ಸುಂದರ್, ಗಿರೀಶ್, ಸ್ವಾಮಿ, ಲಿಂಗರಾಜು, ತಂಬೂರಿಮಹೇಶ್, ಆಕಾಶ್, ಆಟೋ ಮಂಜು, ದೀಪು, ಪ್ರಭುಸ್ವಾಮಿ, ಲಿಂಗಣ್ಣ, ಮರಪ್ಪ ಇತರರು.

ವಿದ್ಯುತ್ ಸ್ಪರ್ಶಿಸಿ ವ್ಯಕ್ತಿ ಸಾವು

ಯಳಂದೂರು: ವಿದ್ಯುತ್ ತಂತಿ ಸ್ಪರ್ಶಿಸಿ ವ್ಯಕ್ತಿಯೋರ್ವ ಮೃತಪಟ್ಟಿರುವ ಘಟನೆ ಪಟ್ಟಣದಲ್ಲಿ ಸಂಭವಿಸಿದೆ.



ತಾಲೂಕಿನ ಯರಿಯೂರು ಗ್ರಾಮದ ನಿವಾಸಿ ಕೇಬಲ್ ಆಪರೇಟರ್ ಮಂಜುನಾಥ್ ಮೃತ ದುರ್ದೈವಿ. ಈತ ಪಟ್ಟಣದಲ್ಲಿ ಹಲವು ವರ್ಷಗಳಿಂದ ಮನೆಗಳಿಗೆ ಕೇಬಲ್ ನೆಟ್‌ವರ್ಕ್ ಹಾಕುವ ಕೆಲಸ ಮಾಡುತ್ತಿದ್ದ. ಎಂದಿನಂತೆ ಪಟ್ಟಣದ ಕೆ.ಕೆ.ರಸ್ತೆ ಬದಿಯಿಂದ ಮತ್ತೊಂದು ಮನೆಗೆ ಕೇಬಲ್ ವೈರ್ ಅನ್ನು ಎಳೆಯುತ್ತಿರುವ ವೇಳೆ ಕೇಬಲ್ ವೈರ್ ವಿದ್ಯುತ್ ತಂತಿಗೆ ಸಿಲುಕಿದ್ದು ವೈರ್ ಮೆಲ್ಟ್ ಆಗಿ ವಿದ್ಯುತ್ ಪ್ರವಹಿಸಿದೆ ಎನ್ನಲಾಗಿದೆ. ಈ ವೈರ್ ಅನ್ನು ಹಿಡಿದುಕೊಂಡಿದ್ದ ಮಂಜುನಾಥ್‌ಗೆ ವಿದ್ಯುತ್ ಸ್ಪರ್ಶಿಸಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ.

ವಿಷಯ ತಿಳಿದು ಸ್ಥಳಕ್ಕೆ ಸೆಸ್ಕ್ ಇಲಾಖೆಯ ಅಧಿಕಾರಿಗಳು, ಯಳಂದೂರು ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಚಾಮರಾಜನಗರದ ಸಿಮ್ಸ್ ಆಸ್ಪತ್ರೆ ಶವಾಗಾರಕ್ಕೆ ರವಾನಿಸಲಾಗಿದೆ. ಈ ಸಂಬಂಧ ಯಳಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕ್ಷತ್ರ ಆಮೆ ಸಾಗಿಸುತ್ತಿದ್ದ ಆರೋಪಿ ಬಂಧನ

ಕೊಳ್ಳೇಗಾಲ, ಆ.22– ತಾಲೂಕಿನ ಮಧುವನ ಹಳ್ಳಿ ಸಮೀಪದ ಬೈಪಾಸ್ ರಸ್ತೆಯಲ್ಲಿ ನಕ್ಷತ್ರ ಆಮೆ ಸಾಗಿಸುತ್ತಿದ್ದ ಮಹದೇಶ್ವರಬೆಟ್ಟ ಮೂಲದ ವ್ಯಕ್ತಿಯನ್ನು ಕೊಳ್ಳೇಗಾಲ ಸಂಚಾರಿ ದಳದ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಮಲೆ ಮಹದೇಶ್ವರ ಬೆಟ್ಟದ ಪುದೂರು ಗ್ರಾಮದ ಸೆಕ್ಯೂರಿಟಿ ಗಾರ್ಡ್ ನಾಗರಾಜು (35) ಬಂಧಿತ ಆರೋಪಿ. ಈತನಿಂದ ಜೀವಂತ ನಕ್ಷತ್ರ ಆಮೆ ವಶಪಡಿಸಿಕೊಳ್ಳಲಾಗಿದೆ. ಮಲೆ ಮಹದೇಶ್ವರ ಬೆಟ್ಟದಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ನಾಗರಾಜು ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಾಗಿದೆ.

ಕೊಳ್ಳೇಗಾಲ ತಾಲೂಕಿನ ಮದುವನ ಹಳ್ಳಿ ಗ್ರಾಮದ ಕಡೆಗೆ ನಕ್ಷತ್ರ ಆಮೆಯನ್ನು ಮಾರಾಟ ಮಾಡುವ ಸಲುವಾಗಿ ಸಾಗಿಸುತ್ತಿರುವ ಮಾಹಿತಿ ಮೇರೆಗೆ ಸಂಚಾರಿ ದಳದ ಪಿಎಸ್ಐ ವಿಜಯ್ ರಾಜು, ಮುಖ್ಯಪೇದೆ ರಾಮಚಂದ್ರ, ಸ್ವಾಮಿ ಇನ್ನಿತರರು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದು, ನ್ಯಾಯಾಲಯಕ್ಕೆ ಹಾಜರುಪಡಿಸಿದರು.



ಆರೋಪಿಯಿಂದ ವಶಕ್ಕೆ ಪಡೆದ ನಕ್ಷತ್ರ ಆಮೆ

ನಿಯಮ ಪಾಲಿಸಿ ಗಣೇಶನನ್ನು ಪ್ರತಿಷ್ಠಾಪಿಸಿ; ಮುಖ್ಯಾಧಿಕಾರಿ ಸೂಚನೆ

ಯಳಂದೂರು, ಆ.22– ಸರ್ಕಾರ ನಿಗಧಿಗೊಳಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಿ ಗಣೇಶನನ್ನು ಪ್ರತಿಷ್ಠಾಪಿಸಬೇಕು ಎಂದು ಮುಖ್ಯಾಧಿಕಾರಿ ಎಂ.ಪಿ. ಮಹೇಶ್ ಕುಮಾರ್ ಎಚ್ಚರಿಕೆ ನೀಡಿದರು.

ಪಟ್ಟಣದಲ್ಲಿ ಗಣೇಶ ಮೂರ್ತಿಗಳನ್ನು ಮಾರಾಟ ಮಾಡುತ್ತಿರುವ ಅಂಗಡಿಗಳಿಗೆ ತೆರಳಿ ಇಲ್ಲಿರುವ ಮೂರ್ತಿಗಳನ್ನು ಪರಿಶೀಲಿಸಿ ಮಾತನಾಡಿದ ಅವರು ಅಂಗಡಿಯವರು ಯಾವುದೇ ಕಾರಣಕ್ಕೂ ಪಿಒಪಿ ಗಣೇಶ ಹಾಗೂ ಕೃತಕ ಬಣ್ಣವನ್ನು ಬಳಿದ ಗಣೇಶ, ಗೌರಿ ವಿಗ್ರಹಗಳನ್ನು ಮಾರಾಟ ಮಾಡಬಾರದು. ನೈಸರ್ಗಿಕ ಬಣ್ಣ ಬಳಸಿದ ಮಣ್ಣಿನ ಗಣಪ ವಿಗ್ರಹವನ್ನೇ ಮಾರಾಟ ಮಾಡಬೇಕು. ಇಲ್ಲವಾದಲ್ಲಿ ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಗಣೇಶ ವಿಗ್ರಹ ಪ್ರತಿಷ್ಠಾಪನೆಗೂ ಮುಂಚೆ ಕಂದಾಯ ಇಲಾಖೆಯ ಕಚೇರಿಯಲ್ಲಿ ಏಕ ಗವಾಕ್ಷಿ ತಂಡವನ್ನು ರಚನೆ ಮಾಡಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಷ್ಠಾಪಿಸುವವರು ಅರ್ಜಿ ಸಲ್ಲಿಸಬೇಕು. ನಂತರ ಇವರಿಂದ ಎನ್‌ಒಸಿ ಪಡೆದುಕೊಂಡು ತಹಸೀಲ್ದಾರ್‌ರಿಂದ ಅನುಮತಿ ಪಡೆದುಕೊಳ್ಳಬೇಕು. ಸಾರ್ವಜನಿಕ ರಸ್ತೆಗಳಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಬಾರದು. ಸ್ಥಳದ ಸುತ್ತ ಮುತ್ತಲೂ ಸ್ವಚ್ಛತೆಯನ್ನು ಮಾಡಿಕೊಳ್ಳಬೇಕು ಎಂದರು.

ಜಿಲ್ಲಾಸ್ಪತ್ರೆಯ ವೈದ್ಯ ಅಮಾನತು

ಚಾಮರಾಜನಗರ: ನಗರದ ಜಿಲ್ಲಾಸ್ಪತ್ರೆಯಲ್ಲಿ ಹೆರಿಗೆಯ ವೇಳೆ ತಾಯಿ, ಮಗು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ಲಕ್ಷ್ಯ ಆರೋಪದ ಮೇಲೆ ವೈದ್ಯ ಡಾ.ವೆಂಕಟಸ್ವಾಮಿ ಅವರನ್ನು ಅಮಾನತುಪಡಿಸಲಾಗಿದೆ.

ಚಾಮರಾಜನಗರ ತಾಲೂಕಿನ ಬಸಪ್ಪನಪಾಳ್ಯ ಗ್ರಾಮದ ಭಾಗ್ಯ ಎಂಬುವವರು ಆ.3ರಂದು ಹೆರಿಗೆಗೆ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದರು. ಹೆರಿಗೆ ವೇಳೆ ವೈದ್ಯರ ನಿರ್ಲಕ್ಷ್ಯದಿಂದಾಗಿ ತಾಯಿ ಹಾಗೂ ಮಗು ಮೃತಪಟ್ಟಿದ್ದಾರೆ ಎಂದು ಸಂಬಂಧಿಕರು ಆರೋಪಿಸಿದ್ದರು. ಈ ಸಂಬಂಧ ವೈದ್ಯರ ನಿರ್ಲಕ್ಷ್ಯ ಕಂಡು ಬಂದ ಹಿನ್ನೆಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರು ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರಾದ ಡಾ. ವೆಂಕಟಸ್ವಾಮಿ ಅವರನ್ನು ಅಮಾನತು ಮಾಡಿದ್ದಾರೆ ಎನ್ನಲಾಗಿದೆ.

ಕುದೇರು ಉಪನೋಂದಣಾಧಿಕಾರಿ ನೂತನ ಕಚೇರಿ ಕಟ್ಟಡ ನಿರ್ಮಾಣಕ್ಕಾಗಿ ಸದನದಲ್ಲಿ ಮನವಿ

ಕೊಳ್ಳೇಗಾಲ, ಆ.22– ಕೊಳ್ಳೇಗಾಲ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಕುದೇರು ಗ್ರಾಮದಲ್ಲಿನ 1930ರಲ್ಲಿ ನಿರ್ಮಾಣವಾದ ಉಪನೋಂದನಾಧಿಕಾರಿ ಕಚೇರಿ ಕಟ್ಟಡ ತೀರಾ ಶಿಥಿಲಾವಸ್ಥೆ ತಲುಪಿದ್ದು ಸದ್ಯ ಕಛೇರಿ ಖಾಸಗಿ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು. ಬಾಡಿಗೆ ಕರಾರು ಸಹಾ ಇನ್ನು 6 ತಿಂಗಳಲ್ಲೆ ಪೂರ್ಣಗೊಳ್ಳಲಿದೆ, ಈ ಹಿನ್ನೆಲೆ ಸರ್ಕಾರ ಕೂಡಲೆ ಹೊಸ ಕಟ್ಟಡ ನಿರ್ಮಾಣಕ್ಕೆ ಕ್ರಮವಹಿಸಬೇಕು ಎಂದು ಶಾಸಕ ಎ ಆರ್ ಕೃಷ್ಣಮೂರ್ತಿ ಬೆಂಗಳೂರಿನಲ್ಲಿ ನಡೆದ ವಿಧಾನಸಭೆ ಅಧಿವೇಶನದಲ್ಲಿ ಆಗ್ರಹಿಸಿದರು

ಕುದೇರು ಕಟ್ಟಡ ಸ್ವತಂತ್ರ ಪೂರ್ವಕ್ಕಿಂತಲೂ ಮುಂಚೆ ನಿರ್ಮಾಣವಾಗಿದೆ, ಸದ್ಯ ತೀರಾ ಶಿಥಿಲಾವಸ್ಥೆ ತಲುಪಿದ ಹಿನ್ನೆಲೆ ಬಾಡಿಗೆ ಕರಾರಿನಲ್ಲಿ ಖಾಸಗಿ ಕಟ್ಟಡವೊಂದರಲ್ಲಿ ಉಪನೋಂದಣಾ ಕಛೇರಿ ಕಾರ್ಯನಿರ್ವಹಿಸುತ್ತಿದ್ದು ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು. ಈ ವೇಳೆ ಕಂದಾಯ ಸಚಿವರು ಪ್ರತಿಕ್ರಿಯಿಸಿ ಈಗಾಗಲೇ 18.50 ಕೋಟಿ ಅಂದಾಜಿನಲ್ಲಿ ಕಟ್ಟಡ ನಿರ್ಮಾಣಕ್ಕೆ ಪ್ರಸ್ತಾಪನೆ ಬಂದಿದ್ದು ಆರ್ಥಿಕ ಇಲಾಖೆ ಗಮನಕ್ಕೆ ತಂದು ಕ್ರಮ ವಹಿಸುವುದಾಗಿ ಭರವಸೆ ನೀಡಿದರು.



ಸದನದಲ್ಲಿ ಶಾಸಕ ಎ ಆರ್ ಕೃಷ್ಣಮೂರ್ತಿ ಮಾತನಾಡುತ್ತಿರುವುದು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

Luxury Tourist Bus
Available for Family trips, Corporate tours, Wedding, College tours, Package tours.
Call: Sudhir Ganapathy
9036154301, 9448738617

Job Vacancy in Mysore
S.K. TILES PALACE
Tiles & Hardware showroom
Vishweshwara Nagar, Mysore.
Telecalling for female
Sales Executive for male
9972156256, 9620967801
Fresher & experience can apply

SITE FOR SALE
30x40 ಗಿಂತ ಸ್ವಲ್ಪ ಕಡಿಮೆ ಇದೆ (1022 square feet)
ಬೋಗಾದಿ ರಸ್ತೆ, ಮೈಸೂರು
Mob: 9591259866

ಬ್ರಾಹ್ಮಿನ್ಸ್ ರಿಯಲ್ ಎಸ್ಟೇಟ್
ವಿವೇಕಾನಂದ ನಗರ, ಮೈಸೂರು
ಮೈಸೂರಿನಲ್ಲಿ ಸೈಟು, ಮನೆ, ಜಮೀನು ಬೇಕಿದ್ದಲ್ಲಿ ಸಂಪರ್ಕಿಸಿ:
Mob: 9611509551

ಉಚಿತ ವೃದ್ಧಾಶ್ರಮ
ಮಂಡ್ಯದಲ್ಲಿರುವ ಉಚಿತ ವೃದ್ಧಾಶ್ರಮಕ್ಕೆ ಸೇರ ಬಯಸುವವರು ಸಂಪರ್ಕಿಸಿ
ಅಡುಗೆಯವರು ಬೇಕಾಗಿದ್ದಾರೆ.
9380541232

ಸೈಟು ಮಾರಾಟಕ್ಕಿದೆ
20x30 ಪಶ್ಚಿಮ ದಿಕ್ಕು, ಪ್ರಕೃತಿ ಲೇಔಟ್, ಟಿ.ನರಸೀಪುರ ಮುಖ್ಯ ರಸ್ತೆ.
ಸಂಪರ್ಕಿಸಿ: ಮಾಲೀಕರು
Mob: 8971261355

DTP, ಫ್ಲೆಕ್ಸ್ ಬೋರ್ಡ್, ಡಿಜಿಟಲ್ ಡಿಸೈನರ್
ಆಗಿ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಸೂರ್ಯ ಬೇಕರಿ, ಹೆಬ್ಬಾಳ್, ಮೈಸೂರು
Mob: 9731305656

ಮೈಸೂರಿನ ಪ್ರಸಿದ್ಧ ಎಂಎನ್‌ಸಿ ಕಂಪನಿಯಲ್ಲಿ ಆಫೀಸ್, ಶೋರೂಂಗಳಿಗೆ 7th, 8th, 9th, 10th, PUC, ITI, Diploma, Any Degree pass and fail ಆದವರಿಗೆ Helper, Packing, Driving, Data Entry, Admin, HR ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಯುವಕ, ಯುವತಿಯರು (ESI + PF + OT)ಸೇರಿ ಸಂಬಳ 18,500 ರಿಂದ 58,000. ಸಂಪರ್ಕಿಸಿ:
Mob: 8296833225

RERA APPROVED — RAI ESTATES — MUDA APPROVED — E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಹೊಸ ಮನೆ ಮಾರಾಟಕ್ಕಿದೆ
MUDA ಖಾತೆ 20x30, 3 BHK, E/F, 86 ಲಕ್ಷಕ್ಕೆ ಲಲಿತಾದ್ರಿನಗರ (ಬಾಲಾಜಿ ಲೇಔಟ್)ನಲ್ಲಿ ಮಾರಾಟಕ್ಕಿದೆ.
(Good Location & Area)
7760065890/9480222708

ಮನೆ ಭೋಗ್ಯಕ್ಕೆ ಬೇಕಾಗಿದೆ
2 BHK, ಪೂರ್ವ ದಿಕ್ಕು, ಸಂಜೀವಿನಿ ಸರ್ಕಲ್, ಲೋಕನಾಯಕ ನಗರ, ಬಸವನಗುಡಿ ಸರ್ಕಲ್, ಸುತ್ತ ಮುತ್ತ.
7899720535
7483998705

House for Sale
20x30, South facing, GF, 1 BHK, FF, 2 independnet rooms. Ready to move in. Bank loan available.
Price: Rs. 45 Lakhs.
7795609173

ಕೃಷಿ ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು ಜಯಪುರ ಹೋಬಳಿ, ಮಂಡೇನಹಳ್ಳಿಯಲ್ಲಿ ಮೈಸೂರಿನಿಂದ 24 ಕಿ.ಮೀ, ಹೈವೇಯಿಂದ 300 ಮೀಟರ್‌ನಲ್ಲಿ 1 ಎಕರೆ, 30 ಗುಂಟೆ, ಗೇಟ್, ಬೇಲಿ ಹಾಕಿರುವ ಜಮೀನು ಮಾರಾಟಕ್ಕಿದೆ. ಬೇಕಾದವರು ಸಂಪರ್ಕಿಸಿ:
ಭೈರೇಗೌಡ
Mob: 9379633981

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645
9008711654

HOUSE, SITE SALE
30x40 site sale at Gaddige Road, 40x60 house sale at Ramakrishna Nagar, Kuvempunagar, Vijayanagar.
30x40 house sale at Ramakrishnanagar, Dattagalli.
Call: 7353430309

MYSURU RETINA CARE
STAFF REQUIRED
1) O.T. Technican
2) Optometrist
Contact numbers
7338369364 / 0821-2543244
22A, Sri Guru Krupam, 1st Floor, New Kantharaj Urs Road, Niveditha Nagar, Mysore, above SRI VEG HOTEL

ಹೆಲ್ತ್‌ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲೊಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸಂತ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್.
NIE ಕಾಲೇಜ್ ಪಕ್ಕ, ಮೈಸೂರು
Mob: 9916908454

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂಡಿತ್ ಎಸ್. ಮಣಿಕಂಠನ್
MOB: 9480743991
ಅಷ್ಟಮಂಗಳ ಪ್ರಶ್ನೆಯಿಂದ ವಿವಾಹ ದಾಂಪತ್ಯ, ಆರೋಗ್ಯ, ಸಾಲಬಾಧೆ, ಸ್ತ್ರೀ ಪುರುಷ ಪ್ರೇಮ, ಶತ್ರುಬಾಧೆ ಹಾಗೂ ಗುಪ್ತ ಸಮಸ್ಯೆಗಳಿಗೆ ಭಗವತಿ ಕುಟ್ಟಿಚೇತನ್ ದೈವ ಶಕ್ತಿಯಿಂದ ಇನ್ನೂ ನಿಮ್ಮ ಯಾವುದೇ ಸಮಸ್ಯೆ ಗಳಿದ್ದರೂ, ಪುರಾತನ ತಾಳೆ ಗ್ರಂಥದ ಆಧಾರದ ಮೇಲೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
(ಖಾಯಂ ಮನೆ ವಿಳಾಸ ಅಶೋಕ ರಸ್ತೆ, ಈಸ್ಟ್ ಕ್ರಾಸ್ 36, ಶುಭಂ ಜ್ಯುವೆಲರಿ ಎದುರು, ಮೈಸೂರು)

ಬೇಕಾಗಿದ್ದಾರೆ
ಗ್ರಾಫಿಕ್ ಡಿಸೈನರ್
(Experienced in Corel Draw)
ಸೈನೇಜ್ ಬೋರ್ಡ್ ಮೇಕರ್
Minimum 3 years of experience
ಡ್ರೈವರ್ ಕಮ್ ಹೆಲ್ಪರ್
ಗ್ಯಾಲಕ್ಸಿ ಆರ್ಟ್, ಆರೋಮಾ ಬೇಕರಿ ಹತ್ತಿರ, ಬೋಗಾದಿ ರೋಡ್
M : 8105406141

ಬಸವ ಮಾರ್ಗ ವ್ಯಸನಮುಕ್ತ ಕೇಂದ್ರ (ರಿ)
54ನೇ ಉಚಿತ ಕುಡಿತ ಬಿಡಿಸುವ ಶಿಬಿರ.
ಸೆಪ್ಟೆಂಬರ್ 7 ರಿಂದ 16ರ ವರೆಗೆ.
8803344999
9742559999

ಶ್ರೀ ವಿನಾಯಕ ಟೂರಿಸ್ಟ್
ಗ್ರೀನ್ ವರ್ಲ್ಡ್ ಭಾರತ್ ದರ್ಶನ್, ಮೈಸೂರು
5–10–2025 ರಿಂದ 13 ದಿನಗಳ (ಎ.ಸಿ ರೈಲು ಮತ್ತು 2+2 ಬಸ್ಸಿನಲ್ಲಿ) ಕಾಶಿ, ಅಯೋಧ್ಯೆ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್, ಹರಿದ್ವಾರ್, ಆಗ್ರ, ಮಥುರಾ, ದೆಹಲಿ ಮತ್ತು ಇತ್ಯಾದಿ.
20–10–2025 ರಿಂದ 12 ದಿನಗಳ (ವಿಮಾನ ಮತ್ತು 2+2 ಎ.ಸಿ ಬಸ್ಸಿನಲ್ಲಿ) ಅಯೋಧ್ಯೆ, ಕಾಶಿ, ಆಗ್ರ ಮತ್ತು ಪ್ರಯಾಗ್‌ರಾಜ್, ಮಥುರಾ, ಹರಿದ್ವಾರ್, ಕುರುಕ್ಷೇತ್ರ, ಅಮೃತ್‌ಸರ್, ವಾಘಗಡಿ, ವೃಷ್ಣೋದೇವಿ, ದೆಹಲಿ ಇತ್ಯಾದಿ. ಸಂಪರ್ಕಿಸಿ:
9481819973, 7676167667

SITES FOR SALES
Residential and semi-commercial sites measuring 30x40 for sale in Hale Kesare main road, adjacent to Army Layout from city only 6.5 km. Contact:
Mob: 9606975149

30x40 ಅಳತೆಯ ನಿವೇಶನಗಳು ದೊರೆಯುತ್ತವೆ
ರಮಣಶ್ರೀ ಸೆರೇನ್ ವಸತಿ ಬಡಾವಣೆ (ವರುಣ)
ಟಿ.ನರಸೀಪುರ ರಸ್ತೆ, ಸುತ್ತೂರು ರಾಜ್ಯ ಹೆದ್ದಾರಿಯಲ್ಲಿ ನೋಂದಾವಣೆಗೆ ಮತ್ತು ಮನೆ ನಿರ್ಮಿಸಲು ಸಿದ್ಧವಿರುತ್ತದೆ, ಬ್ಯಾಂಕ್ ಸಾಲ ಸೌಲಭ್ಯವಿರುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
7411914135

SITE FOR SALE
ನಮೂನೆ '3' 82x33 ಉಳ್ಳ ಸೈಟು ಮಾರಾಟಕ್ಕಿದೆ. BEML ಸರ್ಕಲ್‌ನಿಂದ 1 ಕಿ.ಮೀ. ಕೂರ್ಗಳ್ಳಿ, ಮೈಸೂರು. ಸಂಪರ್ಕಿಸಿ
Mob: 9902634441

H M ENTERPRISE
Shell, Najangud - Ooti Road
REQUIRED MEN/ WOMEN STAFF
FOR SHELL PETROL BUNK
Attractive Salary ESI/PF, Food Facilities and Room Services
FOR MORE DETAILS PLEASE CONTACT
Mob: 9964677977

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಹೊಸ ಮನೆ ಮಾರಾಟಕ್ಕಿದೆ
ಇಲವಾಲದ ಸೇಂಟ್ ಜೋಸೆಫ್ ಸ್ಕೂಲ್ ಆಚಾರ್ಯ ವಿದ್ಯಾಕುಲ ಶಾಲೆಯ ಪಕ್ಕದ, 3 ಬಿಹೆಚ್‌ಕೆ ಡ್ಯೂಪ್ಲೆಕ್ಸ್, ಫುಲ್ ಫರ್ನಿಷ್ಡ್, ಓನ್ ಬೋರ್‌ವೆಲ್.
ನಂಜುಂಡಸ್ವಾಮಿ ಹೆಚ್.ಎಸ್. (ಮಾಜಿ ಸೈನಿಕರು)
9483862050, 8660625801

ಮನೆ ಖರೀದಿಗೆ ಬೇಕಾಗಿದೆ
20x30, ಪೂರ್ವ ಅಥವಾ ಉತ್ತರ, ಚಾಮುಂಡಿಪುರಂ / ವಿದ್ಯಾರಣ್ಯಪುರಂ / ಜೆ.ಪಿ. ನಗರ, ರಾಮಕೃಷ್ಣನಗರ. ಬ್ರೋಕರಿಗೆ ಅವಕಾಶವಿಲ್ಲ, ನೇರವಾಗಿ ಮನೆಯ ಮಾಲೀಕರು ಸಂಪರ್ಕಿಸಿ. ತಕ್ಷಣ ರಿಜಿಸ್ಟ್ರೇಷನ್.
Mob: 8904481012

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಟೈಲರಿಂಗ್ ತರಬೇತಿ
Limited Offer - * Basic Tailoring * Advance Tailoring * Fashion Trendy Tailoring * Embroidery Works.
ತಕ್ಷಣ ಸಂಪರ್ಕಿಸಿ:
ಗಾನವಿ ಇಂಟರ್‌ನ್ಯಾಷನಲ್, ಮೈಸೂರು
9620636665, 9620476665
9620436665, 6360737581

ಕಾಫಿ ಎಸ್ಟೇಟ್ ಮಾರಾಟಕ್ಕಿದೆ
20 ಎಕರೆ ಕಾಫಿ ಎಸ್ಟೇಟ್ ಕೊಡಗಿನಲ್ಲಿ ಮಾರಾಟಕ್ಕಿದೆ. ರೆಸಾರ್ಟ್ ಮಾಡಲು ಸೂಕ್ತವಾಗಿದೆ
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
8792306996

ಸೋಲಾರ್ ಸರ್ವೀಸ್
ಅನ್ನು ಕಂಪನಿ ಕಡೆಯಿಂದ 700 ರೂ.ಗೆ 1–8–2025 ರಿಂದ 30–8–2025 ರವರೆಗೆ ಮಾಡಿಕೊಡಲಾಗುತ್ತದೆ.
9008711654

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಮನೆ ಭೋಗ್ಯಕ್ಕೆ ಇದೆ
2 BHK, (30x40, (Ground Floor), ರಾಜೀವ್‌ನಗರ, ರಿಂಗ್ ರಸ್ತೆ, ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹತ್ತಿರ, ಮೈಸೂರು.
8762101799, 8431946515

ಕಾಂಬೋ ಪ್ಯಾಕ್
1) 26 ಕೆ.ಜಿ. ಸ್ಟೀಮ್ BT ರೈಸ್, (2) 2 ಕೆ.ಜಿ. ಗೋಧಿಹಿಟ್ಟು, (3) 1 ಲೀ ಸನ್‌ಫ್ಲವರ್ ಎಣ್ಣೆ, (4) 1 ಕೆ.ಜಿ. ತೊಗರಿ ಬೇಳೆ, (5) 1 ಕೆ.ಜಿ. ಕಡ್ಲೆಬೇಳೆ, (6) 1/2 ಕೆ.ಜಿ. ಹೆಸರು ಬೇಳೆ, (7) 1/2 ಕೆ.ಜಿ. ಕಡ್ಲೆ ಬೀಜ, (8) 1 ಕೆ.ಜಿ. ಉಪ್ಪು, (9) 200 ಗ್ರಾಂ ಹಪ್ಪಳ ಪ್ಯಾಕೆಟ್, (10) 100 ಗ್ರಾಂ ಬೇಳೆ ಸಾಂಬಾರ್ ಪುಡಿ. ಬೆಲೆ ರೂ. 2,100/- (ಷರತ್ತು ಅನ್ವಯ).
ಶ್ರೀ ಅನ್ನಪೂರ್ಣೇಶ್ವರಿ ರೈಸ್ ಕಾರ್ನರ್
#1498, 1ನೇ ಕ್ರಾಸ್, ಶಿವರಾಂಪೇಟೆ, ಮೈಸೂರು–570 001
9741859037, 9902158019

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಸಸ್ಯಹಾರಿ ಅಡುಗೆ ತಯಾರಕರು ಬೇಕಾಗಿದ್ದಾರೆ. ವಸತಿ ESI, PF ಸೌಲಭ್ಯವಿರುತ್ತದೆ
9900302287
9986474846

MUDA APPROVED SITES
8 ಲಕ್ಷ ಪಾವತಿಸಿ (ಉಳಿಕೆ ಲೋನ್)*
ವಿಜಯನಗರ 4ನೇ ಸ್ಟೇಜ್ ಹಾಗೂ ಬೋಗಾದಿ ರಸ್ತೆ, ಟ್ರೆಂಡ್ಸ್ ಸಮೀಪ 49–52 ಲಕ್ಷ
ಲಲಿತಾದ್ರಿಪುರ ರಿಂಗ್ ರಸ್ತೆ ಹತ್ತಿರ, 37.5 ಲಕ್ಷ
ದಟ್ಟಗಳ್ಳಿ ಕ್ರೆಸ್ಟ್
ಪಬ್ಲಿಕ್ ಸ್ಕೂಲ್ ಪಕ್ಕ 68 ಲಕ್ಷ
ಜೆ.ಪಿ.ನಗರ ರಿಂಗ್ ರಸ್ತೆ ಹತ್ತಿರ 58 ಲಕ್ಷ
Brokers Excuse
81230 75038

MUDA APPROVED 30X40
ಬೆಳವಾಡಿ-ನಾಗವಾಲ ರಸ್ತೆ 16.5–22 ಲಕ್ಷ
ಬೋಗಾದಿ, ಕುಮಾರಬೀಡು ರಿಸೆ 26 ಲಕ್ಷ
ಮೈಸೂರು ಏರ್ ಪೋರ್ಟ್ ಹತ್ತಿರ 28–35 ಲಕ್ಷ
ಇಲವಾಲ 16 ಲಕ್ಷ , ಮೈದನಹಳ್ಳಿ 28 ಲಕ್ಷ
1 BHK ಮನೆ / 2 BHK FLAT ಲಭ್ಯ
ಬಾಡಿಗೆ 6 ಸಾವಿರ / ಭೋಗ್ಯ 6 ಲಕ್ಷ
ಬಾಡಿಗೆ 16 ಸಾವಿರ / ಭೋಗ್ಯ 14 ಲಕ್ಷ
Brokers Excuse
97428 78878

ಹೊಸ ಮನೆ ಮಾರಾಟಕ್ಕಿದೆ
30x35 ಡ್ಯೂಪ್ಲೆಕ್ಸ್, 4 ಬಿಹೆಚ್‌ಕೆ, ದಟ್ಟಗಳ್ಳಿ, ಆದಿತ್ಯ ಸರ್ಕಲ್ ಹತ್ತಿರ, ಮೈಸೂರು
7204401199, 7795269272

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು ನೇರ ಸಂಪರ್ಕಿಸಿ. ಫೋಟೋ, ಬಯೋಡೇಟಾ ಜಾತಕವನ್ನು ವಾಟ್ಸಾಪ್ ಮಾಡಿರಿ.
9448229184, 7899625268

30X40 SITE FOR SALE
Bogadi-Gaddige Road, Mysuru.
5 kms from Ring Road.
Call: 8050245332

WANTED
CAR DRIVERS WANTED URGENTLY
(Mercedes Benz)
2 to 5 years of experience in the Mercedes Benz
Contact Number:
8748991416 / 7090715155

ಕಾರ್ನರ್ ಮಳಿಗೆ ಬಾಡಿಗೆಗೆ
ಮೈಸೂರಿನ ಶಾರದಾದೇವಿ ನಗರ (ಬಸವೇಶ್ವರ ನಗರ) ನ್ಯೂ ಕಾಂತರಾಜ್ ಅರಸ್ ರಸ್ತೆಯಲ್ಲಿ ಉತ್ತರಾಭಿಮುಖ ವಾಗಿರುವ (North Facing) 12x34 ಅಡಿ ಅಳತೆಯ ಮೂಲೆ ಮಳಿಗೆ ಬಾಡಿಗೆಗೆ ಲಭ್ಯವಿದೆ
ಸಂಪರ್ಕಿಸಿ: 9880581377

PRAKRUTHI PROPERTIES
FOR SALE
30x40@ 22 lakhs Near RT Nagar
BSNL Lyt Sites Also Avl.
Residential & Commercial Plots in & around Mysore
Apartments @ Ramakrishna Nagar
20x30 New 2BHK House, As Per your Plan With Interiors @ Just 42 Lakh in Bogadi
95386 90359, 90359 90359



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಶೋರೂಂ/ಕಛೇರಿ ಬಾಡಿಗೆಗೆ
ಮೈಸೂರಿನ ಶಾರದಾದೇವಿ ನಗರ (ಬಸವೇಶ್ವರ ನಗರ) ನ್ಯೂ ಕಾಂತರಾಜ್ ಅರಸ್ ರಸ್ತೆಯಲ್ಲಿ ಉತ್ತರಾಭಿಮುಖ ವಾಗಿರುವ (North Facing) 25x35 ಅಡಿ ಅಳತೆಯ ಮಳಿಗೆಯು ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಲಭ್ಯವಿದೆ
ಸಂಪರ್ಕಿಸಿ: 9880581377

ಮನೆಗೆ ಅಡುಗೆ ಮಾಡುವವರು ಬೇಕಾಗಿದ್ದಾರೆ.
VEG / NON VEG
ದಟ್ಟಗಳ್ಳಿ, ತ್ರಿವೇಣಿ ಮಾರ್ಟ್ ಹತ್ತಿರ, ಮೈಸೂರು. ಸಂಬಳ: 18,000.
Mob: 9663570750

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ / ಜೆಎಸ್‌ಎಸ್ 3ನೇ ಹಂತ / ವರುಣ / ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
Mob: 9686071750

HOUSE FOR SALE
30x40 North facing site, 1st Floor & 2nd Floor hosue, Roopa Nagar, Mysore-570 026.
9449096104, 9731203746

ಬೇಕಾಗಿದ್ದಾರೆ
ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವಂಥ ಪುರುಷರು ಬೇಕಾಗಿದ್ದಾರೆ. ಎಸ್.ಎಸ್.ಎಲ್.ಸಿ., ಪಿಯುಸಿ ಫೇಲ್ / ಪಾಸ್. ಕಾರು ಚಾಲನೆ ಬಲ್ಲವರು. ಊಟ, ವಸತಿ ದೊರೆಯುತ್ತದೆ. ಸಂಪರ್ಕಿಸಿ:
98451-21694 / 96329-59694

ಪ್ರಕಟಣೆ
ವಿಶಲ್ಯ ಮಾದರಿ ವಸತಿ ಶಾಲೆ ಮತ್ತು ಕಾಲೇಜು ಸೋಸ್ಲೆಪುರ ಹೆಗ್ಗಡ ಕೋಟೆ ತಾಲೂಕು, ಮೈಸೂರು ಜಿಲ್ಲೆ, ಇಲ್ಲಿ ಈ ಕೆಳಕಂಡ ಹುದ್ದೆಗಳು ಖಾಲಿ ಇದ್ದು ಆಸಕ್ತರು ತಮ್ಮ ವೈಯಕ್ತಿಕ ಮಾಹಿತಿಯನ್ನು ಕೆಳಕಂಡ ಇಮೇಲ್ ಐಡಿಗೆ ದಿನಾಂಕ 25–08–2025 ಒಳಗೆ ಕಳುಹಿಸುವುದು. krelsmdrs603@gmail.com
1. ಸ್ಟಾಫ್ ನರ್ಸ್ (B.Sc Nursing / GNM)
2. TGT Kannada (BA B.Ed, CTET ಕಡ್ಡಾಯ)
3. PGT History, (MA in History B.Ed.)
4. ಸಲಹೆಗಾರರು (Counsellor) ಮನೋವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ (Master Degree in Psychology / Clinical Psychology

FOR SALE
Family Saloon full set up with good condition. Contact:
Mob: 7892313630

ಹೊಸ ಮನೆ ಮಾರಾಟಕ್ಕಿದೆ
20x30 W/N Duplex, 3 Bedroom, Lalbahaddur Shastry Nagar.
9742062636
9686969813

S.K. CONSTRUCTIONS
ನಿಮ್ಮ ಕನಸಿನ ಮನೆ ಕಟ್ಟಿಸಬೇಕೆ, ಚಿಂತೆ ಬೇಡ, ಅತೀ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ನಮ್ಮದೇ Plan, 3-D Elevation and Loan ಸಹಿತ ಕಟ್ಟಿಕೊಡುತ್ತೇವೆ.
Mob: 9620528490

ಸೈಟುಗಳು ಮಾರಾಟಕ್ಕಿವೆ
* 30x40 S/F ವಿಶ್ವೇಶ್ವರಯ್ಯ ಲೇಔಟ್, ಯೂನಿವರ್ಸಿಟಿ ಲೇಔಟ್ ಎದುರು.
* 13 + 13.20 / 2 x 18 S/W Corner, ಸೈಟು ಸೋಮನಾಥನಗರ (ಕೀರ್ಗಳ್ಳಿ).
* 30x40, W/F & 40x60 E/F ಹೆಬ್ಬಾಳು 2ನೇ ಹಂತ.

8310470358, 9620553945

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS Factoryಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು ವಯೋಮಿತಿ: 50 ವರ್ಷದೊಳಗೆ. ಸಂಬಳ: 18,500, 8 hrs, 26 days. ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819, 9620667819

HOUSE FOR SALE
New 3 BHK 20x30 Duplex house, East face, 3 bedroom @ Vijayanagar 4th Stage, 2nd Phase, Mysore, near Marimallappa School.
9066086056, 9844383654

DOCUMENT LOST
I, Sheetal Sachin Kadam, W/o Sachin Kadam, R/at # 912/2, Uma Talkies Road, Kubhergeri, Mysore, have lost my original Dhanapatra, (Book No. 1, Dasthaveju No. MYE 101332 2018 19 CD No. MYED 105, dated 17-5-2018) on 13-8-2025. Finders please contact:
Mob: 9342188543

ಭೂಮಿಕಾ ಕೃಷ್ಣಾ ಲೇಔಟ್
2ನೇ ಹಂತ, 30x40 ಪೂರ್ವ ದಿಕ್ಕು, ಬೆಲೆ 26 ಲಕ್ಷ. Nego. ಚಿಕ್ಕಹಳ್ಳಿ ರಸ್ತೆ (ಹೊಸ NH ರಸ್ತೆಯ ಹತ್ತಿರ), ಇಲವಾಲ, ಮೈಸೂರು.
Mob: 8553540950

ಕೆಲಸಕ್ಕೆ ಬೇಕಾಗಿದ್ದಾರೆ
ಫ್ಲೋರ್ ಮಿಲ್ ಕೆಲಸಕ್ಕೆ ಗಂಡಸರು ಅಥವಾ ಹೆಂಗಸರು ಬೇಕಾಗಿದ್ದಾರೆ. ಸ್ಥಳ: ಶ್ರೀರಾಂಪುರ. ಸಂಬಳ: 7,000. ಶನಿವಾರ ಹಾಗೂ ಭಾನುವಾರ ರಜೆ. ಸಮಯ: 9 – 5.30 pm.
Mob: 9972515106

ಸೈಟುಗಳು ಮಾರಾಟಕ್ಕಿವೆ
@ ಇಲವಾಲ ಬಸ್ ನಿಲ್ದಾಣ ಹತ್ತಿರ
(Starts Rs. 1299 / sq.ft.).
Mob: 9880774395

WANTED
TELECALLING ಮಾಡಲು ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ.
Call - 8050972340
ಸಂಬಳ – ರೂ. 10000 to ರೂ. 25000.

SITE FOR SALE
30x50 MUDA allot (owner) site available for sale with immediate Registration in Vijayanagar 4th Stage, 3rd phase, Mysore, East facing site, 3rd site from 80 feet road.
Mob: 99163 17225
(Direct buyers only)

ವರ ಬೇಕಾಗಿದೆ
SC ಆದಿ ಕರ್ನಾಟಕ
33 ವರ್ಷದ MBA ಮಾಡಿರುವ ಒಳ್ಳೆಯ ಹುಡುಗಿಗೆ 40 ವರ್ಷದ ಒಳಗಿನ ವಿದ್ಯಾವಂತ, ಗುಣವಂತ ವರ ಬೇಕಾಗಿದೆ.
Mob: 7892381659

ಮನೆ ಮಾರಾಟಕ್ಕಿದೆ
ನೆಲ ಮಹಡಿ 2 BHK
1ನೇ ಮಹಡಿ 1 BHK
No. 874, 7ನೇ ಕ್ರಾಸ್, E & F Block, ರಾಮಕೃಷ್ಣನಗರ, ಮೈಸೂರು.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
Mob: 8618144835

ತಕ್ಷಣ ಬೇಕಾಗಿದ್ದಾರೆ
ಕಡಕೊಳ ಮತ್ತು ತಾಂಡ್ಯ ಏರಿಯಾದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & PUC. ಸಂಬಳ: 28,000 (26 days). ವಯೋಮಿತಿ: 45 ವರ್ಷದ ಒಳಗೆ. ESI and PF ಸೌಲಭ್ಯವಿರುತ್ತದೆ.
9620667819, 9620777819

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು
ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶಪಾರಂಪರ್ಯ ಜ್ಯೋತಿಷ್ಯರು. ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

ವಧು-ವರಾನ್ವೇಷಣೆ
ಒಕ್ಕಲಿಗ / ಕುರುಬ / ಲಿಂಗಾಯತ / ನಾಯಕ / SC & ಎಲ್ಲಾ ಜಾತಿಯ ವಧು-ವರರಿಗಾಗಿ ಕೂಡಲೇ ಸಂಪರ್ಕಿಸಿ:
(II Marriages also)
Mob: 9343175000

ಮನೆ ಭೋಗ್ಯಕ್ಕಿದೆ
ಸಸ್ಯಹಾರಿಗಳಿಗೆ ಮಾತ್ರ
ವಿಳಾಸ: ನಂದಿನಿ ಬಡಾವಣೆ, 2ನೇ ಹಂತ, ರಿಂಗ್ ರೋಡ್ ಹತ್ತಿರ, ಆಲನಹಳ್ಳಿ, ಮೈಸೂರು.
30x40, 3 BHK, Duplex house.
9591823800, 9611066014

YUKTHA CONSTRUCTIONS SITES FOR SALE
30x40 W/F @ Srirampura.
50x80 N/F, 40 ft. road, Sharada Layout.
40x60 N/F 40 feet road, J.P. Nagar.
30x50 house E/F @ SriNagara, JSS Layout, Duplex House @ Mysuru.
7892381659, 9986603572

ಬೇಕಾಗಿದ್ದಾರೆ
ಮೈಸೂರಿನ ಸುತ್ತ ಮುತ್ತ ಹೆಸರಾಂತ ಕಂಪೆನಿಗಳಲ್ಲಿ ಕೆಲಸ ಮಾಡಲು ಅನುಭವವುಳ್ಳ ಹೌಸ್‌ಕೀಪಿಂಗ್ ಕೆಲಸ ಮಾಡಲು ಪುರುಷರು (MALE) ಬೇಕಾಗಿದ್ದಾರೆ ಕೆಲಸದ ಸ್ಥಳ: BMH ಹಾಸ್ಪಿಟಲ್, ಇನ್ಫೋಸಿಸ್, ಹೆಬ್ಬಾಳ ಹತ್ತಿರ ಮತ್ತು ವಿರಾಜಪೇಟೆ ರೆಸಾರ್ಟ್‌ನಲ್ಲಿ ಊಟ/ರೂಮ್ ವ್ಯವಸ್ಥೆ ಇರುತ್ತದೆ. ವಯೋಮಿತಿ 40 ವರ್ಷದ ಒಳಗೆ. ಸಂಪರ್ಕಿಸಿ:
9900212487, 9035050651

NEW HOUSE FOR SALE
20x30, #No. 485, S/E house, ground & first floor, semi furnished, near Ring Road, Indian Petrol Bunk backside, Lalithadrinagar, Mysuru. Contact:
9900145353, 9008380934

ಮೈಸೂರು ಮಿತ್ರ — 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಗುಣಮಟ್ಟದ ಹಾಲು ಸರಬರಾಜಿನಿಂದ ಡೇರಿ ಅಭಿವೃದ್ಧಿ

ರೈತರಿಗೂ ಹೆಚ್ಚಿನ ಅನುಕೂಲ: ಅಧ್ಯಕ್ಷ ಕೆ.ಎನ್.ಕುಮಾರ್

ತಿ.ನರಸೀಪುರ, ಆ.22– ರೈತರು ಗುಣಮಟ್ಟದ ಹಾಲು ಸರಬರಾಜು ಮಾಡುವುದರಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಭಿವೃದ್ಧಿ ಸಾಧ್ಯ. ಇದರಿಂದ ರೈತರಿಗೂ ಹೆಚ್ಚಿನ ಅನುಕೂಲವಾಗಲಿದೆ ಎಂದು ಕೊಳತ್ತೂರು ಡೇರಿ ಅಧ್ಯಕ್ಷ ಕೆ.ಎನ್.ಕುಮಾರ್ ತಿಳಿಸಿದರು.

ತಾಲೂಕಿನ ಕೊಳತ್ತೂರು ಗ್ರಾಮದ ಸಹಕಾರ ಸಂಘದ ಆವರಣದಲ್ಲಿ ಶುಕ್ರವಾರ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಾಲು ಉತ್ಪಾದಕರ ಸಹಕಾರ ಸಂಘ ಅಭಿವೃದ್ಧಿಯಾಗಬೇಕಾದರೆ ಸಂಘಕ್ಕೆ ಹೆಚ್ಚಿನ ಹಾಲು ಪೂರೈಕೆ ಹಾಗೂ ಗುಣಮಟ್ಟ ಹೆಚ್ಚಾಗಬೇಕು. ಶುದ್ಧ ಹಾಗೂ ಗುಣಮಟ್ಟದ ಹಾಲನ್ನು ಸರಬರಾಜು ಮಾಡಿದರೆ ಸಂಘವು ಉಳಿಯುತ್ತದೆ ಮತ್ತು ಸರ್ಕಾರದ ಪ್ರೋತ್ಸಾಹ ಧನ ರೈತರಿಗೆ ಬರಲು ಅನುಕೂಲ ವಾಗುತ್ತದೆ. ರೈತರು ಕೃಷಿ ಚಟುವಟಿಕೆ ಮತ್ತು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡರೆ ಯಾವುದೇ ನಷ್ಟ ಇಲ್ಲ. ರಾಸುಗಳಿಗೆ ಯಾವಾಗಲೂ ಶುದ್ಧ ಕುಡಿಯುವ ನೀರನ್ನು ಒದಗಿಸಬೇಕು. ಹಾಲನ್ನು ಸಂಘಕ್ಕೆ ತರಲು ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳನ್ನು ಬಳಸಿದರೆ ಒಳ್ಳೆಯದು. ಹಾಲು ಕರೆಯುವ ಮೊದಲು ಕೈಗಳನ್ನು ಸಾಬೂನಿನಿಂದ ತೊಳೆದು ಕೊಂಡು ಕೆಚ್ಚಲನ್ನು ಶುದ್ಧ ನೀರಿನಿಂದ ತೊಳೆದು ಒಣ ಬಟ್ಟೆಯಿಂದ ಸ್ವಚ್ಛಗೊಳಿಸಬೇಕು ಎಂದರು.



ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಕೆ.ಎನ್.ಕುಮಾರ್ ಉದ್ಘಾಟಿಸಿದರು.

ಹೈನುಗಾರಿಕೆ ಇಂದು ಉಪ ಕಸುಬಾಗಿ ಉಳಿದಿಲ್ಲ. ಅದೊಂದು ಉದ್ಯಮವಾಗಿ ಬೆಳೆಯುತ್ತಿದೆ. ಹಾಲು ಉತ್ಪಾದಕರ ಪರಿಶ್ರಮದಿಂದ ಗ್ರಾಮದ ಸಹಕಾರ ಸಂಘವು 2024–25ನೇ ಸಾಲಿನಲ್ಲಿ 2,51,244 ರೂ. ನಿವ್ವಳ ಲಾಭಾಂಶ ಗಳಿಸಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಇದಕ್ಕೆ ಕಾರಣಕರ್ತರಾದ ರೈತರು ಮತ್ತು ಷೇರುದಾರರಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು. ಸಂಘಕ್ಕೆ ದೊರಕಿರುವ ಲಾಭಾಂಶದ ಪೈಕಿ ಷೇರುದಾರರಿಗೆ 96,795 ರೂ.ಗಳನ್ನು ಬೋನಸ್ ರೂಪದಲ್ಲಿ ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಸಂಘ ಮತ್ತಷ್ಟು ಲಾಭಾಂಶ ಗಳಿಸಲು ಹೈನುಗಾರರು ಡೇರಿಯೊಂದಿಗೆ ಉತ್ತಮ ಬಾಂಧವ್ಯ ಹೊಂದ ಬೇಕು. ಗುಣಮಟ್ಟದ ಹಾಲನ್ನೇ ಪೂರೈಕೆ ಮಾಡ ಬೇಕು ಎಂದು ಮನವಿ ಮಾಡಿದರು.

ಮುಂದಿನ 15 ದಿನಗಳಲ್ಲಿ ಹೈನುಗಾರಿಕೆಗೆ ಬೇಕಾದ ಸೌಲಭ್ಯಗಳನ್ನು ದೊರಕಿಸಿಕೊಡಲಾಗುತ್ತದೆ. ರಬ್ಬರ್ ಮ್ಯಾಟ್, ಚಾಪ್ ಕಟರ್ ಸೇರಿದಂತೆ ಮತ್ತಿತರ ಪರಿಕರಗಳನ್ನು ಒಕ್ಕೂಟದ ಅಧ್ಯಕ್ಷರೊಂದಿಗೆ ಚರ್ಚಿಸಿ ರೈತರಿಗೆ ಒದಗಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತದೆ ಎಂದರು.

ಇಂದು ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರುಕಟ್ಟೆ ಹೊರ ರಾಜ್ಯಗಳಲ್ಲದೇ ಪಾಶ್ಚಾತ್ಯ ದೇಶಗಳಿಗೂ ವಿಸ್ತರಿಸಿರುವುದು ನಂದಿನಿ ಹಾಲಿನ ಉತ್ಕೃಷ್ಟತೆಗೆ ಸಾಕ್ಷಿಯಾಗಿದೆ. ಆರೋಗ್ಯವಂತ ಹಸುವಿನ ಶುದ್ಧ ಗುಣಮಟ್ಟದ ಹಾಲನ್ನು ಮಾತ್ರ ಸಂಘವು ಪಡೆದುಕೊಳ್ಳುತ್ತದೆ. ಕೆಚ್ಚಲು ಬಾವು ಇರುವ ಹಾಲನ್ನು ಸಂಘಕ್ಕೆ ಸರಬರಾಜು ಮಾಡಬಾರದು ಎಂದರು.

ಈ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಜಯಮ್ಮ 4,10,791 ರೂ., ಕೆ.ಶಂಕರ 3,25,425 ರೂ., ಮಹದೇವ 2,52,870 ಹಾಗೂ 3,33,870 ರೂ.ಗಳ ಹಾಲು ಸರಬರಾಜು ಮಾಡಿದ ಮಹದೇವ ಅವರಿಗೆ ವಿಶೇಷ ಬಹುಮಾನ ನೀಡಿ ಅಭಿನಂದಿಸಲಾಯಿತು. ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಕಾಳಯ್ಯ, ನಿರ್ದೇಶಕರಾದ ಕೆ.ಶಂಕರ, ಕೃಷ್ಣ, ಮಹದೇವ, ತಿಮ್ಮರಾಯಗೌಡ, ನಿಂಗರಾಜು, ಟಿ.ಲೋಕೇಶ್, ಮಹದೇವಶೆಟ್ಟಿ, ರತ್ನಮ್ಮ, ಪದ್ಮ, ಸೋಮಣ್ಣ, ರತ್ನಮ್ಮ, ಸಂಘದ ಇಒ ಅನಿತಾ, ಮುಖ್ಯ ಕಾರ್ಯ ನಿರ್ವಾಹಕ ಸಿದ್ದರಾಜು, ಹಾಲು ಪರೀಕ್ಷಕ ಧನರಾಜು, ಗುಮಾಸ್ತ ಕೆ.ಎನ್.ಗೋವಿಂದ, ಸಹಾಯಕ ಚಂದನ್ ಹಾಜರಿದ್ದರು.

ಜಿಪಂ ಉಪ ಕಾರ್ಯದರ್ಶಿಯಿಂದ ಕಾಮಗಾರಿ ಪರಿಶೀಲನೆ



ಕಾಮಗಾರಿಗಳನ್ನು ಜಿಪಂ ಉಪ ಕಾರ್ಯದರ್ಶಿ ಪರಿಶೀಲಿಸಿದರು.

ಹುಣಸೂರು, ಆ.22– ತಾಲೂಕಿನ ಮರದೂರು ಹಾಗೂ ಕೊತ್ತೇಗಾಲ ಗ್ರಾಪಂ, ಮ–ನರೇಗಾ ಹಾಗೂ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಕೈಗೊಂಡಿರುವ ಕಾಮಗಾರಿ ಸ್ಥಳಕ್ಕೆ ಜಿಪಂ ಉಪ ಕಾರ್ಯ ದರ್ಶಿ(ಅಭಿವೃದ್ಧಿ) ಭೀಮಪ್ಪ.ಕೆ.ಲಾಳಿ ಭೇಟಿ ನೀಡಿ ಪರಿಶೀಲಿಸಿದರು.

ಗ್ರಾಪಂಗೆ ಭೇಟಿ ನೀಡಿ 2025–26ನೇ ಸಾಲಿನ ಕ್ರಿಯಾ ಯೋಜನೆಯಲ್ಲಿರುವ ಕಾಮಗಾರಿಗಳ ಪಟ್ಟಿ ಹಾಗೂ 2022–23ನೇ ಸಾಲಿನಿಂದ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಮುಕ್ತಾಯ ವರದಿ ಹಾಕದೆಯೇ ಬಾಕಿ ಉಳಿಸಿಕೊಂಡಿರುವು ದರ ಕುರಿತು ಸಮಜಾಯಿಷಿ ಕೇಳಿದರು. ಜೊತೆಗೆ ಮುಕ್ತಾಯ ವರದಿ ಹಾಕಲು ಇರುವ ತಾಂತ್ರಿಕ ಸಮಸ್ಯೆ ಬಗೆಹರಿಸಿ ಪೂರ್ಣ ಗೊಂಡಿರುವ ಕಾಮಗಾರಿಗಳಿಗೆ ಮುಕ್ತಾಯ ವರದಿ ಹಾಕುವಂತೆ ತಾಕೀತು ಮಾಡಿದರು.

ಮರದೂರು ಗ್ರಾಪಂನಲ್ಲಿ ಮ–ನರೇಗಾ ದಿಂದ ಅನುಷ್ಠಾನಗೊಂಡಿರುವ ಸಂಜೀವಿನಿ ಘಟಕ ಮತ್ತು ಗೋದಾಮು ಸ್ಥಳಕ್ಕೆ ಭೇಟಿ ನೀಡಿ ಕೂಡಲೇ ಒಕ್ಕೂಟ ಮತ್ತು ರೈತರ ಬಳಕೆಗೆ ಒದಗಿಸುವಂತೆ ತಿಳಿಸಿದರು.

ಬಳಿಕ ಸಾಮಾಜಿಕ ಅರಣ್ಯ ಇಲಾಖೆ ಯಡಿ ನಡೆಸುತ್ತಿರುವ ನರ್ಸರಿ, ಹಗರನಹಳ್ಳಿ ಮತ್ತು ಶ್ರವಣಹಳ್ಳಿಯಲ್ಲಿ ಅನುಷ್ಠಾನ ಗೊಂಡಿರುವ ಸ್ಮಶಾನ ಅಭಿವೃದ್ಧಿ, ಬೂದು ನೀರು ನಿರ್ವಹಣೆ ಮತ್ತು ಕಾಮಗಾರಿ ಹಂತದಲ್ಲಿರುವ ನೀರುಗಾಲುವೆ ಅಭಿವೃದ್ಧಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೊತ್ತೇಗಾಲ ಗ್ರಾಪಂ ವ್ಯಾಪ್ತಿಯಲ್ಲಿ ರಸ್ತೆ ಬದಿ ನೆಡು ತೋಪಿನ 4ನೇ ವರ್ಷದ ಕಾಮಗಾರಿ ನಿರ್ವಹಣೆ, ಕಲ್ಯಾಣಿ ಅಭಿವೃದ್ಧಿ ಸ್ಥಳಕ್ಕೆ ಭೇಟಿ ನೀಡಿದರು. ಜೊತೆಗೆ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಲ್ಲೊಂದಾಗಿರುವ ಕೂಸಿನ ಮನೆಗೆ ಭೇಟಿ ನೀಡಿ, ಮಕ್ಕಳ ಲಾಲನೆ ಪಾಲನೆಗೆ ಯಾವುದೇ ತೊಡಕಾಗದಂತೆ ಅಚ್ಚುಕಟ್ಟಾಗಿ ಕೂಸಿನ ಮನೆ ನಿರ್ವಹಿಸಬೇಕೆಂದು ತಿಳಿಸಿದರು.

ಈ ವೇಳೆ ಜಿಪಂ ಸಹಾಯಕ ಯೋಜನಾಧಿಕಾರಿ ಶಿವಕುಮಾರ್, ನರೇಗಾ ಸಹಾಯಕ ನಿರ್ದೇಶಕ ಎಸ್.ಗಿರಿಧರ್, ತಾಂತ್ರಿಕ ಸಂಯೋಜಕ ಅರವಿಂದ್.ಎಂ, ಐಇಸಿ ಸಂಯೋಜಕ ಪುಷ್ಪ, ಪಿಡಿಒ ಧರ್ಮೇಂದ್ರ, ಮಂಜುನಾಥ್, ತಾಂತ್ರಿಕ ಅಭಿಯಂತರ ನಂದ, ಶ್ರೀನಿವಾಸ್, ಜೆ. ಮದನ್ ಸೇರಿದಂತೆ ಪಂಚಾಯಿತಿ ಸಿಬ್ಬಂದಿ ಉಪಸ್ಥಿತರಿದ್ದರು.

ಕೋಟೆಯಲ್ಲಿ ಅನ್ನಭಾಗ್ಯ ಅಕ್ಕಿ ವಶ



ಅನ್ನಭಾಗ್ಯ ಯೋಜನೆ ಅಕ್ಕಿಯನ್ನು ವಶಪಡಿಸಿಕೊಳ್ಳಲಾಯಿತು.

ಹೆಚ್.ಡಿ.ಕೋಟೆ, ಆ.22– ಗೂಡ್ಸ್ ಆಟೋದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಅನ್ನಭಾಗ್ಯ ಅಕ್ಕಿಯನ್ನು ತಹಸೀಲ್ದಾರ್ ಶ್ರೀನಿವಾಸ್, ಇನ್ಸ್‌ಪೆಕ್ಟರ್ ಗಂಗಾಧರ್, ಆಹಾರ ನಿರೀಕ್ಷಕ ಸಂದೀಪ್ ಹಾಗೂ ಅಧಿಕಾರಿಗಳ ತಂಡ ವಶಪಡಿಸಿಕೊಂಡಿರುವ ಘಟನೆ ತಾಲೂಕಿನ ಹ್ಯಾಂಡ್‌ಪೋಸ್ಟ್‌ನಲ್ಲಿ ನಡೆದಿದೆ.

ಇಲ್ಲಿನ ಲಿಂಗಣ್ಣ ಟ್ರೇಡರ್ಸ್‌ನಿಂದ ಅಕ್ರಮವಾಗಿ ಅನ್ನಭಾಗ್ಯ ಅಕ್ಕಿ ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಅಧಿಕಾರಿಗಳ ತಂಡ 50 ಪ್ಲಾಸ್ಟಿಕ್ ಚೀಲದಲ್ಲಿದ್ದ ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ. ಬಳಿಕ ಲಿಂಗಣ್ಣ ಟ್ರೇಡರ್ಸ್‌ಗೆ ತೆರಳಿದ ಅಧಿಕಾರಿಗಳ ತಂಡ ಪರಿಶೀಲನೆ ನಡೆಸಿತು. ಈ ಸಂಬಂಧ ಹೆಚ್.ಡಿ.ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಚಾಲಕ ಹಾಗೂ ಸಿಬ್ಬಂದಿಯನ್ನು ಬಂಧಿಸಿ ತನಿಖೆ ಕೈಗೊಳ್ಳಲಾಗಿದೆ. ಕಾರ್ಯಾಚರಣೆಯಲ್ಲಿ ಪೊಲೀಸ್ ಸಿಬ್ಬಂದಿಗಳಾದ ಯೋಗೇಶ್, ಸೈಯದ್ ಕಬೀರ್, ಆಹಾರ ಇಲಾಖೆಯ ಮಹಾದೇವ, ಸೋಮು ಇದ್ದರು.

ಅ.31, ನಂ.ಗೂಡಲ್ಲಿ ಭಗೀರಥ ಮಹರ್ಷಿ ಜಯಂತಿ



ಸುದ್ದಿಗೋಷ್ಠಿಯಲ್ಲಿ ಭಗೀರಥ ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಯೋಗೇಶ್ ಉಪ್ಪಾರ್ ಮಾತನಾಡಿದರು.

ನಂಜನಗೂಡು, ಆ.22– ನಗರದ ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ ಆ.31 ರಂದು ಭಗೀರಥ ಮಹರ್ಷಿ ಜಯಂತಿ ನಡೆಯಲಿದೆ ಎಂದು ಭಗೀರಥ ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಯೋಗೇಶ್ ಉಪ್ಪಾರ್ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಗೀರಥ ಮಹರ್ಷಿ ಜಯಂತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಚಾಮರಾಜನಗರ ಬೈಪಾಸ್ ರಸ್ತೆ ಬಳಿ 6 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುವ ತಾಲೂಕು ಭಗೀರಥ ಉಪ್ಪಾರ ಸಮುದಾಯ ಭವನಕ್ಕೆ ಗುದ್ದಲಿ ಪೂಜೆ ನೆರವೇರಿಸಲಿದ್ದಾರೆ ಎಂದರು.

ಅಂದು ಬೆಳಗ್ಗೆ 10.30ಕ್ಕೆ ಭಗೀರಥ ಜಯಂತಿ ಅಂಗವಾಗಿ ನಗರದ ಜೂನಿಯರ್ ಕಾಲೇಜು ಮೈದಾನದ ಮುಂಭಾಗದಿಂದ ಭಗೀರಥ ಮಹರ್ಷಿ ಭಾವಚಿತ್ರದ ಮೆರವಣಿಗೆಗೆ ಶಾಸಕ ದರ್ಶನ್ ಚಾಲನೆ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಉಪ್ಪಾರ ಸಂಘದ ರಾಜ್ಯಾಧ್ಯಕ್ಷರೂ ಆದ ಶಾಸಕ ಪುಟ್ಟರಂಗಶೆಟ್ಟಿ, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ, ಸಂಸದ ಸುನೀಲ್ ಬೋಸ್, ಎಂಎಲ್‌ಸಿ ಡಾ.ಯತೀಂದ್ರ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಲ್ಲಂಗಡಿ ಮಹದೇವಸ್ವಾಮಿ, ನಾಗರಾಜು, ಅಂಬಳೆ ಮಹದೇವಶೆಟ್ಟಿ, ಗಣೇಶ್ ಉಪ್ಪಾರ್, ಕೂಡ್ಲಳ್ಳಿ ಬಸವಶೆಟ್ಟಿ, ಶಿವಣ್ಣ, ಸಿದ್ದಣ್ಣ ಉಪಸ್ಥಿತರಿದ್ದರು.

ಇಂದು ವಿಜೃಂಭಣೆಯ ಚಿಕ್ಕ ಜಾತ್ರೆ

ಚುಂಚನಕಟ್ಟೆ, ಆ.22– ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಶ್ರೀರಾಮನ ದೇವಾಲಯದಲ್ಲಿ ಶ್ರಾವಣ ಮಾಸದ ಕೊನೆ ಶನಿವಾರ (ಆ.23) ಚಿಕ್ಕ ಜಾತ್ರೆ ವಿಜೃಂಭಣೆಯಿಂದ ನಡೆಯಲಿದೆ.

ಮುಂಜಾನೆಯಿಂದಲೇ ದೇವರಿಗೆ ವಿಶೇಷ ಪೂಜೆ, ಹೂವಿನ ಅಲಂಕಾರ, ಪಂಚಾಮೃತ ಅಭಿಷೇಕ ಸೇರಿದಂತೆ ನಾನಾ ಧಾರ್ಮಿಕ ಸೇವಾ ಕಾರ್ಯಗಳು ನಡೆಯಲಿದೆ. ಚಿಕ್ಕ ಜಾತ್ರೆ ಅಂಗವಾಗಿ ಶ್ರೀರಾಮನ ಚಿಕ್ಕ ರಥೋತ್ಸವಕ್ಕೆ ಬೆಳಗ್ಗೆ 11.15ಕ್ಕೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಲಿದ್ದಾರೆ. ಈ ಬಾರಿ 5 ಶ್ರಾವಣ ಶನಿವಾರ ಬಂದಿದ್ದು, ಕೊನೆ ಶ್ರಾವಣ ಶನಿವಾರ ಅಮಾವಾಸ್ಯೆಯಾಗಿರುವ ಹಿನ್ನಲೆಯಲ್ಲಿ ಪೂಜೆಗೆ ಶ್ರೇಷ್ಠವಾಗಿರುವುದರಿಂದ ರಾಜ್ಯದ ವಿವಿಧೆಡೆಗಳಿಂದ ಆಗಮಿಸುವ ಭಕ್ತರ ಅನುಕೂಲಕ್ಕಾಗಿ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಶ್ರೀರಾಮ ದೇವಾಲಯದ ಪರಿಚಾರಕ ವಾಸುದೇವನ್ ತಿಳಿಸಿದ್ದಾರೆ. ಈ ವೇಳೆ ತಹಶೀಲ್ದಾರ್ ರುಕಿಯಾ ಬೇಗಂ, ಉಪ ತಹಸೀಲ್ದಾರ್ ಮಹೇಶ್, ಪಾರುಪತ್ತೇಗಾರ ಯತಿರಾಜ್ ಮತ್ತಿತರರು ಭಾಗವಹಿಸುವರು ಎಂದರು.

ಇಂದು ಶ್ರೀಶನೇಶ್ವರ ಪೂಜಾ ಮಹೋತ್ಸವ

ಕಂಪಲಾಪುರ, ಆ.22– ಇಲ್ಲಿಗೆ ಸಮೀಪದ ಹುನುಗನಹಳ್ಳಿ (ಹೊನ್ನೇಕೊಪ್ಪಲು) ಶ್ರೀಶನೇಶ್ವರ ದೇವಸ್ಥಾನದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಪಂಚಮುಖಿ ಆಂಜನೇಯಸ್ವಾಮಿ, ವಿಘ್ನೇಶ್ವರ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಡೇ ಶ್ರಾವಣ ಪ್ರಯುಕ್ತ ಶ್ರೀಶನೇಶ್ವರ ಪೂಜಾ ಮಹೋತ್ಸವ ಆ.23 ರಂದು ನಡೆಯಲಿದೆ.

ಅಂದು ಬೆಳಗ್ಗೆ ಸ್ವಾಮಿಗೆ ಅಭಿಷೇಕ, ಹೋಮ ಹವನ ನಡೆಯಲಿದ್ದು ಮಧ್ಯಾಹ್ನ 12 ಗಂಟೆಗೆ ಮಹಾ ಮಂಗಳಾರತಿ, ರಾತ್ರಿ 9 ಗಂಟೆಗೆ ಭಕ್ತರಿಂದ ಶ್ರೀಶನಿ ಪ್ರಭಾವ ಅಥವಾ ರಾಜಾವಿಕ್ರಮವಿಜಯ ಕಥಾಕಲಾಕ್ಷೇಪ ಏರ್ಪಡಿಸಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕು ಎಂದು ಗುಡ್ಡಪ್ಪ ಮಂಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿ, ತಂತ್ರಜ್ಞಾನ ಪ್ರೇರಣಾ ತರಬೇತಿ



ಮೂಗೂರು ಶಾಲೆಯಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ಪ್ರೇರಣಾ ತರಬೇತಿ ನಡೆಯಿತು.

ಮೂಗೂರು, ಆ.22– ಇಲ್ಲಿನ ಕೆಪಿಎಸ್ ಪ್ರೌಢಶಾಲಾ ವಿಭಾಗದಲ್ಲಿ ಎನ್‌ಎಸ್‌ಕ್ಯೂಎಫ್ ವತಿಯಿಂದ ಮಾಹಿತಿ ಮತ್ತು ತಂತ್ರಜ್ಞಾನ ಪ್ರೇರಣಾ ತರಬೇತಿ ಆಯೋಜಿಸಲಾಗಿತ್ತು.

ಕ್ಷೇತ್ರ ಸಂಪನ್ಮೂಲ ಅಧಿಕಾರಿ ನಾಗೇಶ್ ಮಕ್ಕಳಿಗೆ ಮಾಹಿತಿ ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡಿದರು. ಮೈಸೂರಿನ ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆ ಸಹ ಶಿಕ್ಷಕ ಜಿ.ಮಹೇಶ್ ವೃತ್ತಿ ಮಾರ್ಗದರ್ಶನದ ಬಗ್ಗೆ ಮಕ್ಕಳಿಗೆ ವಿಚಾರ ತಿಳಿಸಿದರು. ಈ ವೇಳೆ ಉಪ ಪ್ರಾಂಶುಪಾಲ ಸಿ.ಪುಟ್ಟಸ್ವಾಮಿ ಮತ್ತು ಪ್ರೌಢಶಾಲೆ ಶಿಕ್ಷಕ ವೃಂದ ಇದ್ದರು.


ವಾಹನ ಚಾಲಕರ ಸಂಘದಿಂದ ಸ್ವಾತಂತ್ರ್ಯ ದಿನಾಚರಣೆ



ಸರಗೂರಿನ ವಾಹನ ಚಾಲಕರ ಸಂಘದಿಂದ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಅಧ್ಯಕ್ಷ ಚಿಕ್ಕಣ್ಣ, ಗೌರವಾಧ್ಯಕ್ಷ ಎಸ್.ಹೆಚ್.ಲಿಂಗರಾಜು, ಉಪಾಧ್ಯಕ್ಷ ಕಾಳನಾಯಕ, ಪ್ರಧಾನ ಕಾರ್ಯದರ್ಶಿ ನಾಗೇಶ್, ಕಾರ್ಯದರ್ಶಿ ರವಿ, ಖಜಾಂಚಿ ಎಸ್.ಟಿ.ರವಿ. ನಿರ್ದೇಶಕರಾದ ಶಶಿ, ಸಿ.ವೆಂಕಟೇಶ್, ಗೋವಿಂದ, ಎಂ.ನಾಗರಾಜು, ನಾಗೇಶ್, ಬೆಟ್ಟನಾಯಕ, ಚಾಮರಾಜು, ಮಹದೇವನಾಯಕ, ನರಸಿಂಹ, ತನು, ಚಿಕ್ಕಣ್ಣ ಇತರರಿದ್ದರು.

ನಿಧನ

ಸಿದ್ದರಾಮೇಗೌಡ



ಹೆಚ್.ಡಿ.ಕೋಟೆ, ಆ.22– ತಾಲೂಕಿನ ಹೊಸತೋರಹಳ್ಳಿ ಗ್ರಾಮದ ನಿವಾಸಿ ಸಿದ್ದರಾಮೇಗೌಡ(85) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದ ಸಾರ್ವಜನಿಕ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

ಕೆ.ಎಂ.ಲೋಕೇಶ್



ಚುಂಚನಕಟ್ಟೆ, ಆ.22– ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ ನೌಕರರ ಸಂಘದ ಮಾಜಿ ಅಧ್ಯಕ್ಷ, ಪಿರಿಯಾಪಟ್ಟಣ ತಾಲೂಕಿನ ಕಿತ್ತೂರು ಡಿ.ಜಿ.ಕೊಪ್ಪಲು ಗ್ರಾಮದ ನಿವಾಸಿ ಕೆ.ಎಂ.ಲೋಕೇಶ್ (68) ಶುಕ್ರವಾರ ನಿಧನರಾದರು.

ಮೃತರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಸ್ವಗ್ರಾಮದಲ್ಲಿ ಶನಿವಾರ ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮನಿಯಮ್ಮ



ತಿ.ನರಸೀಪುರ, ಆ.22– ತಾಲೂಕಿನ ಕರೋಹಟ್ಟಿ ಗ್ರಾಮದ ನಿವಾಸಿ ಮನಿಯಮ್ಮ(85) ಶುಕ್ರವಾರ ಮುಂಜಾನೆ ನಿಧನರಾದರು. ಮೃತರು ತಾಲೂಕು ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಕರೋಹಟ್ಟಿಯಲ್ಲಿ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮರಡೀಪುರದಲ್ಲಿ ಸ್ವಚ್ಛತೆ, ಪ್ಲಾಸ್ಟಿಕ್ ಬಳಕೆ ನಿಷೇಧ ಕುರಿತು ಅರಿವು



ಮೈಸೂರಿನ ಟೆರಿಷಿಯನ್ ಕಾಲೇಜು ವಿದ್ಯಾರ್ಥಿನಿಯರು ಪ್ಲಾಸ್ಟಿಕ್ ಬಳಕೆ ನಿಷೇಧ ಕುರಿತು ಜಾಗೃತಿ ಮೂಡಿಸಿದರು.

ತಿ.ನರಸೀಪುರ, ಆ.22– ತಾಲೂಕಿನ ಮರಡೀಪುರದಲ್ಲಿ ಸಾರ್ವಜನಿಕರಲ್ಲಿ ಸ್ವಚ್ಛತೆ ಹಾಗೂ ಪ್ಲಾಸ್ಟಿಕ್ ಬಳಕೆ ನಿಷೇಧ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಮೈಸೂರಿನ ಟೆರಿಷಿಯನ್ ಕಾಲೇಜಿನ ವಿದ್ಯಾರ್ಥಿಗಳು ಚಾಲನೆ ನೀಡಿದರು.

ಗ್ರಾಮದ ಶ್ರೀಮರುಡೇಶ್ವರಸ್ವಾಮಿ ದೇವಸ್ಥಾನದ ಸುತ್ತಮುತ್ತ ಪ್ಲಾಸ್ಟಿಕ್ ತೆರವುಗೊಳಿಸುವ ಮೂಲಕ ಆವರಣ ಸ್ವಚ್ಛಗೊಳಿಸಿ ಪ್ಲಾಸ್ಟಿಕ್‌ನಿಂದ ಆಗುವ ದುಷ್ಪರಿಣಾಮದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಿದರು. ಅಲ್ಲದೇ ವಿದ್ಯಾರ್ಥಿನಿಯರು ಹಾಗೂ ಉಪನ್ಯಾಸಕರು ತ್ಯಾಜ್ಯವನ್ನು ಒಂದೆಡೆ ಶೇಖರಣೆ ಮಾಡಿ ಪ್ಲಾಸ್ಟಿಕ್ ತ್ಯಜಿಸುವ ಪ್ರತಿಜ್ಞೆ ಕೈಗೊಂಡರು. ಜೆಡಿಎಸ್ ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ ಮಾತನಾಡಿ, ಪ್ಲಾಸ್ಟಿಕ್ ಆರೋಗ್ಯಕ್ಕೆ ಹಾನಿಕಾರಕ. ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ನಾಶವಾಗುತ್ತದೆ. ಅಲ್ಲದೇ ಪ್ರಾಣಿ ಸಂಕುಲದ ಮೇಲೂ ಪರಿಣಾಮ ಬೀರುತ್ತಿದೆ. ಪ್ಲಾಸ್ಟಿಕ್ ಬಳಸದಂತೆ ಸಾರ್ವಜನಿಕರಿಗೆ ಅರಿವು ಮೂಡಿಸುತ್ತಿದ್ದರೂ ಬಳಕೆ ಪ್ರಮಾಣ ಮಾತ್ರ ಕಡಿಮೆಯಾಗಿಲ್ಲ. ಹೀಗಾಗಿ ಪರಿಸರ ಸಂರಕ್ಷಣೆ ದೃಷ್ಟಿಯಿಂದ ಪ್ಲಾಸ್ಟಿಕ್ ಬಳಸದಿರುವಂತೆ ಸಾರ್ವಜನಿಕರಲ್ಲಿ ಹೆಚ್ಚು ಅರಿವು ಮೂಡಿಸಬೇಕಿದೆ. ತಿ.ನರಸೀಪುರ ತಾಲೂಕು ಸ್ವಚ್ಛಂದವಾದ ಪರಿಸರ ಹೊಂದಿದ್ದು, ತಾಲೂಕನ್ನು ಸದಾ ಸ್ವಚ್ಛ ಪಟ್ಟಣವೆಂದು ಎಂದು ಕರೆಯುವಂತಾಗಬೇಕು. ಅದಕ್ಕಾಗಿ ತಾಲೂಕಿನ ಜನರು ತಮ್ಮ ಸುತ್ತಲಿನ ಪ್ರದೇಶ ಶುಚಿಯಾಗಿಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.

ಟೆರಿಷಿಯನ್ ಕಾಲೇಜಿನ ರಸಾಯನ ಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಎನ್.ವಿ. ಪ್ರಸಾದ್ ಮಾತನಾಡಿ, ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಪರಿಸರ ಸ್ನೇಹಿ ರೀತಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಿಸಲು ಮೊದಲ ಬಾರಿಗೆ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳು–2016 ಅನ್ನು ಹೊರ ತಂದಿದೆ. ಈ ನಿಯಮಗಳ ಪ್ರಕಾರ 50 ಮೈಕ್ರಾನ್‌ಗಳಿಗಿಂತ ಕಡಿಮೆ ದಪ್ಪದ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳನ್ನು ನಿಷೇಧಿಸಲಾಗಿದೆ. ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳನ್ನು ಸಹ ನಿಷೇಧಿಸಲಾಗಿದೆ. ಹೀಗಾಗಿ ಸಾರ್ವಜನಿಕರಲ್ಲಿ ಪ್ಲಾಸ್ಟಿಕ್ ಬಳಕೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ಕಾಲೇಜಿನಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹೀಗಾಗಿ ಸಾರ್ವಜನಿಕರು ಪ್ಲಾಸ್ಟಿಕ್ ಬಳಸದೇ ಪರಿಸರ ಸ್ನೇಹಿ ಬಟ್ಟೆಯಿಂದ ತಯಾರಾದ ವಸ್ತುಗಳನ್ನು ಬಳಸಬೇಕು ಎಂದು ಮನವಿ ಮಾಡಿದರು. ಹೆಮ್ಮಿಗೆ ಪಿಡಿಒ ಚಿದಾನಂದ್, ಸಹ ಪ್ರಾಧ್ಯಾಪಕರಾದ ಡಾ.ಎನ್. ಅಶ್ವಿನಿ, ಡಾ.ಜಿ.ಶೃತಿ, ಮಹೇಶ್ ಹಾಜರಿದ್ದರು.

ಶರಣ ಚಳವಳಿ ಮೇಲೆ ಬುದ್ಧ ಧಮ್ಮದ ಪ್ರಭಾವವಿದೆ

•ಹಿರಿಯ ಸಾಹಿತಿ ಪ್ರೊ॥ ಅರವಿಂದ ಮಾಲಗತ್ತಿ ಅಭಿಮತ •ವೈರಾಗ್ಯನಿಧಿ ಅಲ್ಲಮಪ್ರಭು ಸಚಿತ್ರ ಕಥಾ ಪುಸ್ತಕ ಲೋಕಾರ್ಪಣೆ

ಮೈಸೂರು,ಆ.22(ಎಂಟಿವೈ)– ಶರಣ ಚಳುವಳಿಗೆ ಬುದ್ಧ ಧಮ್ಮದ ಪ್ರಭಾವವಿದ್ದು, ಬೌದ್ಧ ಮತ್ತು ಶರಣ ಚಳುವಳಿ 20ನೇ ಶತಮಾನದಲ್ಲಿ ರಚನೆಯಾದ ಸಂವಿಧಾನಕ್ಕೂ ಸಂವಾದಿಯಾಗಿದೆ ಎಂದು ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ಅಗ್ರಹಾರದಲ್ಲಿರುವ ನಟರಾಜ ಸಭಾ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ವೈರಾಗ್ಯನಿಧಿ ಅಲ್ಲಮಪ್ರಭು ಸಚಿತ್ರಕಥಾ' ಪುಸ್ತಕವನ್ನು ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಲೋಕಾರ್ಪಣೆ ಮಾಡಿದರು.

ಮೈಸೂರಿನ ಅಗ್ರಹಾರದಲ್ಲಿರುವ ನಟರಾಜ ಸಭಾ ಭವನದಲ್ಲಿ ಶರಣ ಜ್ಯೋತಿ ಪ್ರಸಾರಾಂಗ, ಶ್ರೀನಟರಾಜ ಪ್ರತಿಷ್ಠಾನ, ಶ್ರೀಹೊಸಮಠ, ಶ್ರೀನಟರಾಜ ಬಾಲಕಿಯರ ಪದವಿಪೂರ್ವ ಕಾಲೇಜು ಮತ್ತು ಮೈಸೂರು ಆರ್ಟ್ ಗ್ಯಾಲರಿ ವತಿಯಿಂದ ಶುಕ್ರವಾರ ಆಯೋಜಿಸಿದ್ದ ವೈರಾಗ್ಯನಿಧಿ ಅಲ್ಲಮಪ್ರಭು ಸಚಿತ್ರಕಥಾ ಪುಸ್ತಕ ಲೋಕಾರ್ಪಣೆ, ಚಿದಾನಂದ ಸ್ವಾಮೀಜಿ 75ನೇ ವರ್ಷದ ಅಮೃತ ಮಹೋತ್ಸವ ಅಂಗವಾಗಿ ಬಸವಣ್ಣರ ಭಾವಚಿತ್ರ ಅಂತರ ಶಾಲಾ ವರ್ಣವಿನ್ಯಾಸ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಬೌದ್ಧ ಧರ್ಮದ ಪ್ರತೀಕವಾಗಿ ಶರಣಧರ್ಮ ಪ್ರತಿನಿಧಿತ್ವ ವಹಿಸುತ್ತದೆ. ಶರಣ ಚಳವಳಿಯಲ್ಲಿ ಪ್ರಭುದೇವರೆ ಪ್ರಧಾನ. ಕನ್ನಡಕೊಬ್ಬರೇ ಅಲ್ಲಮ. ಕನ್ನಡಕ್ಕೆ ತಂದುಕೊಟ್ಟ ಕೀರ್ತಿ ಅತ್ಯಂತ ದೊಡ್ಡದು. ಬೆಡಗಿನ ವಚನಗಳು ಕನ್ನಡದ ಭಾಷಾ ಶ್ರೀಮಂತಿಕೆ, ಸತ್ವ ಬಿಡಿಸಿದ ತೋರಿಸಿದ ಮೊದಲಿಗ. ಬಸವಣ್ಣನದು ಜ್ಞಾನಮಾರ್ಗವಾದರೆ ಅಲ್ಲಮಪ್ರಭುಗಳದು ಜ್ಞಾನ ಮಾರ್ಗ ಎಂದು ತಿಳಿಸಿದರು.

ಆರಂಭದಲ್ಲಿ ವಿದ್ವಾಂಸ ಪ್ರೊ.ಎಂ.ಎಂ. ಕಲಬುರ್ಗಿ ಅವರು ಬೌದ್ಧ ಧರ್ಮದ ವಿಚಾರವಾಗಿ ಕುರಿತು ಟೀಕೆ ಮಾಡುತ್ತಾರೆ. ಕೊನೆ ಕೊನೆಯ ಬರಹಗಳಲ್ಲಿ ಬಸವಣ್ಣ ಬೌದ್ಧನ ಪ್ರತಿನಿಧಿತ್ವ ವಹಿಸುತ್ತಾನೆ ಎಂದಿದ್ದಾರೆ. ಆದರೆ, ಬಸವಣ್ಣ ಯಥಾವತ್ತಾಗಿ ಬುದ್ಧನ ತತ್ವವನ್ನು ತರದೇ ಹೊಸ ವಿಚಾರವನ್ನು ಬೆಳೆಸಿದ್ದಾರೆ. ಬಸವಣ್ಣ ಬುದ್ಧನ ಮೀರಿ ಹೇಳಿದ ತತ್ವಗಳು ಕಾಯಕ, ದಾಸೋಹವಾಗಿದೆ. ಕಾಮ–ದೇಹ, ಹುಟ್ಟು–ಸಾವು ಕುರಿತು ಆದಿ ಚಿಂತನೆಯಿಂದ ಇವತ್ತಿನ ತನಕವೂ ಜಿಜ್ಞಾಸೆ ನಡೆದಿದೆ. ಶರಣ ಚಳವಳಿಯ ಅಲ್ಲಮಪ್ರಭು ಮುಕ್ತಾಯಕ್ಕ, ಅಕ್ಕ ಮಹಾದೇವಿ, ಬೌದ್ಧ ಅನುಯಾಯಿಗಳಾದ ಪಸೇನದಿ, ಕೇಮ, ಸೋಮ ಮುಂತಾದವರ ಚರ್ಚೆಗಳಲ್ಲಿ ಸಾಮ್ಯತೆ ಇದೆ. ಬೌದ್ಧ ಮತ್ತು ಶರಣರು ಏಕೋಭಾವನೆಯಿಂದ ಚಿಂತನೆ ನಡೆಸದೇ ವಾಸ್ತವತೆಗೆ ಪ್ರಾಧ್ಯಾನತೆ ಕೊಡುವುದರಲ್ಲಿ ಸಾಮ್ಯತೆ ಇದೆ ಎಂದು ಹೇಳಿದರು.

ಶರಣ ಚಳವಳಿಗೆ ಬುದ್ಧ ಧಮ್ಮದ ಪ್ರಭಾವ ಇದೆ. ಬೌದ್ಧ ಮತ್ತು ಶರಣ ಚಳವಳಿ 20ನೇ ಶತಮಾನದಲ್ಲಿ ರಚನೆಯಾದ ಸಂವಿಧಾನಕ್ಕೂ ಸಂವಾದಿಯಾಗಿದೆ. ಶರಣ ಚಳವಳಿಯು ನಡೆದಾಡುವ ಶವದಂತಿದ್ದ ಶೂದ್ರ ವರ್ಗಕ್ಕೆ ಜೀವ ತುಂಬುವ ಕೆಲಸ ಮಾಡಿತು. ಶೂನ್ಯ ಸಿಂಹಾಸನದ ಮೇಲೆ ಕುಳಿತ ಅಲ್ಲಮಪ್ರಭುಗಳು ವರ್ತಮಾನದ ಸಮಸ್ಯೆಗಳ ಬಗೆಹರಿಸುವ ಸಾಮರ್ಥ್ಯ ಇತ್ತು ಎಂದು ಬಸವಣ್ಣ ಹೇಳಿದ್ದಾರೆ ಎಂದರು.

ಎಲ್.ಶಿವಲಿಂಗಪ್ಪ ದ್ವಿಭಾಷಿ ಲೇಖಕರು. ಬಾಲಕರಿಂದ ವಯಸ್ಕರು ಓದುವಂತೆ ಅಲ್ಲಮಪ್ರಭುಗಳ ಬಗ್ಗೆ ಬರೆದಿದ್ದಾರೆ. ವಿದ್ವತ್ ಕೃತಿಯಲ್ಲದೇ ಮಧ್ಯಂತರ ಸ್ವರೂಪದ ಕೃತಿಯಾಗಿದೆ. ಚಾಮರಸ, ಹರಿಹರ, ಶೂನ್ಯ ಸಂಪಾದನೆಗಳ ಕೃತಿಗಳನ್ನು ಅಧ್ಯಯನ ಮಾಡಿಯೂ ಪವಾಡತ್ಮಕ ಸಂಗತಿಗಳನ್ನು ಕಳಚಿ ವಾಸ್ತವ ಸಂಗತಿಯನ್ನು ಬರೆದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ಅಂತರ ಶಾಲಾ ವರ್ಣ ವಿನ್ಯಾಸ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿ, ಮೊಬೈಲ್, ಟಿವಿಗಳಿಗೆ ದಾಸರಾಗಿರುವ ಮಕ್ಕಳು ಓದುವುದು ಕಡಿಮೆಯಾಗಿದೆ. ಸಮಾಜದ ಎಲ್ಲ ಸಮಸ್ಯೆಗಳಿಗೆ ಬುದ್ಧ, ಬಸವ, ಅಂಬೇಡ್ಕರ್ ಅವರಲ್ಲಿ ಉತ್ತರವಿದೆ. ಸಮಾನತೆ, ಸಹಬಾಳ್ವೆ, ಕಾಯಕ ವಚನಕಾರರ ಸಂದೇಶವನ್ನು ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಹೊಸಮಠದ ಶ್ರೀಚಿದಾನಂದ ಸ್ವಾಮೀಜಿ ಸಾನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಲೇಖಕ ಎಲ್.ಶಿವಲಿಂಗಪ್ಪ ಮಾತನಾಡಿದರು. ಶ್ರೀನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ಡಾ.ಜಮುನಾ ರಾಣಿ ಮಿರ್ಲೆ, ಪ್ರಾಂಶುಪಾಲರಾದ ಸುನೀತರಾಣಿ ವಿ.ಡಿ. ಇದ್ದರು. ಚೂಡಾಮಣಿ ವಚನ ಹಾಡಿದರು. ಉಪನ್ಯಾಸಕಿ ವಿಮಲಜ್ಯೋತಿ ಎಚ್.ಬಿ ನಿರೂಪಿಸಿದರು. ಆರ್.ರಾಧ ವಂದಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಇಂದ್ರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕೂಲಿ (ಕ) + ಕೂಲಿ (ತ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವಾರ್ –2 (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ವಾರ್–2 (ತೆ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಹಚ್ಚೆ (ಕ) + ವಾರ್–2 (ತೆ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಜಸ್ಟ್ ಮ್ಯಾರಿಡ್ (ಕ) + ಕಮರೊ2 (ಕ)	2+2 ಪ್ರದರ್ಶನಗಳು

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಹಕಾರ ಸಂಘಗಳಿಗೆ ನಾಮನಿರ್ದೇಶನ ವಿಚಾರವಾಗಿ ಜಿಟಿಡಿ ವಿರುದ್ಧ ಪ್ರತಿಭಟನೆ



ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿ ಮೈಸೂರು ವಿವಿ ಸಂಶೋಧಕರ ಸಂಘದ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಆ.22(ಎಂಕೆ)– ಸಹಕಾರ ಸಂಘ–ಸಂಸ್ಥೆಗಳಿಗೆ ಹೊಸದಾಗಿ 3 ಜನರ ನಾಮ ನಿರ್ದೇಶನ ಸಂಬಂಧ ಶಾಸಕ ಜಿ.ಟಿ. ದೇವೇಗೌಡರ ನಡೆ ಖಂಡಿಸಿ ಮೈಸೂರು ವಿವಿ ಸಂಶೋಧಕರ ಸಂಘದ ವತಿಯಿಂದ ಶುಕ್ರವಾರ ದಿಢೀರ್ ಪ್ರತಿಭಟನೆ ನಡೆಸಲಾಯಿತು.

ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಜಮಾಯಿಸಿದ ಪ್ರತಿಭಟನಾಕಾರರು ಶಾಸಕ ಜಿ.ಟಿ.ದೇವೇಗೌಡರ ವಿರುದ್ಧ ದಿಕ್ಕಾರ ಕೂಗಿ, ಭಾವಚಿತ್ರ ಹರಿದು ಅಸಮಾದಾನ ಹೊರಹಾಕಿದರು.

ರಾಜ್ಯ ಸರ್ಕಾರವು ಸಹಕಾರ ಕಾಯ್ದೆಗೆ ಕೆಲ ತಿದ್ದುಪಡಿ ತಂದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮಹಿಳೆಯೊಬ್ಬರು ಸೇರಿ 3 ಜನರನ್ನು ಹೊಸದಾಗಿ ನಾಮ ನಿರ್ದೇಶನ ಮಾಡುವುದನ್ನು ಸಹಿಸದ ಜಿ.ಟಿ.ದೇವೇಗೌಡರು ಹಾಗೂ ಜಿ.ಡಿ.ಹರೀಶ್‌ಗೌಡರನ್ನು ಶಾಸಕ ಸ್ಥಾನದಿಂದ ಅಮಾನತು ಮಾಡಬೇಕು. ಸಹಕಾರ ಕೇತ್ರಕ್ಕೆ ದಲಿತರು ಬೇಡ ಎನ್ನುವವರಿಗೆ ದಲಿತರ ವೋಟು ಬೇಡವೇ ಎಂದು ವ್ಯಂಗ್ಯವಾಡಿದರು.

ಪ್ರತಿಭಟನೆಯಲ್ಲಿ ಮೈಸೂರು ವಿವಿ ಸಂಶೋಧಕರ ಸಂಘದ ಉಪಾಧ್ಯಕ್ಷರಾದ ಮಲ್ಲೇಶ್, ಪ್ರದೀಪ್ ಮುಮ್ಮಡಿ, ನವೀನ್ ಕುಮಾರ್, ವಿಶ್ವಪ್ರಸಾದ್, ಕಿರಣ್ ಯುವರಾಜ, ಕೃಷ್ಣಮೂರ್ತಿ, ಶೇಷಣ್ಣ ಮತ್ತಿತರರಿದ್ದರು.

ಮೈಸೂರಲ್ಲಿ ಬಿಎಸ್ಸಿ ಅರಣ್ಯ ಪದವಿ ಕಾಲೇಜು ಆರಂಭಕ್ಕೆ ವಿವೇಕಾನಂದ ಪರಿಷತ್‌ನಲ್ಲಿ ಪ್ರಸ್ತಾಪ

ಮೈಸೂರು, ಆ.22(ಎಂಕೆ)– ಮೈಸೂರು ವಿಭಾಗದಲ್ಲಿ 'ಬಿಎಸ್ಸಿ–ಅರಣ್ಯ' ವಿಷಯ ಕುರಿತ ಕಾಲೇಜನ್ನು ಆರಂಭಿಸುವಂತೆ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಪ್ರಸ್ತಾಪಿಸಿದ್ದಾರೆ. ವಿಧಾನ ಪರಿಷತ್‌ನಲ್ಲಿ ಈ ಕುರಿತು ವಿಷಯ ಮಂಡಿಸಿದ ಅವರು, ಚಾಮರಾಜನಗರ, ಮೈಸೂರು, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ ಹೆಚ್ಚಿನ ರೀತಿಯ ಅರಣ್ಯ ಪ್ರದೇಶವಿರುವುದರಿಂದ ವಿದ್ಯಾರ್ಥಿಗಳ ಅನುಕೂಲತೆಗಾಗಿ 'ಬಿಎಸ್ಸಿ–ಅರಣ್ಯ(Bsc-forestry)' ಕಾಲೇಜನ್ನು ಆರಂಭಿಸಬೇಕು ಎಂದರು.



ವನ್ಯ ಜೀವಿಗಳ–ಸಸ್ಯ ಪ್ರಭೇದಗಳ ಅಧ್ಯಯನ ನಡೆಸಲು, ಕಾಲೇಜು ಆರಂಭಿಸಿದರೆ ಹಲವು ವಿದ್ಯಾರ್ಥಿಗಳಿಗೆ ಅನುಕೂಲವಾಗುವುದಲ್ಲದೆ 6 ತಿಂಗಳ ಅಧ್ಯಯನದ ವೇಳೆ ಕಾಡಿನ ಪರಿವೀಕ್ಷಕರಾಗಿ ನೇಮಿಸುವುದರಿಂದ ಸರ್ಕಾರಕ್ಕೆ ಆರ್ಥಿಕ ಉಳಿತಾಯವಾಗುತ್ತದೆ. ಆದ್ದರಿಂದ ಕಾಲೇಜು ಆರಂಭಿಸುವಂತೆ ಕೃಷಿ ಸಚಿವ ಚಲುವರಾಯಸ್ವಾಮಿ ಅವರಲ್ಲಿ ಮನವಿ ಮಾಡಿದರು. ಈ ಕುರಿತು ಪ್ರತಿಕ್ರಿಯಿಸಿದ ಕೃಷಿ ಮಂತ್ರಿಗಳು, ಈ ವಿಚಾರವನ್ನು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಪರಿಗಣಿಸಲಾಗುವುದೆಂದು ತಿಳಿಸಿದ್ದಾರೆ.

ಮೈಸೂರನ್ನು ಸ್ಮಾರ್ಟ್, ಹಸಿರು, ಸ್ವಚ್ಛ ನಗರವಾಗಿಸಲು 'ಐಡಿಯಾಥಾನ್–ಮೈಸೂರು ವಿಷನ್ 2030'

ಸಾರ್ವಜನಿಕರು ಪಾಲ್ಗೊಂಡು ಐಡಿಯಾಗಳನ್ನು ನೀಡಿ ಬಹುಮಾನ ಗೆಲ್ಲಬಹುದು

ಮೈಸೂರು, ಆ.22(ಜಿಎ)–ಮೈಸೂರಿನ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಮೈಸೂರಿಗರು 'ಐಡಿಯಾಥಾನ್–ಮೈಸೂರು ವಿಷನ್ 2030' ವಿಭಿನ್ನ ಐಡಿಯಾಗಳನ್ನು ನೀಡುವ ಮೂಲಕ ಮೈಸೂರನ್ನು ಸ್ಮಾರ್ಟ್, ಹಸಿರು, ಸ್ವಚ್ಛ ಸೇರಿದಂತೆ ಎಲ್ಲಾ ವಿಭಾಗದಲ್ಲಿಯೂ ಪುನರ್ ನಿರ್ಮಾಣ ಮಾಡಲು ಕೈಜೋಡಿಸಿ ನಗದು ಬಹುಮಾನವನ್ನು ಪಡೆಯಲು ಅವಕಾಶ ಕಲ್ಪಿಸುತ್ತಿದೆ ಎಂದು ಕಲಿಸು ಫೌಂಡೇಷನ್ ಸಂಸ್ಥಾಪಕ ಎಂ.ಎಂ.ನಿಖಿಲೇಶ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ 'ಐಡಿಯಾಥಾನ್–ಮೈಸೂರು ವಿಷನ್ 2030' ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ನೇತೃತ್ವದಲ್ಲಿ ಭೇರುಂಡ, ಕಲಿಸು ಫೌಂಡೇಷನ್ ಮತ್ತು ಯಂಗ್ ಇಂಡಿಯಾ ವತಿಯಿಂದ ವಿಕಸಿತ ಭಾರತ 2047ರ ಭಾಗವಾಗಿ 'ಐಡಿಯಾಥಾನ್–ಮೈಸೂರು ವಿಷನ್ 2030' ಆರಂಭಿಸಿದ್ದು, ಇಂದಿನಿಂದ ಚಾಲನೆಗೊಂಡಿದೆ ಎಂದರು.

ಮೈಸೂರಿನಲ್ಲಿರುವ ವಿದ್ಯಾರ್ಥಿಗಳು, ಉದ್ಯಮಿಗಳು ಎನ್‌ಜಿಒ, ಮತ್ತು ನಾಗರಿಕರು ಪಾಲ್ಗೊಳಲು ಅವಕಾಶ ಕಲ್ಪಿಸಲಾಗಿದ್ದು, ಮೈಸೂರಿನ ಅಭಿವೃದ್ಧಿಗೆ ಎಲ್ಲರೂ ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳುವ ಮೂಲಕ 2030ರ ಭವಿಷ್ಯದ ಮೈಸೂರಿನ ಪ್ರಾತಿಗೆ ಸಾಗೋಣ ಎಂದು ಅವರು ತಿಳಿಸಿದರು.

ಇದು ಕಾರ್ಯಕ್ರಮವಲ್ಲ. ಜನರಿಂದ ಜನರಿಗಾಗಿ ಮಾಡಿರುವ ವಿಭಿನ್ನ ಪ್ರಯತ್ನವಾಗಿದ್ದು, ಮೂಲಸೌಕರ್ಯ, ಸ್ಥಿರತೆಯ ಅಭಿವೃದ್ಧಿ, ಪರಂಪರಿಕ ಕಟ್ಟಡಗಳ ಸಂರಕ್ಷಣೆ, ಇ–ಆಡಳಿತ, ಯುವಶಕ್ತಿ ವಿಕಸನ ಸೇರಿದಂತೆ ಹೊಸ ಕ್ಷೇತ್ರಗಳಲ್ಲಿ ಹೊಸದಾದ ಸೃಜನಾತ್ಮಕ ಆಲೋಚನೆಗಳನ್ನು ಆಹ್ವಾನಿಸುತ್ತಿದ್ದೇವೆ. ಸುಲಭವಾಗಿ ನಿಮ್ಮ ಐಡಿಯಾಗಳನ್ನು ಆಸಕ್ತರು ತಮ್ಮ ತಮ್ಮ ಚಿಂತನೆಗಳನ್ನು ಸಲ್ಲಿಸಬಹುದು ಎಂದು ತಿಳಿಸಿದರು.

http://mymysure: vision2030.in ವೆಬ್‌ಸೈಟ್‌ಗೆ ಭೇಟಿ ನೀಡಿ ನಿಯಮಗಳನ್ನು ಓದಿಕೊಂಡು ನಂತರ ಕೆಳಗಿರುವ ಮಾಹಿತಿಗಳನ್ನು ಭರ್ತಿ ಮಾಡಬೇಕು. ತಮ್ಮ ಐಡಿಯಾವನ್ನು ಪಿಡಿಎಫ್, ವಿಡಿಯೋ, ಫೋಟೋ ಜೊತೆಗೆ ಅಂದಾಜು ವೆಚ್ಚವನ್ನು ಒದಗಿಸಬೇಕು. ತದನಂತರ ತಜ್ಞರ ಸಮಿತಿಯೂ ನಿಮ್ಮ ಐಡಿಯಾವನ್ನು ಪರಿಶೀಲಿಸಿ ಉತ್ತಮ ಐಡಿಯಾವನ್ನು ಆಯ್ಕೆ ಮಾಡುತ್ತದೆ. ಆಯ್ಕೆ ಆದವರಿಗೆ ನಗದು ಬಹುಮಾನ ನೀಡಲಾಗುತ್ತದೆ. ಆ.22ರಿಂದ ಸೆ.15ರವರೆಗೆ ಐಡಿಯಾಗಳನ್ನು ಕಳುಹಿಸಬಹುದು ಎಂದರು.

ಈ 'ಐಡಿಯಾಥಾನ್'ನಲ್ಲಿ ಮೈಸೂರಿನ ಅನೇಕ ಖಾಸಗಿ ಸಂಸ್ಥೆಗಳು ಕೈ ಜೋಡಿಸಿದ್ದು, ಆಯ್ಕೆಗೊಂಡ ಐಡಿಯಾವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಎಲ್ಲಾ ಸಂಸ್ಥೆಗಳೊಟ್ಟಿಗೆ ಚರ್ಚಿಸಿ ಉತ್ತಮ ಐಡಿಯಾವನ್ನು ಆಯ್ಕೆ ಮಾಡಿ ಸಂಸ್ಥೆಗಳ ಸಿಎಸ್‌ಆರ್ ಅನುದಾನದಿಂದ ಅನುಷ್ಠಾನಗೊಳಿಸಲಾಗುತ್ತದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಗಗನ್, ಲೋಕೇಶ್, ರಾಹುಲ್ ಉಪಸ್ಥಿತರಿದ್ದರು.

ಆ.29ರಿಂದ ರಾಜ್ಯದಾದ್ಯಂತ 'ರಿಪ್ಪನ್ ಸ್ವಾಮಿ' ಚಿತ್ರ ಬಿಡುಗಡೆ

ಮೈಸೂರು, ಆ.22(ಜಿಎ)– 'ರಿಪ್ಪನ್ ಸ್ವಾಮಿ' ಚಲನಚಿತ್ರವು ಆ.29ರಂದು ರಾಜ್ಯದಾದ್ಯಂತ ಬಿಡುಗಡೆಯಾಗಲಿದೆ.

ನಟ ವಿಜಯ ರಾಘವೇಂದ್ರ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ವಿಭಿನ್ನ ಕಥಾಹಂದರ ಹೊಂದಿರುವ ಚಿತ್ರ ರಿಪ್ಪನ್ ಸ್ವಾಮಿ ಆಗಿದ್ದು, ಈ ಹಿಂದೆ ನಾನು ಮಾಡಿರುವ ಪಾತ್ರಕ್ಕೂ ಈ ಚಿತ್ರದ ಪಾತ್ರಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಮಲೆನಾಡಿನ ಸೊಗಡಿನೊಂದಿಗೆ ಚಿತ್ರ ಕಥೆಯನ್ನು ನಿರ್ದೇಶಕರು ಬರೆದಿದ್ದಾರೆ. ಬಹುತೇಕ ಚಿತ್ರೀಕರಣ ಮಲೆನಾಡಿನಲ್ಲಿ ಮಾಡಲಾಗಿದೆ ಎಂದರು.

ಬದಲಾವಣೆ ಜಗದ ನಿಯಮ ಎಂಬಂತೆ ನಾನು ಪಾತ್ರಗಳ ಆಯ್ಕೆಯಲ್ಲಿ ಬದಲಾವಣೆ ಕಂಡುಕೊಂಡಿದ್ದೇನೆ. ಲವರ್ ಬಾಯ್ ಆಗಿ ಕಾಣಿಸಿಕೊಳ್ಳುತ್ತಿದೆ. ಈಗ ರಗಡ್ ಲುಕ್ ಮೂಲಕ ಹೊಸ ಪ್ರಯತ್ನ ಮಾಡುತ್ತಿದ್ದೇನೆ. ಈ ಹಿಂದೆ ಬಂದ ಚಿತ್ರಗಳಲ್ಲಿ ಆದ ಪಾತ್ರದ ಬದಲಾವಣೆಗೆ ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

ಚಿತ್ರದ ಟ್ರೈಲರ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಇಂದು ಮೈಸೂರಿನಲ್ಲಿ ಫೇಯ್ಡ್ ಪ್ರಮೋಷನ್ ಆರಂಭಿಸಲಾಗಿದೆ. ಎಲ್ಲಾ ಟಿಕೆಟ್‌ಗಳು ಸೋಲ್ಡ್ ಆಗಿದೆ. ಆ.29ರಂದು ಎಲ್ಲರೂ ಥಿಯೇಟರ್‌ಗೆ ಬಂದು ಚಿತ್ರ ವೀಕ್ಷಿಸಿ ಎಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ನಿರ್ದೇಶಕ ಕಿಶೋರ್ ಮೂಡಬಿದರಿ, ಅಶ್ವಿನಿ ಚಂದ್ರಶೇಖರ್ ಆರ್ಯನ್ ಉಪಸ್ಥಿತರಿದ್ದರು.

ಸೌಜನ್ಯ ಪ್ರಕರಣದ ಮರು ತನಿಖೆಗೆ ಆಗ್ರಹಿಸಿ ಮೈಸೂರಲ್ಲಿ ಕಾಲ್ನಡಿಗೆ ಜಾಥಾ

ನ್ಯಾಯ ಸಿಗುವವರೆಗೆ ಹೋರಾಟದ ಎಚ್ಚರಿಕೆ



ಮೈಸೂರು, ಆ.22(ಎಂಕೆ)– ಧರ್ಮಸ್ಥಳದಲ್ಲಿ ಹತ್ಯೆಯಾದ ಸೌಜನ್ಯ ಕೊಲೆ ಪ್ರಕರಣವನ್ನು ಮರು ತನಿಖೆ ನಡೆಸಿ, ಸತ್ಯಾ–ಸತ್ಯತೆ ಬಯಲು ಮಾಡಿ ಕುಟುಂಬಸ್ಥರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಒತ್ತಾಯಿಸಿ ಭಾರತ ಭೀಮ್ ಸೇನೆ ವತಿಯಿಂದ ಶುಕ್ರವಾರ ಪ್ರತಿಭಟನಾ ಜಾಥಾ ನಡೆಸಲಾಯಿತು.

ಮೈಸೂರಿನ ಟೌನ್‌ಹಾಲ್ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು, ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, 'ಸೌಜನ್ಯ ಸಾವಿಗೆ ನ್ಯಾಯ ಸಿಗಲಿ' ಎಂಬ ಘೋಷಣೆ ಕೂಗುತ್ತಾ ಸಿದ್ಧಾರ್ಥ ನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿವರೆಗೂ ಕಾಲ್ನಡಿಗೆ ಜಾಥಾ ನಡೆಸಿದರು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಾಮಾಜಿಕ ಹೋರಾಟಗಾರ ಹಾಗೂ ನಟ ಚೇತನ್ ಅಹಿಂಸಾ, ಧರ್ಮಸ್ಥಳದ ಸೌಜನ್ಯ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ವರ್ಷಗಳಿಂದ ಹೋರಾಟ ನಡೆಯುತ್ತಿದ್ದು, ಸೌಜನ್ಯ ಹತ್ಯೆಗೆ ಕಾರಣ ಯಾರು? ಎಂಬುದು ಗೊತ್ತಾಗುವವರೆಗೂ ಹೋರಾಟ ಮುಂದುವರೆಯಲಿದೆ. ಸೌಜನ್ಯ ಕುಟುಂಬ ಇನ್ನೂ ಕಣ್ಣೀರಿಡುತ್ತಿದೆ. ಆ ಕುಟುಂಬಕ್ಕೆ ನ್ಯಾಯ ಕೊಡಿಸುವ ಕೆಲಸವಾಗಬೇಕು. ಈ ನಿಟ್ಟಿನಲ್ಲಿ ಎಸ್‌ಐಟಿ ತನಿಖೆ ನಡೆಯುತ್ತಿದ್ದು, ಸತ್ಯಾಸತ್ಯತೆ ಹೊರ ಬರಬೇಕಿದೆ ಎಂದು ಆಗ್ರಹಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಧರ್ಮಸ್ಥಳದಲ್ಲಿ ಅಧರ್ಮ ಮೆರೆಯುತ್ತಿದೆ. ಸೌಜನ್ಯಳಂತಹ ಹೆಣ್ಣು ಮಗಳ ಹತ್ಯೆಯಾಗಿ ದಶಕಗಳೇ ಕಳೆದರೂ ಸತ್ಯಾಂಶ ಹೊರಬಂದಿಲ್ಲ. ಸೌಜನ್ಯಳ ಹತ್ಯೆ ಯಾರು ಮಾಡಿದ್ದಾರೆ ಎಂಬುದು ಬಯಲಾಗಬೇಕು. ಅಲ್ಲಿಯವರೆಗೂ ನಮ್ಮ ಹೋರಾಟ ಮುಂದುವರೆಯಲಿದೆ. ನಾವು ಯಾರ ವಿರುದ್ಧವೂ ಆರೋಪ ಮಾಡುತ್ತಿಲ್ಲ. ಸೌಜನ್ಯ ಸಾವಿಗೆ ಯಾರು ಕಾರಣ ಎಂಬ ಸತ್ಯ ಹೊರಬರಬೇಕು ಎಂದು ಹೇಳಿದರು.

ಭಾರತ ಭೀಮ್ ಸೇನೆಯ ರಾಷ್ಟ್ರೀಯ ಉಪಾಧ್ಯಕ್ಷ ಪ್ರವೀಣ್ ಕುಲ್ಕಿ, ರಾಜ್ಯಾಧ್ಯಕ್ಷ ದಿನೇಶ್, ಮಹಿಳಾ ರಾಜ್ಯಾಧ್ಯಕ್ಷೆ ನೇತ್ರಾವತಿ, ರಾಜ್ಯ ಉಸ್ತುವಾರಿ ಅಧ್ಯಕ್ಷ ನರಸಿಂಹ ಮೂರ್ತಿ, ಅಲ್ಪಸಂಖ್ಯಾತ ವಿಭಾಗದ ರಾಜ್ಯಾಧ್ಯಕ್ಷ ಮೊಹಮದ್ ರಿಜ್ವಾನ್, ರಾಜ್ಯ ಸಂಘಟನಾ ಕಾರ್ಯದರ್ಶಿ ಮಧು, ರಾಜ್ಯ ಪ್ರಧಾನ ಕಾರ್ಯದರ್ಶಿ ಇಮ್ರಾನ್ ಪಾಷ, ಜಿಲ್ಲಾಧ್ಯಕ್ಷ ಯಶವಂತ್, ಜಿಲ್ಲಾ ಮಹಿಳಾಧ್ಯಕ್ಷೆ ಮಹದೇವಮ್ಮ, ಉಸ್ತುವಾರಿ ಅಧ್ಯಕ್ಷೆ ಪ್ರಭಾಮಣಿ, ಕಾರ್ಯಾಧ್ಯಕ್ಷ ರವಿಕುಮಾರ್, ಯುವ ಘಟಕದ ಜಿಲ್ಲಾಧ್ಯಕ್ಷ ನಾಗೇಶ್, ರಾಜ್ಯ ಕಾರ್ಯಾಧ್ಯಕ್ಷ ಎನ್.ಬಸವಣ್ಣ ಮತ್ತಿತರರಿದ್ದರು.

ಧರ್ಮಸ್ಥಳ ಪ್ರಕರಣದಲ್ಲಿ ಎಸ್‌ಐಟಿ ದಿಕ್ಕು ತಪ್ಪಿಸಬೇಡಿ; ಪಾರದರ್ಶಕವಾಗಿ ತನಿಖೆ ನಡೆಯಲು ಅವಕಾಶ ಮಾಡಿಕೊಡಿ

ಮೈಸೂರಲ್ಲಿ ಜನಪರ ಸಂಘಟನೆಗಳ ಆಗ್ರಹ

ಮೈಸೂರು, ಆ.22(ಜಿಎ)–ಧರ್ಮಸ್ಥಳ ಪ್ರಕರಣದಲ್ಲಿ ಎಸ್‌ಐಟಿಯ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಎಸ್‌ಐಟಿ ತನಿಖೆ ಪಾರದರ್ಶಕತೆಯಿಂದ ನಡೆಯಲು ಬಿಡಬೇಕು ಎಂದು ಮೈಸೂರಿನಲ್ಲಿ ಜನಪರ ಸಂಘಟನೆಗಳ ವೇದಿಕೆ ಸದಸ್ಯರು ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಒಡನಾಡಿ, ಪಿಯುಸಿಎಲ್, ರೈತ ಸಂಘ, ದಲಿತ ಚಳವಳಿ, ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಾಗಿನ ಸಂಘಟನೆ ಜಂಟಿಯಾಗಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಒಡನಾಡಿ ಸಂಸ್ಥೆಯ ಸ್ಟಾನ್ಲಿ ಮಾತನಾಡಿ, ಎಸ್‌ಐಟಿ ಯಾವುದೋ ಬೀದಿ ನಾಯಿ ಅಲ್ಲ. ರಣಬೇಟೆ ಆಡಲು ಬಂದಿರುವ ಬೇಟೆಗಾರ. ಕೆಲವು ರಾಜಕಾರಣಿಗಳು, ಮಾಧ್ಯಮಗಳು, ಯೂಟ್ಯೂಬರ್ಸ್‌ಗಳು ಸೇರಿ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಅದು ಖಂಡಿತ ಫಲ ಕೊಡುವುದಿಲ್ಲ ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಒಡನಾಡಿ ಸುಸ್ಥೆಯ ಪರಶು ಮಾತನಾಡಿದರು.

ಮಾಸ್ಕ್‌ಮ್ಯಾನ್ ಯಾರೆಂದು ಬಹಿರಂಗ ಪಡಿಸುವುದು ಅಪರಾಧ. ಆತನಿಗೆ ಜೀವ ಭಯವಿದೆ ಅಂತ ಆತನೇ ಹೇಳಿ ರಕ್ಷಣೆ ಪಡೆದುಕೊಂಡಿದ್ದಾನೆ. ಅಂತಹದರಲ್ಲಿ ಆತನ ಹೆಸರು, ಊರು, ಆತನ ಕುಟುಂಬದವರನ್ನು ಮುನ್ನಲೆಗೆ ತರುವುದು ಸರಿಯಲ್ಲ. ಅಂತಹವರಿಗೆ ಕಾನೂನಿನಲ್ಲಿ ಕಠಿಣ ಶಿಕ್ಷೆ ಇದೆ. ಇದನ್ನು ಅರಿತು ನಾಗರಿಕ ಸಮಾಜ ಸರಿಯಾಗಿ ವರ್ತಿಸಬೇಕು. ಎರಡು ವರ್ಷಗಳ ಹಿಂದೆ ಧರ್ಮಸ್ಥಳದ ಪ್ರಕರಣ ಕುರಿತು ವ್ಯಕ್ತಿ ಒಬ್ಬ ಬಂದು ಮಾಹಿತಿ ನೀಡಿದ್ದ. ಅವರನ್ನು ಈಗ ಎಸ್‌ಐಟಿ ಸಹಾಯವಾಣಿ ಸಂಪರ್ಕಿಸಿ, ಎಸ್‌ಐಟಿ ಅವರಿಗೆ ಒಪ್ಪಿಸಿದ್ದೇವೆ. ಮೊದಲು ಸಂತ್ರಸ್ತರನ್ನು ರಕ್ಷಿಸುವ ಕೆಲಸ ಆಗಬೇಕು, ಸಾಕ್ಷಿ ಹೇಳಲು ಬರುವವರು ಎದೆಗುಂದದಂತೆ ನೋಡಿಕೊಳ್ಳಬೇಕು. ಸೌಜನ್ಯಳಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಒತ್ತಾಯಿಸಿದರು.

ಒಡನಾಡಿ ಪರಶು ಮಾತನಾಡಿ, ಧರ್ಮಸ್ಥಳದ ಬಗ್ಗೆ ಎಲ್ಲರಿಗೂ ಗೌರವವಿದೆ. ಆದರೆ ಅಲ್ಲಿ ನಡೆದಿರುವ ಅಸಹಜ ಸಾವು, ಅನಾಥ ಶವಗಳ ಬಗ್ಗೆ ತನಿಖೆ ನಡೆಯಲಿ. ಸತ್ಯಾಸತ್ಯತೆ ಹೊರ ಬರಲಿ ಅನ್ನೋದು ಎಲ್ಲರ ಆಶಯ. ಹೋರಾಟಗಾರರನ್ನು ಬಂಧಿಸುವಂತ ಪ್ರಕ್ರಿಯೆ ನಡೆಯುತ್ತಿದೆ. ಸತ್ಯಕ್ಕಾಗಿ ನಾವು ಜೈಲಿಗೆ ಹೋಗಲು ಸಿದ್ಧ. ಎಸ್‌ಐಟಿ ತನಿಖೆ ವರದಿ ಬರುವವರೆಗೂ ಎಲ್ಲರೂ ಕಾಯಬೇಕು. ಅದನ್ನು ಬಿಟ್ಟು ನಾವೇ ಜಡ್ಜ್‌ಗಳಂತೆ ಮಾತನಾಡಿ ಯಾರನ್ನು ಎತ್ತಿ ಕಟ್ಟುವ ಕೆಲಸ ಮಾಡಬಾರದು ಎಂದು ತಿಳಿಸಿದರು.

ಧರ್ಮಸ್ಥಳದ ಮೇಲಿನ ಆರೋಪ ಕುರಿತಂತೆ ಈಗ ಧರ್ಮದ ಸೂಕ್ಷ್ಮ ವಿಚಾರ ತಂದು ವಿಷಯದ ಬಗ್ಗೆ ಗೊಂದಲ ಸೃಷ್ಟಿಸುವ ಕೆಲಸ ನಡೆದಿದೆ. ಸೌಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯ ನೀಡಿರುವ ಆದೇಶದಲ್ಲಿ ಆರೋಪಿ ಸಂತೋಷ್ ರಾವ್ ಪ್ರಕರಣಕ್ಕೆ ಸಂಬಂಧಿಸಿದವನಲ್ಲ. ಕೃತ್ಯದಲ್ಲಿ ಒಬ್ಬರಿಗಿಂತ ಹೆಚ್ಚು ಮಂದಿ ಭಾಗಿಯಾಗಿರುವ ಸಾಧ್ಯತೆ ಇದೆ. ಹೀಗಾಗಿ ತನಿಖೆ ವೇಳೆ ತಪ್ಪೆಸಗಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಗಿದೆ. ಆದರೂ ಎರಡು ವರ್ಷವಾದರೂ ಕ್ರಮ ಏಕಿಲ್ಲ, ತಪ್ಪಿತಸ್ಥರನ್ನು ಇನ್ನೂ ಏಕೆ ಗುರುತಿಸಲು ಸಾಧ್ಯವಾಗಿಲ್ಲ? ಎಂದು ಪ್ರಶ್ನಿಸಿದರು.

ಈಗ ಧರ್ಮಸ್ಥಳ ಆರೋಪ ಕುರಿತು ಎಸ್‌ಐಟಿ ರಚನೆ ಆಗಿದೆ. ಭೀಮ ಎಂಬ ಅನಾಮಿಕ ವ್ಯಕ್ತಿಯ ಹೇಳಿಕೆ ಮೇರೆಗೆ ಇದರ ರಚನೆ ಆಗಿದೆ. ಆದರೆ ಎಸ್‌ಐಟಿ ಕೆಲಸ ಆತ ತೋರಿಸಿದ ಕಡೆಯಲ್ಲೆಲ್ಲ ಅಗೆಯುವುದು ಮಾತ್ರವಲ್ಲ, ಹಲವಾರು ವರ್ಷಗಳಿಂದ ಆ ಪ್ರದೇಶದಲ್ಲಿ ನಡೆದ ಅತ್ಯಾಚಾರ, ಆತ್ಮಹತ್ಯೆ, ನೇತ್ರಾವತಿ ನದಿಯಲ್ಲಿ ತೇಲಿ ಬಂದ ಶವ, ಸುತ್ತಮುತ್ತಲಿನ ವಸತಿ ಗೃಹಗಳಲ್ಲಿ ಸತ್ತವರು ಮೊದಲಾದ ಬಗ್ಗೆ ಪೊಲೀಸರು ಕೈಗೊಂಡ ಕ್ರಮ, ನಡೆಸಿದ ಮರಣೋತ್ತರ ಪರೀಕ್ಷೆ, ಶವಗಳನ್ನು ಒಂದರಿಂದ ಎರಡು ವಾರ ಸಂರಕ್ಷಿಸದೇ ತರಾತುರಿಯಲ್ಲಿ ಅದೇ ದಿನಗಳಂದು ಏಕೆ ವಿಲೇವಾರಿ ಮಾಡಿದರು, ಇಂತಹ ಪ್ರಕರಣಗಳನ್ನು ಏಕೆ ಮಾಧ್ಯಮಗಳಿಂದ ಮುಚ್ಚಿಟ್ಟರು? ಎಂಬ ಬಗ್ಗೆಯೂ ಸಮಗ್ರ ತನಿಖೆ ಎಸ್‌ಐಟಿ ಮಾಡಬೇಕೆಂದು ಆಗ್ರಹಿಸಿದರು.

ಹಿರಿಯ ಪತ್ರಕರ್ತ ಕುಮಲ್ ಗೋಪಿನಾಥ್ ಮಾತನಾಡಿ, ಎಸ್‌ಐಟಿ ತನಿಖೆಯನ್ನು ದಾರಿ ತಪ್ಪಿಸುವ ಕೆಲಸ ನಡೆಯುತ್ತಿದೆ. ವರದಿ ಬರುವ ಮೊದಲೇ ತಪ್ಪು ಕಲ್ಪನೆ ಹರಡುವ ಯತ್ನ ಹಲವರಿಂದ ನಡೆದಿದೆ ಎಂದು ದೂರಿದರು.

ಡಾ. ಸಬೀಹಾ ಭೂಮಿಗೌಡ ಮಾತನಾಡಿ, ಧರ್ಮಸ್ಥಳದಲ್ಲಿ ಬಲಿಪಶುಗಳಾದವರಿಗೆ ನ್ಯಾಯ ಸಿಗಬೇಕು. ಆದರೆ, ಈಗ ಒಬ್ಬೊಬ್ಬರೂ ಒಂದೊಂದು ರೀತಿ ಹೇಳಿಕೆ ನೀಡುವ ಮೂಲಕ ಸಮಾಜಕ್ಕೆ ತಪ್ಪು ಸಂದೇಶ ರವಾನಿಸುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ದಲಿತ ಚಳವಳಿ ಮುಖಂಡ ಹರಿಹರ ಆನಂದಸ್ವಾಮಿ, ರೈತ ಸಂಘದ ಹೊಸಕೋಟೆ ಬಸವರಾಜು, ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘಟನೆಯ ಡಾ. ರತಿರಾವ್ ಉಪಸ್ಥಿತರಿದ್ದರು.

ಆನ್‌ಲೈನ್ ಗೇಮಿಂಗ್ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದನೆ

ನವದೆಹಲಿ, ಆ. 22– ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಮಸೂದೆ, 2025 ಅನ್ನು ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದಿಸಿದ್ದಾರೆ. ಅವರ ಒಪ್ಪಿಗೆಯನ್ನು ಪಡೆದ ನಂತರ ಆನ್‌ಲೈನ್ ಗೇಮಿಂಗ್ ಮಸೂದೆ ಅಧಿಕೃತವಾಗಿ ಕಾನೂನಾಗಿ ಮಾರ್ಪಟ್ಟಿದೆ. ಈ ವಾರದ ಆರಂಭದಲ್ಲಿ ಸಂಸತ್ತಲ್ಲಿ ಈ ಶಾಸನವನ್ನು ಮಂಡಿಸಲಾಗಿತ್ತು. ಲೋಕಸಭೆ ಬುಧವಾರ (ಆ.20) ಇದನ್ನು ಅಂಗೀಕರಿಸಿತು ಮತ್ತು ರಾಜ್ಯಸಭೆ ಗುರುವಾರ (ಆ.21) ಅನುಮೋದನೆ ನೀಡಿತು. ಇಂದು ಇದು ಶಾಸನವಾಗಿ ಮಾರ್ಪಟ್ಟಿದೆ.



ಈ ಮಸೂದೆಯನ್ನು ಮಂಡಿಸಿದ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್, ಅಪಾಯಕಾರಿ ಹಣ ಆಧಾರಿತ ಗೇಮಿಂಗ್ ಅಭ್ಯಾಸಗಳನ್ನು ನಿಷೇಧಿಸುವ ಉದ್ದೇಶವನ್ನು ಈ ಮಸೂದೆ ಹೊಂದಿದೆ ಎಂದು ಬಣ್ಣಿಸಿದ್ದರು. ಸಾರ್ವಜನಿಕರ ಮೇಲೆ ಅಪಾಯಕಾರಿ ಪರಿಣಾಮ ಬೀರುತ್ತಿರುವ ಆನ್‌ಲೈನ್ ಹಣದ ಗೇಮಿಂಗ್‌ನ ವಿನಾಶಕಾರಿ ಪರಿಣಾಮಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಈ ಮಸೂದೆಯನ್ನು ಜಾರಿಗೆ ತರಲಾಗುತ್ತಿದೆ ಎಂದಿದ್ದರು.

ಇ–ಸ್ಪೋರ್ಟ್ಸ್ ಮತ್ತು ಆನ್‌ಲೈನ್ ಸಾಮಾಜಿಕ ಗೇಮಿಂಗ್ ಅನ್ನು ಮೇಲ್ವಿಚಾರಣೆ ಮಾಡಲು, ಪ್ರಮಾಣೀಕರಣ, ಸುರಕ್ಷಿತ ಆಟದ ಪರಿಸರಗಳು ಮತ್ತು ವ್ಯವಹಾರಗಳು ಮತ್ತು ಆಟಗಾರರಿಗೆ ಕಾನೂನು ಸ್ಪಷ್ಟತೆಯನ್ನು ಖಚಿತಪಡಿಸಿಕೊಳ್ಳಲು ಮೀಸಲಾದ ನಿಯಂತ್ರಕ ಪ್ರಾಧಿಕಾರಗಳನ್ನು ರಚಿಸಲು ಈ ಕಾನೂನು ಅವಕಾಶ ಒದಗಿಸುತ್ತದೆ. ಇದು ಹಣ ಆಧಾರಿತ ಆನ್‌ಲೈನ್ ಗೇಮಿಂಗ್, ಜಾಹೀರಾತುಗಳು ಮತ್ತು ಅವುಗಳಿಗೆ ಸಂಬಂಧಿಸಿದ ಹಣಕಾಸಿನ ವಹಿವಾಟುಗಳ ಮೇಲೆ ಕಠಿಣ ದಂಡಗಳು ಮತ್ತು ನಿರ್ಬಂಧಗಳನ್ನು ಜಾರಿಗೊಳಿಸಲಾಗುತ್ತದೆ.

ಈ ಕಾನೂನು ಎಲ್ಲಾ ಆನ್‌ಲೈನ್ ಮನಿ ಗೇಮಿಂಗ್ ಸೇವೆಗಳನ್ನು ನಿಷೇಧಿಸುತ್ತದೆ. ತಪ್ಪಿತಸ್ಥರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 1 ಕೋಟಿಯವರೆಗೆ ದಂಡ ವಿಧಿಸುತ್ತದೆ. ಆನ್‌ಲೈನ್ ಗೇಮಿಂಗ್ ರೀತಿಯ ವೇದಿಕೆಗಳನ್ನು ಪ್ರಚಾರ ಮಾಡುವವರಿಗೆ ಎರಡು ವರ್ಷಗಳವರೆಗೆ ಶಿಕ್ಷೆ ಮತ್ತು 50 ಲಕ್ಷದವರೆಗೆ ದಂಡ ವಿಧಿಸಲಾಗುತ್ತದೆ.

ಹಾಸನ ಸಂಸದ ಶ್ರೇಯಸ್ ಪಟೇಲ್ ಆಸ್ತಿ ವಿವರ ಮುಚ್ಚಿಟ್ಟ ಆರೋಪ: ವಿಚಾರಣೆ ಕೈಗೆತ್ತಿಕೊಂಡ ಸುಪ್ರೀಂಕೋರ್ಟ್

ಹಾಸನ, ಆ.22– ಸಂಸದ ಶ್ರೇಯಸ್ ಪಟೇಲ್ ವಿರುದ್ಧದ ಆಸ್ತಿ ವಿವರ ಮುಚ್ಚಿಟ್ಟ ಆರೋಪದ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಕೈಗೆತ್ತಿಕೊಂಡಿದೆ.

ಲೋಕಸಭಾ ಚುನಾವಣೆ ವೇಳೆ ತಮ್ಮ ತಾತ ಮಾಜಿ ಸಂಸದ ಜಿ.ಪುಟ್ಟಸ್ವಾಮಿ ಗೌಡರ ಹೆಸರಿನಲ್ಲಿ ಬೆಂಗಳೂರಿನಲ್ಲಿರುವ ಕೋಟ್ಯಂತರ ರೂ. ಬೆಲೆ ಬಾಳುವ ಆಸ್ತಿ ವಿವರ ಮುಚ್ಚಿಟ್ಟ ಆರೋಪ ಸಂಸದರ ಮೇಲಿದೆ. ಚುನಾವಣೆಗೂ ಮುನ್ನ ತಾತನ ಆಸ್ತಿಗೆ ಸಂಸದರು ತೆರಿಗೆ ಕಟ್ಟಿದ್ದರು. ಈ ಹಿಂದೆ ಆಸ್ತಿ ವಿವರ ಮುಚ್ಚಿಟ್ಟ ಪ್ರಕರಣದಲ್ಲೇ ಸದಸ್ಯತ್ವದಿಂದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅನರ್ಹಗೊಂಡಿದ್ದರು.



ಶ್ರೇಯಸ್ ಪಟೇಲ್ ವಿರುದ್ಧ ಜೆಡಿಎಸ್‌ನಿಂದ ಹೈಕೋರ್ಟ್‌ನಲ್ಲಿ ದಾಖಲಾದ ದೂರು ವಜಾಗೊಂಡಿದ್ದ ಹಿನ್ನೆಲೆ, ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಕೆ ಮಾಡಲಾಗಿದ್ದು, ದೂರು ಸ್ವೀಕಾರ ಮಾಡಿ, ಸುಪ್ರೀಂಕೋರ್ಟ್ ಅರ್ಜಿಯ ವಿಚಾರಣೆಗೆ ಕೈಗೆತ್ತಿಕೊಂಡಿದೆ. ಈ ಬಗ್ಗೆ ಸಂಸದರಿಗೆ ನೋಟಿಸ್‌ನ್ನು ಖುದ್ದಾಗಿ ನಿಡುವುದಾಗಿಯೂ ವಕೀಲರು ತಿಳಿಸಿದ್ದಾರೆ.

ನೋಟಿಸ್ ಅಂಟಿಸಲು ಬಂದಾಗ ವಕೀಲರತ್ತ ತಿರುಗಿ ನೋಡದೆ ಶ್ರೇಯಸ್ ಪಟೇಲ್ ತೆರಳಿದ್ದಾರೆ. ಈ ವೇಳೆ ಗರಂ ಆದ ವಕೀಲರು, ಕೋರ್ಟ್ ಸೂಚನೆಯಂತೆ ನಾನು ಬಂದಿದ್ದೇನೆ. ಯುವ ಸಂಸದರಾಗಿ ಕಾನೂನಿಗೆ ಗೌರವ ಕೊಡಬೇಕಿತ್ತು. ಇವರ ನಡೆ ಹೀಗಿರುತ್ತೆ ಎಂದು ನಿರೀಕ್ಷೆ ಮಾಡಿರಲಿಲ್ಲ. ಸಂಸದರು ತಮ್ಮ ನಡೆ ಬದಲಾಯಿಸಿಕೊಳ್ಳಬೇಕು. ಸಂಸದರು ವಕೀಲ ಸಮುದಾಯಕ್ಕೆ ಅವಮಾನ ಮಾಡಿದ್ದಾರೆ. ನೋಟಿಸ್ ಸ್ವೀಕಾರ ಮಾಡದೆ ಹೋದರೆ ಬೇಡ ಎನ್ನಬೇಕಿತ್ತು ಎಂದು ಕಿಡಿಕಾರಿದ್ದಾರೆ.

ನಾಳೆ ವಿಶ್ವಕರ್ಮ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ

ಮೈಸೂರು, ಆ.22(ಜಿಎ)–ಮೈಸೂರಿನ ವಿಶ್ವಕರ್ಮ ಪತ್ತಿನ ಸಹಕಾರ ಸಂಘದ 21ನೇ ವಾರ್ಷಿಕ ಮಹಾಸಭೆಯನ್ನು ಆ.24ರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2ರವರೆಗೆ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ನಿರ್ದೇಶಕ ಎಂ.ಮೋಗಣ್ಣಾಚಾರ್ ಈ ವಿಷಯ ತಿಳಿಸಿ, ಸದಸ್ಯರೆಲ್ಲರಿಗೂ ಆಹ್ವಾನ ಪತ್ರಿಕೆ ಯನ್ನು ಅಂಚೆ ಮೂಲಕ ಕಳಿಸಲಾಗಿದೆ. ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳನ್ನು ಲಿಖಿತ ರೂಪದ ಮೂಲಕ ಏಳು ದಿನ ಮುಂಚಿತವಾಗಿ ಸಂಘದ ಕಾರ್ಯದರ್ಶಿಗೆ ನೀಡಬೇಕು. ಇದಲ್ಲದೆ ಸಮುದಾಯದವರು ಸದಸ್ಯತ್ವ ಪಡೆದು, ವಿವಿಧ ಸೌಲಭ್ಯ ಪಡೆಯಬೇಕೆಂದು ಕೋರಿದರು. ವಿಶ್ವಕರ್ಮ ಸಮುದಾಯ ಎಲ್ಲಾ ರೀತಿಯಲ್ಲೂ ಹಿಂದು ಳಿದಿದೆ. ಹೀಗಾಗಿ ಸರ್ಕಾರ ಅಗತ್ಯ ಮೀಸಲಾತಿ ಕಲ್ಪಿಸಬೇಕೆಂದು ಒತ್ತಾಯಿಸಿದರು. ಸುದ್ದಿ ಗೋಷ್ಠಿಯಲ್ಲಿ ಅಧ್ಯಕ್ಷ ಜಯರಾಮಾಚಾರ್, ಕೆ.ಪಿ.ಶ್ರೀಕಾಂತ ಆಚಾರ್, ಮಂಜುನಾಥ, ಲತಾ ಉಪಸ್ಥಿತರಿದ್ದರು.

ಡಿಸಿಇಟಿ: ಅಂತಿಮ ಸುತ್ತಿನ ಫಲಿತಾಂಶ ಪ್ರಕಟ

ಬೆಂಗಳೂರು, ಆ.22–ಪ್ರಸಕ್ತ ಸಾಲಿನ ಡಿಸಿಇಟಿ ಮೂರು ಹಾಗೂ ಅಂತಿಮ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶುಕ್ರವಾರ ಪ್ರಕಟಿಸಿದೆ.

ಆ.25ರಿಂದ 27ರವರೆಗೆ ಚಲನ್ ಡೌನ್‌ಲೋಡ್ ಮಾಡಿಕೊಂಡು, ಆ.28ರೊಳಗೆ ಶುಲ್ಕ ಪಾವತಿಸುವುದು. ಕಾಷನ್ ಡೆಪಾಸಿಟ್ ಕಟ್ಟಿದವರ ಹಣವನ್ನು ಶುಲ್ಕದ ಜತೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸೀಟು ಖಾತರಿ ಚೀಟಿಯನ್ನು ಆ.29ರೊಳಗೆ ಡೌನ್‌ಲೋಡ್ ಮಾಡಿಕೊಂಡು ಆ.30ರೊಳಗೆ ಸಂಬಂಧಪಟ್ಟ ಕಾಲೇಜುಗಳಿಗೆ ವರದಿ ಮಾಡಿಕೊಳ್ಳಬೇಕು ಎಂದು ಪ್ರಾಧಿಕಾರ ಮಾಹಿತಿ ನೀಡಿದೆ. ಕೊನೆ ಸುತ್ತಿನಲ್ಲಿ ಒಟ್ಟು 860 ಮಂದಿಗೆ ವಿವಿಧ ವಿಭಾಗಗಳಿಗೆ ಸೀಟು ಹಂಚಿಕೆ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ನಗರ ವಿಭಾಗ (ಜೆ.ಎನ್.ನರ್ಮ್), ಜಲಭವನ, 2ನೇ ಮಹಡಿ ಸರಸ್ವತಿಪುರಂ,
ಮೈಸೂರು–570009 ದೂರವಾಣಿ : 0821– 2411463
ಇ–ಮೇಲ್: kwbmysjnee@gmail.com

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಈ ಕಛೇರಿಯಿಂದ, ಮುಖ್ಯ ಅಭಿಯಂತರರು, ಕನನೀಸ ಮತ್ತು ಒ.ಚ. ಮಂಡಳಿ, ಮೈಸೂರು ವಲಯ, ಮೈಸೂರು ವ್ಯಾಪ್ತಿಯಲ್ಲಿರುವ ಕಛೇರಿಗೆ ಅಗತ್ಯವಿರುವ 2 ಸಂಖ್ಯೆ ಸಿವಿಲ್ ಇಂಜಿನಿಯರ್ ಪದವೀಧರ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಸರ್ವಿಸ್ ಟೆಂಡರ್‌ನ್ನು (CALL-2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ರಲ್ಲಿ ಕರೆಯಲಾಗಿದ್ದು, ಟೆಂಡರಿಗಿಟ್ಟ ಮೊತ್ತ, ಶುಲ್ಕ, ಷರತ್ತು, ಇತರೆ ಹೆಚ್ಚಿನ ಮಾಹಿತಿಗೆ https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರು,
ಕ.ನ.ನೀ.ಸ. ಮತ್ತು ಒ.ಚ. ಮಂಡಳಿ
ನಗರ ವಿಭಾಗ (ಜೆ.ಎನ್.ನರ್ಮ್),ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406, ಮೈಸೂರು–570 005

ಸಂಖ್ಯೆ:ಡಿವಿ3/102/Appointment/2025–26 ದಿನಾಂಕ: 21.08.2025

ಪ್ರಕಟಣೆ

"ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಬಹುಮಾಧ್ಯಮ ಕೇಂದ್ರ (ಇಎಂಆರ್‌ಸಿ) ನಿರ್ದೇಶಕರ ಹುದ್ದೆಗೆ ನೇಮಕ ಮಾಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು **ದಿನಾಂಕ: 22/08/2025 ರಿಂದ 11/09/2025ರವರೆಗೆ** ಆಹ್ವಾನಿಸಲು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಇದರ ಸಂಪೂರ್ಣ ಮಾಹಿತಿ ಮತ್ತು ಅರ್ಜಿಯ ನಮೂನೆ ಬಗೆಗಿನ ವಿವರವು ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್ **www.uni-mysore.ac.in** ನಲ್ಲಿ ಲಭ್ಯವಿರುತ್ತದೆ. ಆಸಕ್ತ ಅಭ್ಯರ್ಥಿಗಳು ವಿವರಗಳನ್ನು ಮತ್ತು ನಿಗದಿತ ಅರ್ಜಿ ನಮೂನೆಗಳನ್ನು ಮೇಲ್ಕಂಡ ವೆಬ್‌ಸೈಟ್‌ನಿಂದ ಪಡೆಯಬಹುದಾಗಿರುತ್ತದೆ".

ವಿಶೇಷ ಸೂಚನೆ: ನಿಗದಿಪಡಿಸಲಾದ ದಿನಾಂಕದಲ್ಲಿ ವ್ಯತ್ಯಾಸವಾದಲ್ಲಿ ಬದಲಾವಣೆಯ ದಿನಾಂಕದ ಬಗ್ಗೆ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಹೊರಡಿಸಲಾಗುವುದು. ಆಸಕ್ತರು ಇದನ್ನು ಗಮನಿಸಬಹುದು.

ಸಹಿ/– ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ವಾಸಾಸಂಇ/ಮೈಸೂರು/ಶಿರಡಿಸಾಯಿ/836/2025–26

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು